
ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಕೂಡಲಿ ಚಿದಂಬರಂ

## ಹೊರೆಯಾಲ ದೊರೆಸ್ವಾಮಿ

ಕನ್ನಡ ಪುಸ್ತಕ ಪ್ರಾಧಿಕಾರ

# ಕೂಡಲಿ ಚಿದಂಬರಂ

**KUDALI CHIDAMBARAM** : A Monograph on Kudali Chidambaram Written by: Horeyala Doreswamy Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 113
Copies : 1000
Price : ₹ 60.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೧೧೩
ಪ್ರತಿಗಳು : ೧೦೦೦
ಬೆಲೆ : ₹ ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
ಮೆ॥ ಪ್ರಿಂಟ್ ಪಾರ್ಕ್
೧೪೬೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜಿ. ಎನ್.ಶ್ಯಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಡಿಸಲಾಯಿತು. ಈ ಮಾಲೆಯ ಪುಸ್ತಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ

ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ, ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ

ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

ಶ್ರೇಷ್ಠಮಟ್ಟದ ಕನ್ನಡ ಗ್ರಂಥಗಳನ್ನು ನಾಡಿಗೆ ನೀಡಿದ 'ಕಾವ್ಯಾಲಯ' ಪ್ರಕಟಣಾ ಸಂಸ್ಥೆಯ ರೂವಾರಿಯಾದ ಕೂಡಲಿ ಚಿದಂಬರಂ ಅವರ ಜೀವನ-ಸಾಧನೆ ಕುರಿತಾದ ಪುಸ್ತಕವೊಂದನ್ನು ಬರೆಯಲು ಅವಕಾಶ ಸಿಕ್ಕಿದ್ದು ನನ್ನ ಸಾಹಿತ್ಯಿಕ ಜೀವನದ ಸಾರ್ಥಕಗಳಲ್ಲಿ ಒಂದೆಂದು ಭಾವಿಸಿದ್ದೇನೆ. ಚಿಕ್ಕಂದಿನಲ್ಲಿ ನನ್ನ ತಂದೆಯವರೊಂದಿಗೆ ಒಂದೆರಡು ಬಾರಿ ನೋಡಿದ, ಕ್ಷಚಿತ್ತಾಗಿ ಮಾತನಾಡಿಸಿದ ಆ ಹಿರಿಯ ಚೇತನವನ್ನು ಈ ಮೂಲಕ ನೆನಪಿಸಿಕೊಳ್ಳಲು ಸಾಧ್ಯವಾದುದು ನಿಜಕ್ಕೂ ಸಂತೋಷದ ಸಂಗತಿಯೇ.

ಈ ಕೃತಿ ರಚಿಸಲು ನಾನು ವಿಶೇಷವಾಗಿ ಅವಲಂಬಿಸಿದ್ದು ಚಿದಂಬರಂ ಅವರ ಮಕ್ಕಳನ್ನು. ಬೆಂಗಳೂರಿನಲ್ಲಿರುವ ಸಿ.ಕೆ. ನಾಗರಾಜ್, ಕರ್ನಲ್ ಸಿ.ಕೆ. ಶೇಷಾದ್ರಿ, ಸಿ.ಕೆ. ಪ್ರಭಾ ಅವರಲ್ಲದೆ, ಮೈಸೂರಿನಲ್ಲಿ ಈಗ 'ಕವ್ಯಾಲಯ'ದ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ಸಿ.ಕೆ. ಕೃಷ್ಣಮೂರ್ತಿ ಹೆಚ್ಚಿನ ಆಸ್ಥೆಯಿಂದ ನನಗೆ ಮಾಹಿತಿ ನೀಡಿದ್ದಾರೆ; ಚಿದಂಬರಂ ಅವರನ್ನು ಕುರಿತ ಬರಹಗಳನ್ನು ಒದಗಿಸಿದ್ದಾರೆ; ಚಿತ್ರಗಳನ್ನು ಸಂಗ್ರಹಿಸುವಲ್ಲಿ ನೆರವಾಗಿದ್ದಾರೆ; ಸಂಪರ್ಕಿಸಬೇಕಾದ ವ್ಯಕ್ತಿ, ಸಂಘ ಸಂಸ್ಥೆಗಳನ್ನು ಪರಿಚಯಿಸಿದ್ದಾರೆ. ಅದರಲ್ಲೂ ಕೃಷ್ಣಮೂರ್ತಿಯವರ ಸೌಜನ್ಯಪೂರಿತ ಸಹಕಾರ ಮಿಗಿಲಾದುದು. ಹಾಗೆಯೇ, ಶಿವಮೊಗ್ಗ ಕರ್ನಾಟಕ ಸಂಘದ ಗೌ|| ಕಾರ್ಯದರ್ಶಿ ಗಳಾದ ಹೆಚ್.ಡಿ. ಉದಯಶಂಕರ ಶಾಸ್ತ್ರಿ ಅವರು 'ವಿಚಾರ ವಾಹಿನಿ' ಸಂಚಿಕೆ ಒದಗಿಸಿ (ಜಾರಚ್ಚಿನ ಪ್ರತಿ), ನನ್ನ ಕೆಲಸಕ್ಕೆ ಇಂಬು ನೀಡಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರವು ಹೊರತರುತ್ತಿರುವ ಆ ಕನ್ನಡ ಕಟ್ಟಿದವರು ಟಿ ಮಾಲಿಕೆ ಯಡಿಯಲ್ಲಿ ಈ ಪುಸ್ತಕವನ್ನು ಸಿದ್ಧಪಡಿಸಲು ನನಗೆ ಅವಕಾಶ ಮಾಡಿಕೊಟ್ಟ ಕನ್ನಡ ಸಾಹಿತ್ಯ-ಸಂಸ್ಕೃತಿಯ ಚಿಂತಕರೂ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆದ ಡಾ|| ಸಿದ್ಧಲಿಂಗಯ್ಯ ಅವರಿಗೂ, ಪ್ರಾಧಿಕಾರದ ಎಲ್ಲ ಸದಸ್ಯರಿಗೂ, ಆಡಳಿತಾಧಿಕಾರಿ ಗಳಿಗೂ ಹಾಗೂ ಸಿಬ್ಬಂದಿವರ್ಗದವರಿಗೂ ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿದ. ಮೆ|| ಪ್ರಿಂಟ್‌ಪಾರ್ಕ್‌ನ ಮಾಲೀಕರು ಮತ್ತು ಕಾರ್ಮಿಕ ವರ್ಗದವರಿಗೂ ನನ್ನ ಗೌರವ ಪೂರ್ವಕ ನಮನಗಳು.

ಕನ್ನಡ ಓದುಗ ವೃಂದಕ್ಕೆ ಇದೊಂದು ಆದರಣೀಯ ಕೊಡುಗೆ. ಹೇಗೆ ಸ್ವೀಕರಿಸುತ್ತಾರೊ ಎಂಬುದು ಕುತೂಹಲ.

17.03.2010ರ ಬುಧವಾರ

ಹೊರೆಯಾಲ ದೊರೆಸ್ವಾಮಿ
ಮೈಸೂರು 270 023.

# ಅನುಕ್ರಮಣಿಕೆ


| | |
|---|---|
| ಪ್ರಸ್ತಾವನೆ | ೧ |
| ಹುಟ್ಟುಬಾಲ್ಯ ವಿದ್ಯಾಭ್ಯಾಸ | ೪ |
| ಉದ್ಯೋಗ | ೭ |
| ಮದುವೆ ಮಕ್ಕಳು | ೯ |
| ಕನ್ನಡದತ್ತ ಒಲವು | ೧೧ |
| ಕರ್ನಾಟಕ ಸಂಘ – ಚಿದಂಬರಂ ನಂಟು | ೧೩ |
| ವಿಚಾರವಾಹಿನಿ | ೧೬ |
| ಶಿವಮೊಗ್ಗದಲ್ಲಿ ಕಾರ್ಯಾಲಯ | ೨೦ |
| ಮೈಸೂರಿನಲ್ಲಿ ಕಾರ್ಯಾಲಯ | ೨೨ |
| ನೆಲೆ–ಬದುಕು ಬವಣೆ | ೨೪ |
| ಪೂರ್ಣಾವಧಿ ಕಾರ್ಯಾಲಯ | ೨೬ |
| ಪುಸ್ತಕ ಮಾರಾಟ | ೩೩ |
| ಸಂಭಾವನೆ | ೩೮ |
| ಲೇಖಕರೊಂದಿಗೆ ಸ್ನೇಹಸಂಬಂಧ | ೬೦ |
| ಶಿಸ್ತು | ೬೪ |
| ಕುಟುಂಬದ ಸಹಕಾರ | ೬೭ |
| ವ್ಯಕ್ತಿ ವೈಶಿಷ್ಟ್ಯ | ೭೧ |
| ಅನಾರೋಗ್ಯ–ಕೊನೆಯ ದಿನಗಳು | ೭೪ |
| ಸಮಾರೋಪ | ೭೬ |
| ಅನುಬಂಧ | ೮೦ |
| ಛಾಯಾಚಿತ್ರಗಳು | ೧೦೮ |

# ಪ್ರಸ್ತಾವನೆ

ಕನ್ನಡಿಗರಿಗೆ ಗುಣಮಟ್ಟದ ಸಾಹಿತ್ಯ ಕೃತಿಗಳನ್ನು ನೀಡಬೇಕೆಂಬ ಸದಾಶಯದಿಂದ ಜನ್ಮತಳೆದ ಮೈಸೂರಿನ 'ಕಾವ್ಯಾಲಯ' ಪ್ರಕಾಶನ ಸಂಸ್ಥೆಯು ಅದರ ಸಂಸ್ಥಾಪಕ ಕೂಡಲಿ ಚಿದಂಬರಂ ಅವರ ಅವಿರತ ಶ್ರಮ, ಶ್ರದ್ಧೆಯ ಫಲವಾಗಿ ಬೆಳೆದು ನಿಂತಿದೆ. ಕನ್ನಡ ಸಾಹಿತ್ಯ-ಸಂಸ್ಕೃತಿ ಬಗೆಗೆ ಅದಮ್ಯ ಪ್ರೀತಿಯನ್ನು ಹೊಂದಿ, ಅದನ್ನು ಸಾಕಾರಗೊಳಿಸುವಲ್ಲಿ ಅವರು ಮೆರೆದ ಗ್ರಂಥ ಸಾಹಸ ನಿಜಕ್ಕೂ ಗೌರವಾರ್ಹ ವಾದುದೇ ಆಗಿದೆ. ಬಡತನದ ತೆಕ್ಕೆಯಲ್ಲಿ ಸಿಕ್ಕಿ ನಲುಗುತ್ತಿದ್ದರೂ ಗುರಿಸಾಧನೆಯ ಛಲವದಿಂದ ಮುನ್ನಡೆದ ಚಿದಂಬರಂ ಅವರ ವ್ಯಕ್ತಿತ್ವ ಯಾವುದೇ ಕ್ಷೇತ್ರದ ಸಾಧಕನಿಗೂ ಮಾದರಿಯಾದುದೇ.

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕ್ರೈಸ್ತಧರ್ಮ ಪ್ರಚಾರಕರಿಂದ ಕನ್ನಡ ನಾಡಿನಲ್ಲಿ ಅಡಿಯಿಟ್ಟ ಮುದ್ರಣ ಯಂತ್ರಗಳು ಮೊದಮೊದಲು ಕ್ರೈಸ್ತಧರ್ಮೀಯ ಕೃತಿಗಳನ್ನು ಅಚ್ಚಿಸಿದರೂ, ಕ್ರಮೇಣ ಕನ್ನಡ ಸಾಹಿತ್ಯ ಕೃತಿಗಳನ್ನೂ ಅಚ್ಚಿಸತೊಡಗಿದವು. ಹಳೆಗನ್ನಡ ಸಾಹಿತ್ಯ, ಶಾಸನ, ಇತಿಹಾಸ, ನಿಘಂಟು, ಶಾಸ, ಜಾನಪದ, ಧಾರ್ಮಿಕ ಈ ಮುಂತಾದ ವಿಷಯಗಳಿಗೆ ಸಂಬಂಧಿಸಿದ ನೂರಾರು ಗ್ರಂಥಗಳು ಕನ್ನಡದಲ್ಲಿ ಹೊರಬರತೊಡಗಿದವು. ಈ ದಿಕ್ಕಿನಲ್ಲಿ ಕ್ರೈಸ್ತ ಧರ್ಮ ಪ್ರಚಾರಕರ ಪಾತ್ರ ಗಮನಾರ್ಹವಾದುದು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಉತ್ತೇಜಿಸುವಲ್ಲಿ ಅವರು ನಡೆಸಿದ ಕಾರ್ಯಕ್ರಮಗಳು ಶ್ಲಾಘನೀಯವಾದುದೇ ಆಗಿವೆ. ಈ ಹೊತ್ತಿನಲ್ಲೇ ಬ್ರಿಟಿಷ್ ಪ್ರಭುತ್ವದ ನೇತೃತ್ವದಲ್ಲಿ ಇಂಗ್ಲಿಷ್ ಭಾಷೆಯ ಮೂಲಕ ಆಧುನಿಕ ಶಿಕ್ಷಣ ಪದ್ಧತಿ ದೇಶದಲ್ಲಿ ಜಾರಿಗೆ ಬರುತ್ತಿದ್ದ ಹಾಗೆ ದೇಶೀಯ ಭಾಷೆ ಕನ್ನಡದಲ್ಲೂ ಜಾರಿಯಾಗತೊಡಗಿತು. (ಈ ಮಾತು ಭಾರತದ ಬೇರೆಬೇರೆ ಪ್ರಾಂತದ ಭಾಷೆಗಳಿಗೂ ಅನ್ವಯಿಸುತ್ತದೆ). ಅದಕ್ಕೆ ಪೂರಕವಾಗಿ ಕನ್ನಡದಲ್ಲೂ ಪುಸ್ತಕಗಳು ಪ್ರಕಟಗೊಳ್ಳತೊಡಗಿದವು. ಕನ್ನಡ ಲೇಖಕರ- ವಿದ್ವಾಂಸರ ಸಂಖ್ಯೆಯೂ ಹೆಚ್ಚತೊಡಗಿತು. ಈ ರೀತಿ ಎರಡೂ ಬಗೆಯ ಪ್ರಭಾವಗಳಿಂದ ಕನ್ನಡ ಪುಸ್ತಕ ಪ್ರಕಟಣೆ ಪ್ರಾರಂಭವಾಯಿತೆನ್ನುವುದು ಈಗ ಇತಿಹಾಸದ ಸಂಗತಿಯೇ ಆಗಿದೆ.

ಇದೇ ಕಾಲದಲ್ಲಿ ಮೈಸೂರು ಸಂಸ್ಥಾನದ ಪ್ರಧಾನ ಕೇಂದ್ರವಾಗಿದ್ದ ಮೈಸೂರಿನಲ್ಲಿ ಅಚ್ಚುಕೂಟಗಳು ಪ್ರಾರಂಭಗೊಂಡು ಕನ್ನಡ ಪುಸ್ತಕಗಳ ಪ್ರಕಟಣೆಗೆ ಮುಂದಾದುದು ಸರಿಯೇಸರಿ.

ಆನಂತರ, ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮೋಕ್ಷಗೊಂಡಂ ವಿಶ್ವೇಶ್ವರಯ್ಯನವರ ಮುತ್ಸದ್ದಿತನದಿಂದಾಗಿ ೧೯೧೬ರಲ್ಲಿ ಮೈಸೂರಿನಲ್ಲಿ ವಿಶ್ವವಿದ್ಯಾನಿಲಯ ಆರಂಭಗೊಂಡಿತು. ಅದು ಉನ್ನತ ಶಿಕ್ಷಣಕ್ಕೆ ಒತ್ತು ನೀಡಿದಂತೆ ಕನ್ನಡ ಸಾಹಿತ್ಯದ ಏಳ್ಗೆಗೂ ಬೆನ್ನೆಲುಬಾಯಿತು. ಕನ್ನಡದ ವಾತಾವರಣ ಕಳೆಗಟ್ಟಿತು. ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ಸತತ ಪರಿಶ್ರಮದಿಂದ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಸಂಗತಿ ೧೯೨೭ರಲ್ಲಿ ಪ್ರಾರಂಭಗೊಂಡಿತು. ಇದೂ ಒಂದು ಕಾರಣವಾಗಿ ಕನ್ನಡ ವಿದ್ವತ್ ಪರಂಪರೆ ಬೆಳೆಯತೊಡಗಿತು. ಲೇಖಕರ ಸಂಖ್ಯೆ ಬಹುಳಗೊಂಡಿತು. ಟಿ.ಎಸ್. ವೆಂಕಣ್ಣಯ್ಯ, ಬಿ.ಎಂ. ಶ್ರೀಕಂಠಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಕೆ. ವೆಂಕಟರಾಮಪ್ಪ ಎನ್. ಅನಂತ ರಂಗಾಚಾರ್, ಕೆ. ಕೃಷ್ಣಮೂರ್ತಿ, ಕ.ವೆಂ. ರಾಘವಾಚಾರ್, ತ.ಸು. ಶಾಮರಾವ್ ಈ ಮುಂತಾದ ವಿದ್ವಾಂಸರಲ್ಲದೆ ಎಸ್.ವಿ. ರಂಗಣ್ಣ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು.ತಿ. ನರಸಿಂಹಾಚಾರ್, ಕೆ.ವಿ. ಪುಟ್ಟಪ್ಪ ಅಜ್ಜಂಪುರ ಸೀತಾರಾಂ (ಆನಂದ) ಎಸ್.ವಿ. ಪರಮೇಶ್ವರ ಭಟ್ಟ, ಹೊಯಿಸಳ, ಗೋಪಾಲಕೃಷ್ಣ ಅಡಿಗ, ತ.ರಾ.ಸು. - ಈ ಮುಂತಾದ ಸೃಜನಾತ್ಮಕ ಲೇಖಕರು ಮೈಸೂರನ್ನೇ ಕೇಂದ್ರವನ್ನಾಗಿ ಹೊಂದಿದ್ದರು. ಈ ಎಲ್ಲ ಕಾರಣದಿಂದ ಮೈಸೂರು ಕನ್ನಡ ಪುಸ್ತಕಗಳ ಪ್ರಕಟಣೆಗೆ ತೌರೂರೆನಿಸಿತು. ಆದುದರಿಂದಲೇ ಮೈಸೂರಿನಲ್ಲಿ ವಿದ್ಯಾನಿಧಿ ಬುಕ್ ಡಿಪೊ, (ವೆಂಕಟರಮಣಯ್ಯ ಅಂಡ್ ಸನ್ಸ್), ಪ್ರೋಗ್ರೆಸ್ ಬುಕ್ ಸ್ಟಾಲ್, ಸತ್ಯಶೋಧನ ಪ್ರಕಟಣಾಲಯ, ಶಾರದಾ ಮಂದಿರ, ಉಷಾ ಸಾಹಿತ್ಯ ಮಾಲೆ, ತ.ವೆಂ. ಸ್ಮಾರಕ ಗ್ರಂಥಮಾಲೆ, ಪೀಪಲ್ಸ್ ಬುಕ್ ಹೌಸ್, ಗೀತಾ ಬುಕ್ ಹೌಸ್ ಈ ಮೊದಲಾದ ಖಾಸಗಿ ಪುಸ್ತಕ ಪ್ರಕಟಣಾ ಸಂಸ್ಥೆಗಳು ಮೈಸೂರಿನಲ್ಲಿ ಹುಟ್ಟಿಕೊಂಡವು. ಇವುಗಳೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಬೃಹತ್ ಪ್ರಮಾಣದಲ್ಲಿ ಕನ್ನಡ ಪುಸ್ತಕಗಳ ಪ್ರಕಟಣೆಗೆ ಅಡಿಯಿಟ್ಟಿತು. ಈ ಹಿನ್ನೆಲೆಯಲ್ಲಿ ಕೂಡಲಿ ಚಿದಂಬರಂ ಅವರ ನೇತೃತ್ವದ ಕಾವ್ಯಾಲಯ ಮೈಸೂರಿನಲ್ಲಿ ತಳವೂರಿತೆನ್ನಬಹುದು.

ಶಿವಮೊಗ್ಗದಲ್ಲಿ ಹವ್ಯಾಸಿ ಪ್ರಕಾಶಕರಾಗಿ ಪುಸ್ತಕೋದ್ಯಮವನ್ನು ಕೆ.ವಿ. ಪುಟ್ಟಪ್ಪ ಮತ್ತು ದೇವಂಗಿ ಮಾನಪ್ಪ ಅವರ ಬೆಂಬಲದಿಂದ ಪ್ರಾರಂಭಿಸಿದ ಕೂಡಲಿ ಚಿದಂಬರಂ ಅವರು ಮೈಸೂರಿನಲ್ಲಿ ಒಬ್ಬ ಯಶಸ್ವಿ ಪ್ರಕಾಶಕರಾಗಿ ಪರಿವರ್ತನೆ ಹೊಂದಿದ್ದಕ್ಕೆ ಅವರ ನಿರಂತರ ಪುಸ್ತಕ ಪ್ರೇಮ, ಶ್ರದ್ಧೆ ಮತ್ತು ಆತ್ಮವಿಶ್ವಾಸವಲ್ಲದೆ ಬೇರೇನೂ ಅಲ್ಲ. ಅಪಾರವಾದ ಹಣಕಾಸಿನ ಕೊರತೆಯಿದ್ದರೂ ಅದನ್ನು ಚತುರತೆಯಿಂದ ತುಂಬಿ ಕೊಳ್ಳುತ್ತ ಕನ್ನಡ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ಅವರು ನೆಲೆನಿಂತ ಬಗೆ ಆಶ್ಚರ್ಯಕರವಾದರೂ ವಾಸ್ತವಿಕವೇ ಹೌದು. ಅದಕ್ಕಾಗಿ ಅವರು ನಡೆಸಿದ ಅನೇಕ ಪ್ರಕಟಣಾ ಪ್ರಯೋಗಗಳು ಆ ಕ್ಷೇತ್ರದಲ್ಲಿ ಅವರಿಗೊಂದು ಗಣ್ಯಸ್ಥಾನವನ್ನು ತಂದುಕೊಟ್ಟಿವೆ. 'ಕಾವ್ಯಾಲಯ' ಒಂದು ವ್ಯಕ್ತಿಯಾಗಿ, ಚಿದಂಬರಂ ಒಂದು ಸಂಸ್ಥೆಯಾಗಿ ನಡೆದು ಕೊಂಡು ಬಂದದ್ದೇ ಪ್ರಕಾಶನದ ಯಶಸ್ಸಿನ ರಹಸ್ಯ. ಲೇಖಕರನ್ನು ಒತ್ತಾಯಿಸಿ ಬರೆಸಿದರು; ಬರೆಯಬಲ್ಲವರನ್ನು

ಗುರುತಿಸಿದರು. ಪ್ರಕಾಶನ ಸಂಸ್ಥೆಯನ್ನು ಅವರು ಕೇವಲ ವ್ಯವಹಾರವನ್ನಾಗಿ ಪರಿಗಣಿಸಲಿಲ್ಲ. ಹಾಗಿದ್ದರೆ ಅವರು ಪ್ರಕಟಿಸಿದ ಎಷ್ಟೋ ಪುಸ್ತಕಗಳು ಬೆಳಕಿಗೆ ಬರುವುದು ಸಾಧ್ಯವಿರಲಿಲ್ಲ. ಕೆ.ವಿ. ಪುಟ್ಟಪ್ಪ ಡಿ.ವಿ. ಗುಂಡಪ್ಪ ಪು.ತಿ. ನರಸಿಂಹಾಚಾರ್, ಆನಂದ, ರಾಳ್ಳಪಲ್ಲಿ ಅನಂತರ ಕೃಷ್ಣ ಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದ ಅನೇಕರ ಪುಸ್ತಕಗಳು ಕಾವ್ಯಾಲಯದಲ್ಲೇ ಮೊದಲು ಪ್ರಕಟವಾದವು. ಮುದ್ರಣ ವಿನ್ಯಾಸಗಳಲ್ಲಿ ಚಿದಂಬರಂ ಅವರು ಒಂದು ಬಗೆಯ – ಕನ್ಸರ್‌ವೇಟಿವ್ – ಧೋರಣೆಯನ್ನೇ ಅನುಸರಿಸಿದರೆಂದು ಹೇಳಬೇಕು. ಪುಸ್ತಕಗಳಿಗೆ ಮುಖಚಿತ್ರ ಉಡಿಸುವ ಸಂಪ್ರದಾಯವನ್ನು ಕಾವ್ಯಾಲಯ ಪ್ರಾರಂಭಿಸಿದ್ದು ಈಚಿನ ವರ್ಷಗಳಲ್ಲಿ, ಮೇಲ್ಮಟ್ಟದ ಅಭಿರುಚಿ, ನೇರವಾದ ವ್ಯವಹಾರ ಚಿದಂಬರಂ ಅವರ ವೈಶಿಷ್ಟ್ಯ[೧] ಎಂಬ ಹಾ.ಮಾ. ನಾಯಕರ ಮಾತುಗಳು ಕೂಡಲಿ ಚಿದಂಬರಂ ಅವರ ವ್ಯಕ್ತಿತ್ವವನ್ನೂ ಪುಸ್ತಕ ಪ್ರಕಟಣೆಯಲ್ಲಿ ಅವರಿಗಿದ್ದ ಬದ್ಧತೆಯನ್ನೂ ಬೇರೆ ಲೇಖಕರ ಬಗ್ಗೆ ಅವರಿಗಿದ್ದ ಗೌರವಾದರಗಳನ್ನೂ ಸ್ಪಷ್ಟವಾಗಿ ತಿಳಿಸುತ್ತವೆ.

■

---

೧. ಸಂಪರ್ಕ : ಲೇಖಕ – ಹಾ.ಮಾ. ನಾಟಕ ಪ್ರ. ಮಿತ್ರ ಪ್ರಕಾಶನ, ೧೯೮೨ ಪು. ೨೨೮.

# ಹುಟ್ಟು , ಬಾಲ್ಯ, ವಿದ್ಯಾಭ್ಯಾಸ

ಶಿವಮೊಗ್ಗ ನಗರದಿಂದ ಸುಮಾರು ಹತ್ತು ಕಿಲೋಮೀಟರ್ ಅಂತರದಲ್ಲಿರುವ ಪ್ರಕೃತಿ ಸೊಬಗಿನ ತಾಣ ಕೂಡಲಿ ಗ್ರಾಮ, ಮಲೆನಾಡಿನ ಎರಡು ಪ್ರಮುಖ ನದಿಗಳಾದ ತುಂಗಾ ಮತ್ತು ಭದ್ರೆ ಇಲ್ಲಿ ಒಂದಾಗಿ ಕೂಡುವುದರಿಂದ ಈ ಸ್ಥಳಕ್ಕೆ ಕೂಡಲಿ ಎಂಬ ಹೆಸರು ಬಂದಿದೆ. (ಕೂಡು ಎಂಬ ಸಂಬಂಧವಾಚಕ ಕೂಡಲಿ ಎಂಬ ನಾಮಪದವಾಗಿದೆ) ಹಾಗೆ ಒಂದಾಗಿ ಕೂಡುವ ನದಿಗಳು ಮುಂದೆ ಕೃಷ್ಣಾ ನದಿಯನ್ನು ಸೇರಿ ಬಹುದೂರದವರೆಗೆ ಹರಿದು ಕರ್ನಾಟಕ-ಆಂಧ್ರ ಬಯಲು ಪ್ರದೇಶಗಳ ಜನರಿಗೆ ಆಶ್ರಯತಾಣವಾಗಿವೆ. ಆದಿಶಂಕಾರಚಾರ್ಯರು ಸ್ಥಾಪಿಸಿದರೆಂದು ಹೇಳಲಾದ ಶಾರದಾದೇವಿ ಮಂದಿರ (ಶಂಕರಮಠ) ಮತ್ತು ಮಾಧ್ವಮಠ ಇಲ್ಲಿವೆ. ಐತಿಹಾಸಿಕವಾಗಿಯೂ ಪ್ರಾಮುಖ್ಯವನ್ನು ಹೊಂದಿರುವ ಕೂಡಲಿಯಲ್ಲಿ ಅನೇಕ ಶಿಲಾ ಶಾಸನಗಳು ಕಂಡುಬರುತ್ತವೆ. ಹೀಗೆ, ರಾಜಕೀಯ ಇತಿಹಾಸ ಮತ್ತು ಧರ್ಮ ಈ ಎರಡನ್ನೂ ಒಳಗೊಂಡ ಕೂಡಲಿಯಲ್ಲಿ ೧೯೧೦ರನೆಯ ಇಸವಿ ಫೆಬ್ರುವರಿ ೨೫ರಂದು ಚಿದಂಬರಂರವರು ಹುಟ್ಟಿದರು. ತಂದೆ ಕೃಷ್ಣಪ್ಪನವರು. ತಾಯಿ ಲಕ್ಷ್ಮಮ್ಮನವರು. ಚಿದಂಬರಂ ಅವರ ಒಡಹುಟ್ಟಿದವರು ಐದುಮಂದಿ. ಇಬ್ಬರು ತಮ್ಮಂದಿರು ಮತ್ತು ಮೂರು ಜನ ಸೋದರಿಯರು (ತಂಗಿಯರು). ಹಿರಿಯಣ್ಣಯ್ಯ, ಮೂರ್ತಿ ಕಾಮಾಕ್ಷಮ್ಮ ಸೀತಾಲಕ್ಷ್ಮಮ್ಮ (ಸೀತಮ್ಮ) ಮತ್ತು ಇನ್ನೊಬ್ಬಾಕೆ (ಮದ್ರಾಸಿಗೆ ಮದುವೆ ಆಗಿದ್ದವರು). ಚಿದಂಬರಂ ಅವರೇ ಹಿರಿಯರು. ತಮ್ಮ ಹಿರಿಯಣ್ಣಯ್ಯ ಬ್ರಹ್ಮಚಾರಿಯಾಗಿಯೇ ಉಳಿದರು. ಕಾಮಾಕ್ಷಮ್ಮ ಬೆಂಗಳೂರಿನಲ್ಲಿ ನೆಲೆಸಿದರು. ಸೀತಾಲಕ್ಷ್ಮಮ್ಮ ಗಂಡನನ್ನು ಕಳೆದುಕೊಂಡು ತೊಂದರೆಯಲ್ಲಿದ್ದರು. ಚಿದಂಬರಂ ಅವರು ಆಕೆಗೆ ಸಹಾಯ ಮಾಡಿದರು. ತಾಯಿ ಲಕ್ಷ್ಮಮ್ಮ ಚಿದಂಬರಂರವರು ಸುಮಾರು ಹದಿನಾಲ್ಕು ವರ್ಷದ ಬಾಲಕನಾಗಿದ್ದಾಗಲೆ ತೀರಿಹೋದರು. ತಂದೆ ಕೃಷ್ಣಪ್ಪ ತಮ್ಮ ೬೭ನೆಯ ವಯಸ್ಸಿನಲ್ಲಿ ಶೃಂಗೇರಿಯಲ್ಲಿ ತೀರಿಹೋದರು.

ತಂದೆಗೆ ಕೂಡಲಿಯಲ್ಲಿ ಜಮೀನು ಇದ್ದರೂ ಅದರಿಂದ ಅವರಿಗೇನು ಹೆಚ್ಚಿಗೆ ಲಾಭ ಆಗಲಿಲ್ಲ. ಅಷ್ಟೇನು ಓದಿದವರೂ ಅಲ್ಲ. ಅವರು ತೀರ್ಥಹಳ್ಳಿ, ಶಿವಮೊಗ್ಗ ಶೃಂಗೇರಿಗಳಲ್ಲಿ ವಾಸಿಸುತ್ತಿದ್ದರು. ಶಿವಮೊಗ್ಗದಲ್ಲಿದ್ದಾಗ ಲಾಯರ್‌ಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ದಾಖಲೆಗಳನ್ನು ಸಿದ್ಧಪಡಿಸುವುದು, ಅಗತ್ಯ ಕಾಗದ ಪತ್ರಗಳನ್ನು ಒದಗಿಸುವುದು ಇತ್ಯಾದಿ

ಕೆಲಸಗಳಲ್ಲಿ ನಿಷ್ಣಾತರಾಗಿದ್ದರು. ಈ ಹಿನ್ನೆಲೆಯಿಂದ ಬಂದ ಕೃಷ್ಣಪ್ಪನವರು ಮಕ್ಕಳಿಗೆ ಶಿಕ್ಷಣ ಕೊಡಲು ಮುಂದಾದರು.

ಚಿದಂಬರಂರವರ ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸ ತೀರ್ಥಹಳ್ಳಿಯಲ್ಲಿ ನಡೆಯಿತು, ಆಂಗ್ಲೋ-ವರ್ನಾಕ್ಯುಲರ್ ಶಾಲೆಯಲ್ಲಿ (ಈಗ ಕುವೆಂಪು ಶಾಲೆ ಎಂದು ಹೆಸರಾಗಿದೆ) ಓದಿದರು. ಆ ಶಾಲೆಯಲ್ಲಿ ಕೆ.ವಿ. ಪುಟ್ಟಪ್ಪನವರು ಅವರ ಸಹಪಾಠಿಗಳಾಗಿದ್ದರು. ಅನಂತರ, ಪ್ರೌಢಶಾಲಾ ವಿದ್ಯಾಭ್ಯಾಸ ನಡೆದುದು ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ, ಅಲ್ಲಿ ತೀ.ನಂ. ಶ್ರೀಕಂಠಯ್ಯ, ಭೂಪಾಳಂ ಚಂದ್ರಶೇಖರಯ್ಯ ಮತ್ತು ಹೆಚ್.ಸಿ. ರಾಮಚಂದ್ರರಾವ್ ಅವರುಗಳು ಚಿದಂಬರಂ ಅವರ ಸಹಪಾಠಿಗಳಾಗಿದ್ದರು. ಅಲ್ಲಿಯೂ ಅವರು ಶಿಸ್ತುಬದ್ಧ ಜೀವನವನ್ನು ಸಾಗಿಸುತ್ತ ತಮ್ಮ ಬದುಕನ್ನು ರೂಪಿಸಿಕೊಳ್ಳತೊಡಗಿದರು. ಪ್ರತಿರಾತ್ರಿ ಮಲಗುವ ಮುನ್ನ ಉಪನಿಷತ್ತಿನ ಸ್ತೋತ್ರ ಪಠಿಸುವುದು ಅವರ ದಿನಚರಿಗಳಲ್ಲಿ ಒಂದಾಗಿತ್ತು. ಮಿತ ಹಾಗೂ ಮೃದುಭಾಷಿಯಾದ ಅವರು ಯಾರೊಂದಿಗೂ ಅನಗತ್ಯ ಮಾತುಕತೆಗೆ ತೊಡಗುತ್ತಿರಲಿಲ್ಲ. ಎಷ್ಟು ಬೇಕೋ ಅಷ್ಟು. ಓಗೆ, ಪ್ರೌಢಶಾಲೆಯ ಜೀವನ ಸಾಗಿಸುತ್ತಿರುವಾಗ ಒಂದುದಿನ ತಂದೆ ಕೃಷ್ಣಪ್ಪನವರಿಂದ ಅವರಿಗೊಂದು ಟೆಲಿಗ್ರಾಂ ಬಂದಿತು: 'ಕೂಡಲಿ ಶೃಂಗೇರಿ ಸ್ವಾಮಿಗಳು ನಿನ್ನನ್ನು ಮುಂದಿನ ಮಠಾಧಿಪತಿಗಳನ್ನಾಗಿ ಮಾಡಲು ಇಚ್ಛಿಸುತ್ತಾರೆ. ನೀನು ಕೂಡಲೆ ಅಭಿಪ್ರಾಯ ತಿಳಿಸು' ಎಂಬುದು ಆ ಟೆಲಿಗ್ರಾಂನ ಒಕ್ಕಣೆಯಾಗಿತ್ತು. ಬಾಲಕ ಚಿದಂಬರಂ ಅವರು ಈ ವಿಷಯವನ್ನು ತಮ್ಮ ಸ್ನೇಹಿತರೊಡನೆ ಚರ್ಚಿಸಿ, ಅಂತಿಮವಾಗಿ ಆ ಆಹ್ವಾನವನ್ನು ಒಪ್ಪಿಕೊಳ್ಳಲಿಲ್ಲ. ಒಂದು ಸಮಯ ಒಪ್ಪಿಕೊಂಡಿದ್ದರೆ ಕನ್ನಡದ ಶ್ರೇಷ್ಠ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ 'ಕಾವ್ಯಾಲಯ' ಇರುತ್ತಿರಲಿಲ್ಲ ಎಂದು ನಾವು ಸುಲಭವಾಗಿ ಊಹಿಸಿಕೊಳ್ಳಬಹುದು. ಅವರ ಅಂದಿನ ದೃಢನಿರ್ಧಾರಕ್ಕೆ ಕನ್ನಡ ಸಾಹಿತ್ಯ ಪ್ರೇಮಿಗಳು ಎಂದೆಂದೂ ಕೃತಜ್ಞರಾಗಿರಬೇಕು.

ಪ್ರೌಢಶಾಲಾ ವಿದ್ಯಾಭ್ಯಾಸದನಂತರ ಚಿದಂಬರಂ ಮೈಸೂರಿಗೆ ಹೋಗಿ ಮಹಾರಾಜ ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದರು. ಅಲ್ಲಿ ತೀ.ನಂ. ಶ್ರೀಕಂಠಯ್ಯ, ಪು.ತಿ. ನರಸಿಂಹಾಚಾರ್, ನಂ. ನರಸಿಂಹ ಶಾಸ್ತ್ರಿ (ಮುಂದೆ ಸಂಸ್ಕೃತ ಪ್ರಾಧ್ಯಾಪಕರಾದರು). ಬಿ ನಂಜುಂಡಯ್ಯನವರು ಸಹಪಾಠಿಗಳಾಗಿದ್ದರು. ಕನ್ನಡ ಸಾಹಿತ್ಯ-ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಆಸಕ್ತಿ ಹೊಂದಿದ್ದ ಅವರಿಗೆ ಮಹರಾಜ ಕಾಲೇಜಿನ ಪರಿಸರ ಇನ್ನಷ್ಟು ಉತ್ತೇಜನ ನೀಡಿತು. ೧೯೨೩.ರಲ್ಲಿ ಬಿ.ಎ. ಪದವೀಧರರಾದರು.

ತಂದೆ ಕೃಷ್ಣಪ್ಪನವರಿಗೆ ಮಗನನ್ನು ವಕೀಲನನ್ನಾಗಿ ಮಾಡುವ ಹಂಬಲವಿತ್ತು. ಶಿವಮೊಗ್ಗದಲ್ಲಿ ವಕೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ಅವರಿಗೆ ಮಗನ ಬಗ್ಗೆ ಈ

ಆಸ್ಥೆ ಬಂದುದು ಸಹಜವೇ ಆಗಿತ್ತು. ಆದರೆ, ಅಂದಿನ ದಿನಗಳಲ್ಲಿ ಮೈಸೂರು ಸಂಸ್ಥಾನದಲ್ಲೆಲ್ಲೂ ಲಾ ಓದುವ ಅವಕಾಶ ಇರಲಿಲ್ಲ. ಮದ್ರಾಸು ಮತ್ತು ಪುಣೆಗಳಲ್ಲಿ ಮಾತ್ರ ಲಾ ಕಾಲೇಜುಗಳಿದ್ದವು. ಚಿದಂಬರಂ ಅವರು ಪುಣೆಯ ಫರ್ಗ್ಯುಸನ್ ಲಾ ಕಾಲೇಜಿಗೆ ಸೇರಿದರು. ಅಲ್ಲಿ ಎಸ್. ನಿಜಲಿಂಗಪ್ಪನವರು ಸಹಪಾಠಿಗಳಾಗಿದ್ದರು. ಅವರು ೧೯೨೬ರಲ್ಲಿ ಎಲ್.ಎಲ್.ಬಿ. ಪದವೀಧರರಾದರು.

■

# ಉದ್ಯೋಗ

ಪುಣೆಯಲ್ಲಿ ಲಾ ಪದವೀಧರರಾಗಿ ಬಂದ ಚಿದಂಬರಂ ಅವರು ಆನಂತರ ಶಿವಮೊಗ್ಗದಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಆದರೆ, ಆ ಕೆಲಸ ಅವರಿಗೆ ಒಗ್ಗಿ ಬರಲಿಲ್ಲ. ಪ್ರಾಮಾಣಿಕತೆ ಮತ್ತು ನಿಷ್ಠೆ ಅವರ ವ್ಯಕ್ತಿತ್ವದ ಅಂತರ್ಗತ ಗುಣಗಳಾದ್ದರಿಂದ ಈ ವೃತ್ತಿ ಅವರಿಗೆ ಅಷ್ಟಾಗಿ ಒಗ್ಗಿಬರಲಿಲ್ಲ. (ಮುಂದೆ ಅವರ ಈ ಗುಣಗಳೇ ಕಾವ್ಯಾಲಯವನ್ನು ಬೆಳೆಸುವಲ್ಲಿ ಹೇಗೆ ಬೆನ್ನೆಲುಬಾದವು ಎಂಬುದನ್ನು ನಾವು ಕಾಣುತ್ತೇವೆ.) ಆದುದರಿಂದ, ವಕೀಲರಾಗಿ ಕಾರ್ಯನಿರ್ವಹಿಸಲು ಅವರಿಂದ ಸಾಧ್ಯವಾಗಲಿಲ್ಲ. ಕನ್ನಡ ಸಾಹಿತ್ಯ-ಸಂಸ್ಕೃತಿಗಳತ್ತ ಅವರ ಮನಸ್ಸು ಸದಾ ತುಡಿಯುತಿತ್ತು. ಇದರ ಪರಿಣಾಮ 'ಕಾವ್ಯಾಲಯ' ಪ್ರಕಾಶನ ಸಂಸ್ಥೆ ರೂಪುಗೊಳ್ಳಲು ಸಾಧ್ಯವಾಯಿತು.

ಕನ್ನಡ ಸಾಹಿತ್ಯ ಕೃತಿಗಳನ್ನು ಜನತೆಗೆ ಪರಿಚಯಿಸಬೇಕು. ಜನರ ಅಭಿರುಚಿಯನ್ನು ಉನ್ನತೀಕರಿಸಬೇಕು ಎಂಬ ಒಳ ಒತ್ತಡದಿಂದ ಅಸ್ತಿತ್ವಕ್ಕೆ ಬಂದ ಈ ಹವ್ಯಾಸಿ ಪ್ರಕಟಣಾ ಸಂಸ್ಥೆ ಮುಂದೆ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದಾಗಿ ಕೆಲಸ ನಿರ್ವಹಿಸಿತು ಎಂಬುದು ಬಲ್ಲಂಥ ಸಂಗತಿಯೇ ಆಗಿದೆ. ಸರಿಸುಮಾರು ಅದೇ ಕಾಲದಲ್ಲಿ ಅಂದರೆ ೧೯೩೦ರಲ್ಲಿ ಶಿವಮೊಗ್ಗದಲ್ಲಿ ಸ್ಥಾಪಿತಗೊಂಡ ಕರ್ನಾಟಕ ಸಂಘದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದರು. ಮೊದಲು ಸಂಘದ ಸಹಕಾರ್ಯದರ್ಶಿಯಾಗಿ, ಬಳಿಕ ಗೌರವ ಕಾರ್ಯದರ್ಶಿಯಾಗಿ ಅಲ್ಲಿ ಸೇವೆಸಲ್ಲಿಸಿದರು. (ವಿವರಗಳಿಗೆ ನೋಡಿ : ಕರ್ನಾಟಕ ಸಂಘ-ಚಿದಂಬರಂ ನಂಟು)

ಆದರೆ, ಜೀವನ ನಿರ್ವಹಣೆಗಾಗಿ ಬೇರೊಂದು ಕಡೆ ಕೆಲಸ ಹುಡುಕಬೇಕಾಗಿ ಬಂದಿತು. ತೀರ್ಥಹಳ್ಳಿಯ ಕೋ-ಆಪರೇಟಿವ್ ಪೀಪಲ್ಸ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಕೆಲಸಕ್ಕೆ ಸೇರಿದರು. ಬ್ಯಾಂಕಿನ ವ್ಯವಸ್ಥೆ ಅವರಿಗೆ ಸರಿಹೊಂದಲಿಲ್ಲ, ಪರಿಣಾಮ ಆ ಕೆಲಸಕ್ಕೆ ರಾಜಿನಾಮೆ ಇತ್ತರು (೧೯೩೩ರಿಂದ ಕೆಲವುಕಾಲ ಅಲ್ಲಿ ಕೆಲಸಕ್ಕೆ ಇದ್ದರು). ಅದೇ ಹೊತ್ತಿನಲ್ಲಿ ಅಂದರೆ ಬ್ಯಾಂಕ್ ಉದ್ಯೋಗಿಯಾಗಿದ್ದುಕೊಂಡೇ ತೀರ್ಥಹಳ್ಳಿಯಿಂದ 'ವಿಚಾರವಾಹಿನಿ' ಎಂಬ ಸಾಹಿತ್ಯಿಕ ಮಾಸಿಕ ಪತ್ರಿಕೆಯೊಂದನ್ನು ಪ್ರಕಟಿಸಲು ಪ್ರಾರಂಭಿಸಿದರು. (ಮುಂದೆ ಈ ಪತ್ರಿಕೆಯ ವಿವರ ಇದೆ.)

೧೯೪೦ರಲ್ಲಿ ಮೈಸೂರಿಗೆ ತಮ್ಮ ನೆಲೆಯನ್ನು ಸ್ಥಳಾಂತರಿಸಿದ ಮೇಲೆ, ಅಲ್ಲಿ ಚಾಮರಾಜಪುರಂ ಕೋ-ಆಪರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿ (೧೯೪೦), ಚುನಾಯಿತ ಸದಸ್ಯರ ನಡವಳಿಕೆಗಳೊಂದಿಗೆ ರಾಜಿ ಮಾಡಿಕೊಳ್ಳಲಾಗದೆ ಆ ಕೆಲಸಕ್ಕೂ ರಾಜೀನಾಮೆ ನೀಡಿದರು (೧೯೪೩). ಇದಾದ ಮೇಲೆ ಚಿದಂಬರಂರವರು ಕೆಲವು ಕಾಲ ರಾಜ್ಯ ವಯಸ್ಕರ ಶಿಕ್ಷಣ ಸಂಸ್ಥೆಯಲ್ಲಿ ಪುಸ್ತಕ ಪ್ರಕಟಣೆಯ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸಿದರು (೧೯೪೪-೧೯೪೬). ಬಳಿಕ ಅಲ್ಲಿನ ಅಧಿಕಾರಿಗಳ ಧೋರಣೆಗೆ ಬೇಸತ್ತು ಆ ಹುದ್ದೆಗೂ ರಾಜೀನಾಮೆ ನೀಡಿದರು.

ಇದರಿಂದ ಸ್ಪಷ್ಟವಾಗುವ ಒಂದು ಅಂಶವೆಂದರೆ ಚಿದಂಬರಂರವರಿಗೆ ತಮ್ಮ ನಂಬಿಕೆ ಮತ್ತು ಆತ್ಮವಿಶ್ವಾಸಕ್ಕೆ ಊನ ಬಂದೆಡೆಯಲ್ಲೆಲ್ಲ ಅದನ್ನು ಅವರು ಸಹಿಸುತ್ತಿರಲಿಲ್ಲ ಮತ್ತು ಇನ್ನೊಬ್ಬರ ಅಧೀನದಲ್ಲಿ ಕೆಲಸ ಮಾಡುವುದು ಅವರಿಗೆ ಒಗ್ಗಿಬರುತ್ತಿರಲಿಲ್ಲ ಎಂಬುದು ಅವರದೊಂದು ಬಗೆಯ ಮೌನಪ್ರತಿಭಟನೆ. ಈ ಎಲ್ಲ ಅನುಭವಗಳ ಹಿನ್ನೆಲೆಯಲ್ಲಿ ಅವರು ಪುಸ್ತಕ ಪ್ರಕಾಶನವನ್ನು ಪೂರ್ಣಾವಧಿಯಾಗಿ ಕೈಗೆತ್ತಿಕೊಂಡು ತಮ್ಮ ಅಭಿರುಚಿ ಮತ್ತು ಆಶಯಕ್ಕೆ ಅನುಗುಣವಾಗಿ ಬೆಳೆಸಿದರು (೧೯೪೬ರಿಂದ).

# ಮದುವೆ ಮಕ್ಕಳು

ಶಿವಮೊಗ್ಗದಲ್ಲಿ ವಕೀಲಿ ವೃತ್ತಿ ಮಾಡುತ್ತ, ಹವ್ಯಾಸಿ ಪ್ರಕಾಶನ ಸಂಸ್ಥೆಯಾಗಿ ಕಾವ್ಯಾಲಯವನ್ನು ಕಟ್ಟುತ್ತಿರುವಾಗಲೆ ಕೂಡಲಿ ಚಿದಂಬರಂರವರ ವಿವಾಹ ಶೇಷಮ್ಮ ಎಂಬುವವರೊಂದಿಗೆ ೧೯೩.೩.ರಲ್ಲಿ ನಡೆಯಿತು.

ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕು ತಂಗಡ ಗ್ರಾಮದ ಶ್ಯಾನುಭೋಗ ವೆಂಕಟರಮಣಯ್ಯ ಅಯ್ಯರ್ ಮತ್ತು ಪುಟ್ಟಮ್ಮ ಎಂಬುವವರ ಮಗಳಾದ ಶೇಷಮ್ಮ ಹೆಚ್ಚು ಓದಿದವರೇನಲ್ಲ. ಶೀರ ಅಂದರೆ ಪ್ರಾಥಮಿಕ ನಾಲ್ಕೈದು ತರಗತಿಯವರೆಗೆ ಅವರ ಓದು ಸೀಮಿತವಾಗಿತ್ತು. ಸಹನಶೀಲೆಯಾದ ಅವರು ಸದ್ಗೃಹಿಣಿಯಾಗಿ ಚಿದಂಬರಂ ಅವರ ಎಲ್ಲ ಕೆಲಸಕಾರ್ಯಗಳಿಗೆ ಬೆಂಬಲವಾಗಿ ನಿಂತರು. ಬದುಕಿನುದ್ದಕ್ಕೂ ಅನ್ಯೋನ್ಯವಾಗಿ ಬಾಳಿದ ಈ ದಂಪತಿಗಳಿಗೆ ನಾಲ್ವರು ಗಂಡುಮಕ್ಕಳು ಮತ್ತು ನಾಲ್ವರು ಹೆಣ್ಣು ಮಕ್ಕಳು. ತಂದೆಯನ್ನು ಮಕ್ಕಳು ಅಣ್ಣಾ ಎಂದು ಕರೆಯುತ್ತಿದ್ದರು.

ಸಿ.ಕೆ. ನಾಗರಾಜ್ ಮೊದಲನೆಯ ಮಗ (ಜನನ : ೧೯೩.೬). ೧೯೬೦ರಲ್ಲಿ ಪ್ರೇಮ ಎಂಬುವವರೊಂದಿಗೆ ಮದುವೆ. ಅವರ ಇಬ್ಬರು ಹೆಣ್ಣುಮಕ್ಕಳು ಅಮೆರಿಕೆಯಲ್ಲಿ ವಾಸವಾಗಿದ್ದಾರೆ. ವೃತ್ತಿಯಲ್ಲಿ ಇಂಜಿನಿಯರ್ ಆದ ಅವರು ದೇಶದ ನಾನಾಕಡೆ ಕೆಲಸಮಾಡಿ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಎರಡನೆಯ ಮಗ ಕರ್ನಲ್ ಸಿ.ಕೆ. ಶೇಷಾದ್ರಿ (ಜನನ: ೧೯೩.೬) ೧೯೬೦ರಲ್ಲಿ ಪ್ರೇಮ ಎಂಬುವವರೊಂದಿಗೆ ಮದುವೆ. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಮಗ ಭಾರತದ ರಕ್ಷಣಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇನ್ನೊಬ್ಬ ಮಗ ಸಾಫ್ಟ್‌ವೇರ್ ಇಂಜಿನಿಯರ್, ಇಂಗ್ಲೆಂಡಿನಲ್ಲಿದ್ದಾರೆ. ಯೋಗಪಟುವೂ ಆದ ಶೇಷಾದ್ರಿ ಅವರು ಭಾರತದ ರಕ್ಷಣಾ ಇಲಾಖೆಯಲ್ಲಿ ಸೇವೆಸಲ್ಲಿಸಿ, ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಸಿ.ಕೆ. ಕೃಷ್ಣಮೂರ್ತಿ (ಜನನ : ೧೯೪೧). ಮೂರನೆಯ ಮಗ.ಕೂಡಲಿ ಚಿದಂಬರಂ ನಿಧನಾನಂತರ ಕಾವ್ಯಾಲಯದ ಸಂಪೂರ್ಣ ಹೊಣೆಗಾರಿಕೆಯನ್ನು ಹೊತ್ತುಕೊಂಡು, ಪ್ರಕಟಣಾ ಸಂಸ್ಥೆಯನ್ನು ನಡೆಸಿಕೊಡು ಹೋಗುತ್ತಿದ್ದಾರೆ. ಅವಿವಾಹಿತರು.

ಸಿ.ಕೆ. ಸತ್ಯನಾರಾಯಾಣ (ಜನನ: ೧೯೪೬). ನಾಲ್ಕನೆಯ ಮಗ. ಯೋಗ ಪಟು. ಧೀರೇಂದ್ರ ಬ್ರಹ್ಮಚಾರಿಯವರ ಶಿಷ್ಯರಾಗಿದ್ದರು. ಲಂಡನ್ನಿನಲ್ಲಿ ಉದ್ಯೋಗಿಯಾಗಿದ್ದಾಗ ೩೫ನೆಯ ವಯಸ್ಸಿನಲ್ಲಿ ಅಕಾಲ ಮೃತ್ಯುವಿಗೆ ಒಳಗಾದರು (೧೯೮೧). ಕನ್ನಡದಲ್ಲಿ ಉತ್ತಮ ವಾಗ್ಮಿ ಹಾಗೂ ಬರಹಗಾರರಾಗಿದ್ದ ಅವರ ಸಾವು ಕಾವ್ಯಾಲಯಕ್ಕೊಂದು ದೊಡ್ಡ ನಷ್ಟವೇ ಆಯಿತು.

ವಸಂತಲಕ್ಷ್ಮಿ (ಜನನ: ೧೯೪೪). ಮೊದಲನೆಯ ಮಗಳು, ೧೯೬೫ರಲ್ಲಿ ರಾಂಕುಮಾರ್ ಎಂಬುವವರೊಂದಿಗೆ ಮದುವೆಯಾಗಿ ಬೆಂಗಳೂರಿನಲ್ಲಿವಾಸವಾಗಿದ್ದಾರೆ. ಅವರ ಇಬ್ಬರು ಗಂಡು ಮಕ್ಕಳು ಅಮೆರಿಕೆಯಲ್ಲಿದ್ದಾರೆ.

ನಾಗವೇಣಿ ಎರಡನೆಯ ಮಗಳು (ಜನನ : ೧೯೪೯). ವಿಶ್ವನಾಥ್ ಎಂಬವ ವರೊಂದಿಗೆ ೧೯೭೫ರಲ್ಲಿ ಮದುವೆಯಾಗಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಒಬ್ಬ ಮಗಳು ಮತ್ತು ಒಬ್ಬ ಮಗ ಇದ್ದಾರೆ. ಮಗ ಸಾಫ್ಟ್‌ವೇರ್ ಇಂಜಿನಿಯರ್.

ಸಿ.ಕೆ. ಪ್ರಭಾ ಮೂರನೆಯ ಮಗಳು (ಜನನ : ೧೯೫೫). ಪಂಚಪಕೇಶನ್ ಎಂಬುವವರೊಂದಿಗೆ ೧೯೮೦ರಲ್ಲಿ ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ದಂಪತಿಗಳ ಒಬ್ಬ ಮಗ ಸಿಂಗಪೂರ್‌ನಲ್ಲಿದ್ದಾರೆ. ಇನ್ನೊಬ್ಬ ಮಗ ಅಮೆರಿಕೆಯಲ್ಲಿ ಇಂಜಿನಿಯರ್ ಆಗಿದ್ದಾರೆ. ಪ್ರಭಾ ಅವರು ಕಾವ್ಯಾಲಯದ ಪ್ರಕಟಣೆಯಲ್ಲಿ ಸಹಭಾಗಿ ಯಾಗಿದ್ದಾರೆ.

೧೯೫೨ರಲ್ಲಿ ಜನಿಸಿದ ಹೆಣ್ಣುಮಗು ಪದ್ಮ ಡಿಫ್ತೀರಿಯಾ ಕಾಯಿಲೆಯಿಂದ ೧೯೫೬ರಲ್ಲಿ ತೀರಿಹೋದಳು.

■

# ಕನ್ನಡದತ್ತ ಒಲವು

ಕೂಡಲಿ ಚಿದಂಬರಂ ಅವರು ಕನ್ನಡ ಪತ್ರಿಕೋದ್ಯಮ, ಗ್ರಂಥ ಪ್ರಕಟಣೆಯತ್ತ ಒಲಿದದ್ದು ಯಾಕೆ? ಯಾವ ಸಂದರ್ಭ ಅಥವಾ ಘಟನೆ ಕಾರಣವಾಯಿತು ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿ ಬರುತ್ತದೆ. ಇವಕ್ಕೆಲ್ಲ ಒಂದೇ ಉತ್ತರ ಕನ್ನಡ – ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಮೊದಲಿನಿಂದಲೂ ಅವರಿಗಿದ್ದ ಅಪಾರ ಪ್ರೀತಿಯೇ ಹೊರತು ಅನ್ಯತ್ರ ಅಲ್ಲ ಅನ್ನಬಹುದು. ತುಂಗ-ಭದ್ರೆಗಳ ಕೂಡಲ ಸಂಗಮದ ಪ್ರಶಾಂತ ವಾತಾವರಣದ ಕೌಟುಂಬಿಕ ಹಿನ್ನೆಲೆಯಿಂದ ಬೆಳೆದು ಬಂದ ಮೃದುಭಾಷಿ ಚಿದಂಬರಂ ಬಹುವಾಗಿ ಅಂತರ್ಮುಖಿ. ಅವರ ಈ ಮೌನ ಗುಣವೇ ಅವರೊಳಗೊಬ್ಬ ಸಾಂಸ್ಕೃತಿಕ ವ್ಯಕ್ತಿಯನ್ನು ಹುಟ್ಟುಹಾಕತೊಡಗಿತು. ಆ ವ್ಯಕ್ತಿತ್ವಕ್ಕೆ ಪೂರಕವಾದ ವಾತಾವರಣ ಕನ್ನಡವೇ ಆಗಿದ್ದುದು ಇನ್ನಷ್ಟು ದೃಢಗಟ್ಟಿತು.

ಯಾವುದೇ ಮನುಷ್ಯನ ಬೆಳವಣಿಗೆಗೆ ಅವನು ಇರುವಂಥ ಪರಿಸರದ ಪ್ರಭಾವವೂ ಪ್ರಧಾನ ಪಾತ್ರ ವಹಿಸುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆಯೇ ಆಗಿದೆ. ಅಂಥಪರಿಸರವು ಒಳಗಿನ ಇಚ್ಛೆಗಳಿಗೆ ಅಥವಾ ಒತ್ತಡಗಳಿಗೆ ಮೂರ್ತಸ್ವರೂಪವನ್ನು ಕೊಡಲು ಸಶಕ್ತವಾದಾಗ ವ್ಯಕ್ತಿಯು ಸರ್ವಾಂಗೀಣವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಸದ್ಯ, ಅಂತಹದೊಂದು ಪೂರಕ ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ ವಾತಾವರಣ ಶಿವಮೊಗ್ಗದಲ್ಲಿ ಇದ್ದಿತ್ತು. ತೀರ್ಥಹಳ್ಳಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮಾಡುವಾಗ ಚಿದಂಬರಂ ಅವರ ಸಹಪಾಠಿಯಾಗಿ ಕೆ.ವಿ. ಪುಟ್ಟಪ್ಪನವರಿದ್ದರು. ಅಲ್ಲದೆ ಬಿ.ಎಂ. ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ಪು.ತಿ. ನರಸಿಂಹಾಚಾರ್, ನಂ. ಶಿವರಾಮಶಾಸಿ ಮುಂತಾದ ಹಿರಿಯರ ಪ್ರಭಾವವೂ ಚಿದಂಬರಂ ಅವರ ಮೇಲಿತ್ತು. ಅವರೆಲ್ಲರ ಸನಿಹ-ಸಂಪರ್ಕ ಚಿದಂಬರಂ ಅವರ ಕನ್ನಡ ಪ್ರೀತಿಯನ್ನು ಹೆಚ್ಚಿಸುವಲ್ಲಿ ಪರಿಣಾಮ ಬೀರಿದವು ಎಂದು ನಾವಾದರೂ ಸುಲಭವಾಗಿ ಊಹಿಸಬಹುದು.

ಅದೂ ಇಲ್ಲದೆ ೧೯೩೦-೪೦ರ ಕಾಲ ದೇಶಾದ್ಯಂತ ಸ್ವಾತಂತ್ರ್ಯ ಚಳುವಳಿ ಗರಿಗಟ್ಟಿದ್ದ ದಿನಗಳು. ಆ ಚಳುವಳಿ ಪರೋಕ್ಷವಾಗಿ ದೇಶೀಯ ಚಿಂತನೆಗೆ ಎಡೆಮಾಡಿ ಕೊಟ್ಟಿದ್ದು, ಪ್ರಾದೇಶಿಕ ಭಾಷೆಗಳಲ್ಲಿ ಅದು ಅಕ್ಷರ ರೂಪ ಪಡೆಯತೊಡಗಿತು. ಈ ಎಲ್ಲ ಕಾರಣಗಳು ಸಹಜವಾಗೆ ಸ್ವಾತಂತ್ರ್ಯ ಪ್ರೇಮಿಯಾಗಿದ್ದ ಚಿದಂಬರಂ ಅವರಲ್ಲಿ ನೆಲೆನಿಂತು, ಕನ್ನಡದತ್ತ ಹರಿಯಿತು. ಅದು ಕನ್ನಡ ಪತ್ರಿಕೆ ಹೊರಡಿಸುವುದಾಗಿರ ಬಹುದು; ಕನ್ನಡ ಪುಸ್ತಕ

ಪ್ರಕಟಿಸುವುದಾಗಿರಬಹುದು; ಕನ್ನಡದಲ್ಲಿ ಬರೆಯುವುದಾಗಿರಬಹುದು; ಇಲ್ಲವೆ ಕರ್ಣಾಟಕ ಸಂಘದ ಗೌ|| ಕಾರ್ಯದರ್ಶಿಯಾಗಿ ನಿಸ್ಪೃಹತೆಯಿಂದ ಕೆಲಸ ಮಾಡಿದುದಾಗಿರಬಹುದು ಇವೆಲ್ಲ ಕನ್ನಡ ಬಾಹ್ಯ ಚಟುವಟಿಕೆಯಾಗಿ ಕಂಡಬಂದರೂ ಮೂಲಭೂತವಾಗಿ ಚಿದಂಬರಂ ಅವರ ಮನಸ್ಸು ಸದಾ ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ನಿಷ್ಕಲ್ಮಶವಾಗಿ ತುಡಿಯುತ್ತಿದ್ದುದೇ ಅಲ್ಲದೆ ಬೇರೇನೂ ಅಲ್ಲ. ಆದುದರಿಂದಲೇ ಅವರು ಕೈಗೊಂಡ ಯಾವುದೇ ಕನ್ನಡ ಕೆಲಸ ಪರಿಶುದ್ಧತೆಯಿಂದ ಕೂಡಿದುದಾಗಿತ್ತು.

■

# ಕರ್ಣಾಟಕ ಸಂಘ - ಚಿದಂಬರಂ ನಂಟು

ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗೆಗೆ ಜನತೆಯಲ್ಲಿ ಜಾಗೃತಿಯನ್ನುಂಟುಮಾಡುವ ಮಹದುದ್ದೇಶದಿಂದ ಶಿವಮೊಗ್ಗದಲ್ಲಿ ಕೆಲವು ಸಹೃದಯ ಗೆಳೆಯರು ಸೇರಿಕೊಂಡು ಹೆಸರಾಂತ ಕರ್ನಾಟಕ ಸಂಘವನ್ನು ಹುಟ್ಟುಹಾಕಿದರು.[೧] 'ಈ ಸಂಘವು ೧೯೩೦ನೆಯ ಇಸವಿ ನವೆಂಬರ್ ೮ನೆಯ ತಾರೀಕಿನಲ್ಲಿ ಪ್ರಸಿದ್ಧ ಕವಿಗಳಾದ ಶ್ರೀಮಾನ್ ಕೆ.ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಸಂಘವು ಸ್ಥಾಪಿತವಾಗಲು ಒದಗಿದ ಸಂದರ್ಭವಿದು. ೧೯೩೦ನೆಯ ಇಸವಿ ನವರಾತ್ರಿ ಸಮಯದಲ್ಲಿ ಮೈಸೂರು ಪಟ್ಟಣದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿದ ಹದಿನಾರನೆಯ ಕರ್ಣಾಟಕ ಸಾಹಿತ್ಯ ಪರಿಷತ್ ಸಮ್ಮೇಳನ ಕಾಲದಲ್ಲಿ ಸೇರಿದ ತರುಣ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದು ತಮ್ಮ ಕವಿತಾ ವಾಚನದಿಂದಲೂ ವ್ಯಾಖ್ಯಾನಗಳಿಂದಲೂ ಜನರ ಮನಸ್ಸನ್ನು ಸೆಳೆದ ಉತ್ತರ ಕರ್ನಾಟಕದ ಸುಪ್ರಸಿದ್ಧ ಕವಿಗಳಾದ ಶ್ರೀಮಾನಂ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ.ಎ.ಯವರನ್ನೂ ಅವರ ಕೃತಿಗಳನ್ನೂ ನಮ್ಮ ಜನರಿಗೆ ಪರಿಚಯ ಮಾಡಿಕೊಡಬೇಕೆಂಬ ಉದ್ದೇಶದಿಂದ ಸ್ವಯಂ ಕವಿಗಳೂ ಸಹೃದಯರೂ ಉದಾರಮನಸ್ಕರೂ ಆದ ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಎಂ.ಎ.ಯವರು ಶ್ರೀಮಾನ್ ಬೇಂದ್ರೆಯವರನ್ನು ಮೈಸೂರು ಸಂಸ್ಥಾನದ ಅನೇಕ ಪ್ರದೇಶಗಳಿಗೆ ತಮ್ಮೊಡನೆ ಕರೆದೊಯ್ದು ಆ ಸ್ಥಳಗಳಲ್ಲೆಲ್ಲ ಸಭೆ ಸೇರಿಸಿ ಜನರಿಗೆ ಶ್ರೀಮಾನ್ ಬೇಂದ್ರೆಯವರ ಕಾವ್ಯ ಪರಿಚಯವನ್ನು ಮಾಡಿಕೊಟ್ಟರು. ಶಿವಮೊಗ್ಗೆಯ ಜನರಿಗೆ ಶ್ರೀಮಾನ್ ಬೇಂದ್ರೆಯವರ ಕಾವ್ಯಶ್ರವಣ ಯೋಗವು ಮೇಲ್ಕಂಡ ವರ್ಷದ ಆಕ್ಟೋಬರ್ ತಿಂಗಳ ಅಂತ್ಯದಲ್ಲಿ ಲಭಿಸಿತು. ಆ ಕಾಲದಲ್ಲಿ ಶ್ರೀಮಾನ್ ಬೇಂದ್ರೆಯವರೂ, ಶ್ರೀಮಾನ್ ಮಾಸ್ತಿ ವೆಂಕಟೇಶ್ ಅಯ್ಯಂಗಾರರೂ ಶಿವಮೊಗ್ಗೆಯಲ್ಲಿ ಕರ್ಣಾಟಕ ಸಂಘವೊಂದರ ಆವಶ್ಯಕತೆಯನ್ನು ಕುರಿತು ನಮ್ಮೊಡನೆ ಪ್ರಸ್ತಾಪಿಸಿದರು. ಈ ವಿಧವಾದ ಸಂಘಸ್ಥಾಪನೆಗೆ ಆಗ್ಗೆ ಸಾಕಾದಷ್ಟು ಸಾರ್ವಜನಿಕ ಪ್ರೋತ್ಸಾಹವು ದೊರೆಯಲಿಲ್ಲ. ಆದರಿಂದ ಸಂಘಸ್ಥಾಪನೆಯು ಅಸಾಧ್ಯವೆಂದು ನಮ್ಮಲ್ಲಿ ಕೆಲವರು ನಿರಾಶರಾದೆವು. ಆದರೆ ನಮ್ಮ

---

೧. ಕರ್ಣಾಟಕ ಸಂಘ, ಶಿವಮೊಗ್ಗ ಇದರ 'ಮೊದಲ ಐದು ವರ್ಷಗಳು' ವರದಿ. ಪುಟ : ೩-೬ ಪ್ರ : ೧೯೩೬. ವರದಿ ತಯಾರಿಸಿದವರು ಸಂಘದ ಗೌ. ಕಾರ್ಯದರ್ಶಿ - ಕೂಡಲಿ ಚಿದಂಬರಂ.

ಮಿತ್ರರಾದ ಶ್ರೀಮಾನ್ ಭೂಪಾಳಂ ಪುಟ್ಟನಂಜಪ್ಪನವರು, ಶ್ರೀಮಾನ್ ಎ. ಸೀತಾರಾಮ್ ಅವರು ಆ ನಿರಾಶೆಯ ಕಾಲವು ಹೋಗುತ್ತಿದೆಯೆಂದೂ ಕನ್ನಡದ ವಿಚಾರದಲ್ಲಿ ಜನಜಾಗೃತಿಯನ್ನುಂಟು ಮಾಡುವುದು ನಮ್ಮ ಕರ್ತವ್ಯವೆಂದು ನಮಗೆ ಧೈರ್ಯ ಹೇಳಿದರು. ಈ ಇಬ್ಬರು ಮಹನೀಯರ ಧೈರ್ಯೋತ್ಸಾಹಗಳಿಂದ ಶಿವಮೊಗ್ಗೆಯ ಕರ್ಣಾಟಕ ಸಂಘವು ಹುಟ್ಟಲವಕಾಶ ವಾಯಿತು.

ಆ ಪ್ರಕಾರ ಶ್ರೀಯುತರುಗಳಾದ ದೇಶಪಾಂಡೆ ಗುರುರಾವ್, ಬಿ.ಎ., ಬಿ.ಟಿ., ಎ. ಸೀತಾರಾಮ್ ಬಿ.ಎಸ್‌ಸಿ. ಮತ್ತು ಕೂಡಲಿ ಚಿದಂಬರಂ, ಬಿ.ಎ., ಎಲ್.ಎಲ್‌ಬಿ., ಇವರುಗಳನ್ನು ಸಂಘದ ಪ್ರಾರಂಭೋತ್ಸವಕ್ಕೆ ಚಾಲಕರನ್ನಾಗಿ ನಿಯೋಜಿಸಲಾಯಿತು. ಶ್ರೀಮಾನ್ ಕೆ.ವಿ. ಪುಟ್ಟಪ್ಪ ಎಂ.ಎ.ಯವರ ಅಧ್ಯಕ್ಷತೆಯಲ್ಲಿ ನೆರವೇರಿಸಬೇಕೆಂದು ನಿಶ್ಚಯಿಸಲಾಯಿತು. ಅದರಂತೆ ತಾ. ೮.೧೧.೧೯೩೦ನೆಯ ಶನಿವಾರ ಸಾಯಂಕಾಲ ಸಂಘದ ಪ್ರಾರಂಭೋತ್ಸವವು ಶಿವಮೊಗ್ಗ ಗೌರ್ನಮೆಂಟ್ ಹೈಸ್ಕೂಲು ಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀಮಾನ್ ಪುಟ್ಟಪ್ಪನವರು ಅಂದಿನ ಅಧ್ಯಕ್ಷರಾಗಿದ್ದರು. ಅವರ ಅಂದಿನ ಅಧ್ಯಕ್ಷ ಭಾಷಣವು 'ಸಾಹಿತ್ಯ ಪ್ರಚಾರ' ಎಂಬ ಹೆಸರಿನಿಂದ ಇದೇ ಸಂಘದಿಂದ ಮುಂದೆ ಪ್ರಕಟವಾಯಿತು [೨] (ಇದು ಶ್ರೀಮಾನ್ ಪುಟ್ಟಪ್ಪನವರ ಮೊಟ್ಟಮೊದಲ ಪುಸ್ತಕವೂ ಹೌದು. ಪ್ರಕಟಣೆ - ೧೯೩೦.)

## ಸಂಘದ ಉದ್ದೇಶಗಳು

೧. ಇಂದು ಜನಜೀವನದಲ್ಲಿ ಬೆಳಕು ತೋರಿದೆ. ಇದನ್ನು ನಾಡಿನ ಅಭ್ಯುತ್ಥಾನ ಎಂದು ಕರೆಯಬಹುದು. ನಮ್ಮ ನಾಡು, ನಮ್ಮ ಜನ, ನಮ್ಮ ಭಾಷೆ ಎಂಬ ಅಭಿಮಾನವು ತಲೆದೋರುತ್ತಿದೆ.

ಹೀಗೆ (ನಮ್ಮ) ಜನಜೀವನದಲ್ಲಿ ಈಗ ತೋರುತ್ತಿರುವ ಹೊಸ ಅಲೆ ಆಶಯ ಗಳೂ ಧ್ಯೇಯಗಳೂ ಹೊಸ ರೀತಿ ಮಾರ್ಪಾಡುಗಳೂ ಇಂದಿನ ಹೊಸ ಕನ್ನಡ ಸಾಹಿತ್ಯದಲ್ಲಿ ಹೊಸ ರೂಪಿನಿಂದ ಹೊಸ ಕಾವ್ಯ ನಾಟಕ ಪ್ರಬಂಧ ಕಥೆಗಳಲ್ಲಿ ಕಾಣುತ್ತಿವೆ. ಕಾಣಲು ಪ್ರಾರಂಭವಾಗಿದೆ. ಜನಜೀವನದ ಪ್ರತಿಬಿಂಬವಾದ ಈ ನೂತನ ಸಾಹಿತ್ಯದ ಅನುಭವ ಮಾಡಿಕೊಂಡಬೇಕೆಂದು (ನಮ್ಮ) ಸಂಘದ ಉದ್ದೇಶವಾಗಿದೆ. ಸಾಹಿತ್ಯ ಸೇವಕರಾದ ಕವಿಗಳನ್ನೂ ಲೇಖಕರನ್ನೂ ಈ ಊರಿಗೆ ಬರಮಾಡಿ ಅವರ ಮತ್ತು ಅವರ ಕೃತಿಗಳ ಪರಿಚಯವನ್ನು (ನಿಮಗೆಲ್ಲ) ಉಂಟುಮಾಡಿಕೊಡಬೇಕೆಂದಿದ್ದೇವೆ.

---

೨. ಅದೇ, ಪು. ೧೪.

೨. ಅವಕಾಶ ದೊರೆತಲ್ಲಿ ಆಧುನಿಕ ನಾಟಕಗಳನ್ನು ಆಡಿಸಿ ತೋರಿಸುವುದು.

೩. ಹೊಸದು ಹಳತು ಎಂಬ ಭೇದವನ್ನೆಣಿಸದೆ, ಬರಿಯ ಅಭಿಮಾನ ದುರಭಿಮಾನಗಳಿಗೊಳಗಾಗದೆ, ಎಲ್ಲವನ್ನೂ ಕೂಲಂಕಷವಾಗಿ, ಅದರದರ ನಿಜಯೋಗ್ಯತೆಗೆ ಸರಿಯಾದ ನಿರ್ಣಯಿಸುವ ಕಾಲವಿದು. ಈ ಸಮಯದಲ್ಲಿ, ಹೊಸ ಸಾಹಿತ್ಯದಲ್ಲಿ ಮೈಮರೆಯದೆ, ಪ್ರಾಚೀನ ಸಾಹಿತ್ಯದ ಸೊಬಗನ್ನು ವಿಮರ್ಶಾತ್ಮಕವಾಗಿ ತಿಳಿಸಲು ಯತ್ನಿಸುವುದು.

೪. 'ಕನ್ನಡ ಮಹಾಭಾರತ'ವೇ ಮುಂತಾದ ಹಿಂದಿನ ಉದ್ಗ್ರಂಥಗಳನ್ನು ಗಮಕಿಗಳಿಂದ ಓದಿಸಿ ವಿದ್ಯಾರ್ಥಿಗಳಲ್ಲಿ ಕಾವ್ಯವಾಚನಗಳನ್ನೇರ್ಪಡಿಸಿ, ಕಾವ್ಯವಾಚನಕ್ಕೆ ತಕ್ಕ ಉತ್ತೇಜನ ಕೊಡುವುದು.

೫. ಜನರ ಸಹಾಯ ಸಹಾನುಭೂತಿಗಳು ದೊರೆತಲ್ಲಿ, ಕರ್ಣಾಟಕದಲ್ಲಿ ಜನ್ಮವೆತ್ತಿ ಪೂರ್ವದಲ್ಲಿ ನಮ್ಮ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿದ ಪಂಪ, ರನ್ನ, ನಾರಾಣಪ್ಪ ಮೊದಲಾದ ಕವಿವರರು, ನಮ್ಮ ಮತಧರ್ಮಗಳನ್ನು ಶುಚಿಗೊಳಿಸಿ, ಜನಜೀವನವನ್ನು ಉತ್ತಮಗೊಳಿಸಿದ ವಿದ್ಯಾರಣ್ಯರು, ಬಸವೇಶ್ವರರು, ಪುರಂದರದಾಸರು ಮೊದಲಾದ ಮಹಾತ್ಮರ ಜಯಂತ್ಯುತ್ಸವಗಳನ್ನು ನೆರವೇರಿಸುವುದು.

೬. ಪೂರ್ವದಲ್ಲಿ ನಮ್ಮ ಸಂಸ್ಕೃತಿಗೆ, ಸಾಹಿತ್ಯಕ್ಕೆ ನೆಲೆಯಾದ, ಇಂದಿಗೂ ಅನೇಕ ವಿಧದಲ್ಲಿ ನೆರವಾಗಿರುವ (ನಮ್ಮ) ಪ್ರಾಚೀನ ಆರ್ಯ ಸಂಸ್ಕೃತಿಯ ನೆಲೆಗಟ್ಟಾದ ಸಂಸ್ಕೃತ ಭಾಷಾ ಸಾಹಿತ್ಯ ವೇದಾಂತಗಳ ವಿಚಾರವಾಗಿಯೂ ವಿದ್ಯಾಪರಿಣಿತರಿಂದ ಉಪನ್ಯಾಸವೇರ್ಪಡಿಸುವುದು.

೭. ಯಾವ ವಿಧದಿಂದಲೂ ಸಂಕುಚಿತವಾಗಿ ಪ್ರವರ್ತಿಸಬಾರದು. ಇಂದಿನ ಸಾಹಿತ್ಯಕ್ಕೆ ಸ್ಫೂರ್ತಿದಾಯಕವಾಗಿರುವ ಇಂಗ್ಲೀಷು ಮೊದಲಾದ ಭಾಷೆಗಳಿಂದ ಜ್ಞಾನ ಭಂಡಾರದ ಎಲ್ಲ ಭಾಗಗಳಿಂದ ಕನ್ನಡಕ್ಕೆ ಆಗುತ್ತಿರುವ, ಕನ್ನಡ ಜನಕ್ಕೆ ಆಗಬಹುದಾದ ಉಪಕಾರವನ್ನು ಬಗೆದು, ಅವುಗಳ ವಿಷಯವಾಗಿಯೂ ಉಪನ್ಯಾಸ ಕೊಡಿಸಲು ಯತ್ನಿಸುವುದು.

೮. ಶಿವಮೊಗ್ಗೆಯಂತಹ ದೊಡ್ಡ ಪಟ್ಟಣದಲ್ಲಿ ಒಳ್ಳೆಯ ಪುಸ್ತಕ ಭಂಡಾರವೊಂದು ಇಲ್ಲದಿರುವುದು ಶೋಚನೀಯವಾಗಿದೆ. ಈ ಕೊರತೆಯನ್ನು ದೂರಮಾಡಲು, ಜನರ ಸಹಾಯದಿಂದ ಪುಸ್ತಕ ಭಂಡಾರವೊಂದನ್ನು ಶಿವಮೊಗ್ಗೆಯಲ್ಲಿ ಸ್ಥಾಪಿಸಬೇಕೆಂಬುದು ಸಂಘದ ಘನೋದ್ದೇಶಗಳಲ್ಲಿ ಒಂದಾಗಿದೆ.

ಕರ್ಣಾಟಕ ಸಂಘದ ಉದ್ದೇಶ ಸಾಧನೆಗಾಗಿ ಆಡಳಿತಮಂಡಳಿಯೊಂದನ್ನು ರಚಿಸಲಾಯಿತು. ಅದರಲ್ಲಿ ಶ್ರೀಮಾನ್ ಡಿ. ಗುರುರಾವ್, ಶ್ರೀಮಾನ್ ಕೂಡಲಿ ಚಿದಂಬರಂ, ಶ್ರೀಮಾನ್ ಭೂಪಾಳಂ ಚಂದ್ರಶೇಖರಯ್ಯ, ಶ್ರೀಮಾನ್ ಎನ್.ಎಸ್. ಕೃಷ್ಣಮೂರ್ತಿ, ಶ್ರೀಮಾನ್ ಎಸ್.ವಿ. ಕೃಷ್ಣಮೂರ್ತಿರಾವ್, ಶ್ರೀಮಾನ್ ಆರ್. ಕೃಷ್ಣಶೆಟ್ಟಿ ಶ್ರೀಮಾನ್ ಎ.ಎನ್. ನಾರಾಯಣ ಭಟ್ಟ, ಶ್ರೀಮಾನ್ ಭೂಪಾಳಂ ಪುಟ್ಟನಂಜಪ್ಪ ಶ್ರೀಮಾನ್ ಡಿ.ಆರ್. ಮಾನಪ್ಪ ಇವರು ಇದ್ದರು. ಉದ್ದಾಮ ಪಂಡಿತರಾದ ವೇ|| ಬ್ರ|| ಶ್ರೀ|| ಕುಕ್ಕೇ ಸುಬ್ರಹ್ಮಣ್ಯ ಶಾಸ್ತ್ರಿಗಳು ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಅದೇ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ತನಗೂ ಜನಸಾಮಾನ್ಯರಿಗೂ ಹತ್ತಿರದ ಸಂಬಂಧವನ್ನು ಕಲ್ಪಿಸುವ ಉದ್ದೇಶವನ್ನು ಅಲ್ಲಿನ ಅಧ್ಯಾಪಕ ಸಂಘದವರು ಸಾಕಾರಾಗೊಳಿಸತೊಡಗಿದರು. ಅವರು ರಜೆಯ ಕಾಲದಲ್ಲಿ ಮೈಸೂರು ಸಂಸ್ಥಾನದ ವಿವಿಧ ಪಟ್ಟಣಗಳಲ್ಲಿ ವಿವಿಧ ವಿಷಯಗಳ ಮೇಲೆ ಉಪನ್ಯಾಸ ಸಪ್ತಾಹ ಗಳನ್ನು ಏರ್ಪಡಿಸತೊಡಗಿದರು. (೧೯೩.೩.ರಿಂದ). ಅದರಂತೆ, ಅಧ್ಯಾಪಕ ವರ್ಗದ ವರನ್ನು ಶಿವಮೊಗ್ಗಕ್ಕೆ ಆಹ್ವಾನಿಸಿ ಮೊದಲನೆಯ ಉಪನ್ಯಾಸ ಸಪ್ತಾಹವನ್ನು ಯಶಸ್ವಿ ಯಾಗಿ ನಡೆಸಲಾಯಿತು. ಆ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಡಾ|| ಇ.ಸಿ. ಮೆಟ್ಕಾಫ್ ಅವರು ಶಿವಮೊಗ್ಗಕ್ಕೆ ಬಂದು ಉಪನ್ಯಾಸ ಸಪ್ತಾಹದ ಬಗೆಗೂ, ಕನ್ನಡದ ಬಗೆಗೂ ಅಭಿಮಾನಪೂರಕವಾದ ಮಾತುಗಳನ್ನಾಡಿದರು. '....ಜ್ಞಾನ ಪ್ರಸಾರದ ಉದ್ದೇಶದಿಂದ ಹೊರಟಿರುವ ಕನ್ನಡದ ಚಳುವಳಿಯ ವಿಷಯದಲ್ಲಿ ವಿಶ್ವವಿದ್ಯಾನಿಲಯದ ಸಹಾನುಭೂತಿಯಿಂದೆಯೆಂದು ವ್ಯಕ್ತಗೊಳಿಸಿದ್ದಲ್ಲದೆ ಜನತೆಯನ್ನು ಮುಟ್ಟಲು ಜನತೆಯ ಭಾಷೆಯಾದ ಕನ್ನಡವೇ ಸಾಧನವೆಂದು ಸ್ಪಷ್ಟವಾಗಿ ನುಡಿದರು, ಮೆಟ್ಕಾಫ್ ಅವರ ಅಂದಿನ ಮಾತುಗಳು ನಿಜಕ್ಕೂ ಉತ್ತೇಜನಕಾರಿಯಾದುದು.★

**ಭಾರತ ವಾಚನ**

ಭಾರತ ವಾಚನವನ್ನು ಪ್ರಸಿದ್ಧ ಗಮಕಿಗಳಾದ ಎಸ್.ಜಿ. ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಎಸ್.ಬಿ. ಸಂಪತ್ಕುಮಾರಾಚಾರ್‌ರವರು ಮತ್ತು ಎ.ಎನ್. ಗುಂಡಪ್ಪನವರು ನಡೆಸಿಕೊಟ್ಟರು. ಗಮಕ ವಾಚನವನ್ನು ಕರ್ಣಾಟಕ ಸಂಘದವರು ವ್ಯವಸ್ಥೆ ಮಾಡಿದ್ದರು.

**ಕಾವ್ಯವಾಚನ**

ಬಿ.ಎಂ. ಶ್ರೀಕಂಠಯ್ಯನವರು, ಕೆ.ವಿ. ಪುಟ್ಟಪ್ಪನವರು, ಟಿ.ಎಸ್. ವೆಂಕಣ್ಣಯ್ಯ ನವರು

---

★ ಡಾ|| ಇ.ಪಿ. ಮೆಟ್ಕಾಫ್‌ರವರು ಆ ಸಂದರ್ಭದಲ್ಲಿ ಮಾಡಿದ ಪೂರ್ಣ ಭಾಷಣದ ಕನ್ನಡ ಅನುವಾದವನ್ನು - ಪ್ರಬುದ್ಧ ಕರ್ಣಾಟಕದ ೧೫ನೆಯ ಸಂಪುಟದ ೩ನೆಯ ಸಂಚಿಕೆಯಲ್ಲಿ ನೋಡಬಹುದು.

'ಯಶೋಧರ ಚರಿತೆ', 'ಆದಿಪುರಾಣ', 'ಪಂಪರಾಮಾಯಣ', 'ಹರಿಶ್ಚಂದ್ರ ಕಾವ್ಯ', 'ಕನ್ನಡ ಕಾದಂಬರಿ', ಬಸವದೇರಾಜ ರಗಳೆ, ಈ ಮುಂತಾದ ಗ್ರಂಥಗಳಿಂದ ಆಯ್ದಭಾಗವನ್ನು ಓದಿ, ಜನಸಾಮಾನ್ಯರಲ್ಲಿ ಹಳಗನ್ನಡ ಗ್ರಂಥಗಳ ಬಗ್ಗೆ ಅಭಿರುಚಿ ಹುಟ್ಟಿಸಲು ಪ್ರಯತ್ನ ನಡೆಸಿದರು.

### ಕವಿತಾ ವಾಚನ

ಇದು ಹಿಂದಿನದಕ್ಕಿಂತ ಭಿನ್ನವಾದುದು. ಈ ಕಾರ್ಯಕ್ರಮದಲ್ಲಿ ಸ್ವತಃ ಕವಿಗಳೇ ತಮ್ಮ ಸ್ವರಚನೆಗಳನ್ನು ಓದುವ ಅವಕಾಶವನ್ನು ಕರ್ಣಾಟಕ ಸಂಘ ಒದಗಿಸಿತು. ಕವಿಗಳಾದ ಶ್ರೀಯುತ ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಪುಟ್ಟಪ್ಪ ಜಿ.ಪಿ. ರಾಜರತ್ನಂ, ಪಿ.ಟಿ. ನರಸಿಂಹಾಚಾರ್, ಕಡಂಗೋಡ್ಲು ಶಂಕರಭಟ್ಟ, ದತ್ತಾತ್ರೇಯ ರಾಮಚಂದ್ರಬೇಂದ್ರೆ ತಮ್ಮ ಸ್ವರಚಿತಕವನಗಳನ್ನು ಓದಿ, ಜನಸಾಮಾನ್ಯರಿಗೆ ಹೊಸ ಕವಿತೆಯ ದಿಕ್ಕನ್ನು ಪರಿಚಯ ಮಾಡಿಕೊಟ್ಟರು.

### ನಾಟಕಾಭಿನಯ

ಕರ್ಣಾಟಕ ಸಂಘವು ತನ್ನ ಧ್ಯೇಯೋದ್ದೇಶಗಳಿಗನುಗುಣವಾಗಿ ಜನರಿಗೆ ಹೊಸ ನಾಟಕಗಳಲ್ಲಿ ರಂಗ ಪ್ರದರ್ಶನಗಳ ಮೂಲಕ ಮಾಡಿಕೊಟ್ಟಿತು. ಅದರಂತೆ 'ಯಮನ ಸೋಲು', 'ಆಷಾಢಭೂತಿ', 'ಸಾವಿನ ಸಮಸ್ಯೆ', 'ಹೋಂರೂಲು', 'ಗಂಡಗೊಡಲಿ' ಈ ನಾಟಕಗಳನ್ನು ಪ್ರದರ್ಶಿಸಿತು.

### ಪುಸ್ತಕ ವ್ಯಾಪಾರ

ಪಠ್ಯಪುಸ್ತಕಗಳಲ್ಲದೆ ಇತರ ಸಾಹಿತ್ಯ ಗ್ರಂಥಗಳನ್ನು ಮಾರಾಟ ಮಾಡುವವರು ಅತ್ಯಲ್ಪವಾಗಿದ್ದರು. ಇದನ್ನು ಮನಗಂಡು ಕರ್ಣಾಟಕ ಸಂಘವು ೧೯೩೧ನೆಯ ಇಸವಿ ಮಾರ್ಚಿ ೭ನೆಯ ತಾರೀಖಿನಂದು ಪುಸ್ತಕ ವ್ಯಾಪಾರ ಶಾಖೆಯೊಂದನ್ನು ತೆರೆಯಿತು. (ಶಿವಮೊಗ್ಗದಲ್ಲಿ) ಪ್ರಾರಂಭದಲ್ಲಿ ಬೆಂಗಳೂರಿನ ರಾಮಮೋಹನ ಕಂಪನಿ, ಧಾರವಾಡದ ಶಿಕ್ಷಣ ಸಮಿತಿಯವರು ತಮ್ಮ ಕನ್ನಡ ಗ್ರಂಥ ಪ್ರಕಟಣೆಗಳನ್ನು ಮಾರಲು ಅನುವು ಮಾಡಿಕೊಟ್ಟರು. ಅದೇ ರೀತಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರೂ ತಮ್ಮ ಪ್ರಕಟಣೆಗಳನ್ನು ಮಾರಾಟ ಮಾಡಲು ಒದಗಿಸಿಕೊಟ್ಟರು. ಗಮನಿಸಬೇಕಾದ ಸಂಗತಿ ಅಂದರೆ ಆ ಕಾಲದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲು ಮುಂದಾದ ಸಂಘಗಳಲ್ಲಿ ಇದೇ ಮೊದಲನೆಯದು.

### ಗ್ರಂಥ ಪ್ರಕಟಣೆ

ಕರ್ಣಾಟಕ ಸಂಘದ ಪ್ರಾರಂಭದ ದಿನದಿಂದಲೇ ಕನ್ನಡದ ಉತ್ತಮ ಗ್ರಂಥಗಳನ್ನು ಪ್ರಕಟಿಸುವ ಪರಿಪಾಠರವನ್ನು ಹಾಕಿಕೊಳ್ಳಲಾಯಿತು. ಮೊದಲ ಐದು ವರ್ಷಗಳ ಅಂದರೆ ಕೂಡಲಿ ಚಿದಂಬರಂ ಅವರು ಸಂಘದ ಗೌರವ ಕಾರ್ಯದರ್ಶಿಗಳಾಗಿದ್ದಾಗ ಸಮಯದಲ್ಲಿ

ಪ್ರಕಟವಾದ ಕೃತಿಗಳು ಈ ರೀತಿ ಇವೆ.

| ಸಂ. | ಗ್ರಂಥದ ಹೆಸರು | ಗ್ರಂಥಕರ್ತರು | ಪ್ರಕಾರ | ಪ್ರತಿಗಳು | ವರ್ಷ |
|---|---|---|---|---|---|
| ೧. | ಸಾಹಿತ್ಯ ಪ್ರಚಾರ | ಕೆ.ವಿ. ಪುಟ್ಟಪ್ಪ | ಉಪನ್ಯಾಸ (ಭಾಷಣ) | ೫೦೦ | ೧೯೩೦ |
| ೨. | ಕನ್ನಡ ಮೇಘ ಸಂದೇಶ | ಪಂಡಿತ ಕುಕ್ಕೆ ಸುಬ್ರಹ್ಮಣ್ಯ ಶಾಸಿ | ಪದ್ಯಕಾವ್ಯ (ಸಂಸ್ಕೃತ ಮೂಲ) | ೧೦೦೦ | ೧೯೩೧ |
| ೩. | ರಕ್ತಾಕ್ಷಿ | ಕೆ.ವಿ. ಪುಟ್ಟಪ್ಪ | ನಾಟಕ | ೧೦೦೦ | ೧೯೩೨ |
| ೪. | ಗಂಡುಗೊಡಲಿ | ಜಿ.ಪಿ. ರಾಜರತ್ನಂ | ನಾಟಕ | ೧೦೦೦ | ೧೯೩೨ |
| ೫. | ಹಣಗಳು | ಜಿ.ಪಿ. ರಾಜರತ್ನಂ | ಲಘು ಚಿತ್ರಗಳು | ೧೦೦೦ | ೧೯೩೩ |
| ೬. | ಪಾಂಚಜನ್ಯ | ಕೆ.ವಿ. ಪುಟ್ಟಪ್ಪ | ಕವಿತಾ ಸಂಗ್ರಹ | ೧೦೦೦ | ೧೯೩೪ |
| ೭. | ಮಾಟಗಾತಿ | 'ಆನಂದ' | ಸಣ್ಣಕಥೆಗಳು | ೧೦೦೦ | ೧೯೩೪ |
| ೮. | ನವಿಲು-೧ನೆಯ ಭಾಗ | ಕೆ.ವಿ. ಪುಟ್ಟಪ್ಪ | ಕವಿತಾ ಸಂಗ್ರಹ | ೧೦೦೦ | ೧೯೩೪ |
| ೯. | ನವಿಲು-೨ನೆಯ ಭಾಗ | ಕೆ.ವಿ. ಪುಟ್ಟಪ್ಪ | ಕವಿತಾ ಸಂಗ್ರಹ | ೧೦೦೦ | ೧೯೩೪ |
| ೧೦. | ಪಾತಾಳದಲ್ಲಿ ಪಾಪಚ್ಚಿ | ನಾ. ಕಸ್ತೂರಿ | ಬಾಲಸಾಹಿತ್ಯ (ಇಂಗ್ಲಿಷ್ ಮೂಲದ ರೂಪಾಂತರ) | ೧೦೦೦ | ೧೯೩೫ |

ಈ ಎಲ್ಲ ಗ್ರಂಥಗಳು ಹೊಸ ಲೇಖಕರ ಕೃತಿಗಳೇ ಆಗಿರುವುದು ವಿಶೇಷ. ಸಂಘ ಅಂದಿನ ಹೊಸ ಪೀಳಿಗೆಯ ಲೇಖಕರನ್ನು ಹೇಗೆ ಉತ್ತೇಜಿಸಿತು ಎಂಬುದಕ್ಕೆ ಈ ಪ್ರಕಟಣೆಗಳೇ ಸಾಕ್ಷಿಯಾಗಿವೆ ಅನ್ನಬಹುದು.

ಕರ್ಣಾಟಕ ಸಂಘವು ನಾಡಿನ ಸಾಹಿತ್ಯ-ಸಂಸ್ಕೃತಿಯ ಪ್ರಚಾರ-ಪ್ರಸಾರಕ್ಕೆ ಹಾಕಿಕೊಂಡಂಥ ಕಾರ್ಯಕ್ರಮಗಳು ಹಾಗೂ ಅವನ್ನು ಅನುಷ್ಠಾನಗೊಳಿಸುವಲ್ಲಿ ತೋರಿಸಿದ ಶ್ರದ್ಧೆ ನಿಜಕ್ಕೂ ಶ್ಲಾಘನೀಯವಾದುದು. ಕರ್ಣಾಟಕ ಸಂಘದ ಆಡಳಿತ ಮಂಡಳಿಯ ಎಲ್ಲರೂ ಸಂಘದ ಯಶಸ್ಸಿನ ಹಿಂದೆ ದುಡಿದಿರುವಂತೆ ಅದರ ಗೌರವ ಕಾರ್ಯದರ್ಶಿಗಳಾದ (ಮೊದಲು ಸಹಾಯಕ ಕಾರ್ಯದರ್ಶಿ) ಕೂಡಲಿ ಚಿದಂಬರಂ ಅವರ ಪ್ರಾಮಾಣಿಕ ಪ್ರಯತ್ನವೂ ಗಮನೀಯವಾದುದೇ ಆಗಿದೆ. ಹೀಗೆ ಶಿವಮೊಗ್ಗೆಯ ಕರ್ಣಾಟಕ ಸಂಘದ ಭದ್ರ ಬುನಾದಿಗೆ ಶ್ರಮಿಸಿದ ಕೂಡಲಿ ಚಿದಂಬರಂರವರ ಅದರೊಂದಿಗಿನ ನಂಟು ಎಂದೆಂದೂ ಸ್ಮರಣೀಯವಾದುದು.

■

# ವಿಚಾರ ವಾಹಿನಿ

ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗೆಗೆ ಅಪಾರವಾದ ಪ್ರೀತಿ ಹೊಂದಿದ್ದ ಕೂಡಲಿ ಚಿದಂಬರಂ ಸದಾಕಾಲ ಆ ಬಗ್ಗೆ ಚಿಂತಿಸುತ್ತ ಕಾರ್ಯೋನ್ಮುಖರಾಗುತ್ತಿದ್ದರು ಎಂಬುದು ಸರಿಯಷ್ಟೆ. ಅದರ ಫಲವೇ 'ವಿಚಾರ ವಾಹಿನಿ' ಎಂಬ ಸಾಹಿತ್ಯಿಕ ಮಾಸಿಕದ ಪ್ರಕಟಣೆ.

ಕೂಡಲಿ ಚಿದಂಬರಂ ವಕೀಲ ವೃತ್ತಿಯಲ್ಲಿ ಭ್ರಮನಿರಸನಗೊಂಡು ಅದಕ್ಕೆ ತಿಲಾಂಜಲಿ ನೀಡಿದ ನಂತರ ಜೀವನೋಪಾಯಕ್ಕಾಗಿ ಬೇರೊಂದು ಪ್ರಯತ್ನವನ್ನು ನಡೆಸಬೇಕಾಯಿತು. ಈ ಪರಿಣಾಮ ಅವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಕೋ- ಆಪರೇಟಿವ್ ಪೀಪಲ್ಸ್ ಬ್ಯಾಂಕ್‌ನಲ್ಲಿ ಉದ್ಯೋಗಕ್ಕೆ ಸೇರಿ, ಅಲ್ಲೇ ಸಂಸಾರದೊಂದಿಗೆ ಕೆಲಕಾಲ ನೆಲೆಸಿದರು. (ಕೆಲಸಕ್ಕೆ ಸೇರಿದುದು ೨೦.೭.೧೯೩೯ ರಂದು.)

ತೀರ್ಥಹಳ್ಳಿಯಲ್ಲಿದ್ದಷ್ಟು ಕಾಲದಲ್ಲಿ ಅವರು ತಮ್ಮ ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳುವಲ್ಲಿ ದೃಢ ಹೆಜ್ಜೆ ಇಟ್ಟರು. ಆ ಹೆಜ್ಜೆಯ ಪ್ರತೀಕವಾಗಿಯೇ ಮೂಡಿಬಂದುದು 'ವಿಚಾರ ವಾಹಿನಿ' ೧೯೩೯ ರಲ್ಲಿ, ಸಂಪಾದಕರು ಕೂಡಲಿಚಿದಂಬರಂ.

ಸಾಹಿತ್ಯ-ಸಂಸ್ಕೃತಿಯ ಚಿಂತನೆಯ ಲೇಖನಗಳ ಜೊತೆ ಜೊತೆಗೆ ದೇಶೀಯ ವಾದ ಚಿಂತನೆಯ ಲೇಖನಗಳು, ಕೃಷಿ ಸಂಬಂಧಿ ಲೇಖನಗಳು ಆರ್ಥಿಕ ಚಿಂತನೆಯ ಲೇಖನಗಳು. ವಿಚಾರವಾಹಿನಿಯಲ್ಲಿ ನಿಯತವಾಗಿ ಪ್ರಕಟವಾಗುತ್ತಿದ್ದವು. ಇವುಗಳ ಜೊತೆಗೆ ಗ್ರಂಥವಿಮರ್ಶೆ, ವಿಚಾರ ವಾಹನಿ ಎಂಬ ಶೀರ್ಷಿಕೆ ಅಡಿಯಲ್ಲಿ ಅಂದಿನ ಮೈಸೂರು ಸಂಸ್ಥಾನ ಹಾಗೂ ಕನ್ನಡ ನಾಡಿನ ವಿವಿಧ ಚಟುವಟಿಕೆಗಳ ಸಂಕ್ಷಿಪ್ತ ವರದಿಯಿರುತ್ತಿತ್ತು. ಕೆ.ವಿ. ಪುಟ್ಟಪ್ಪ ನಾ. ಕಸ್ತೂರಿ (ನಾಕ ಕಾವ್ಯನಾಮದಿಂದ), ಶಿವರಾಮಕಾರಂತ, ಎಸ್.ವಿ. ಪರಮೇಶ್ವರ ಭಟ್ಟ ತೀ.ನಂ. ಶ್ರೀಕಂಠಯ್ಯ, ಎಸ್.ವಿ. ಶ್ರೀನಿವಾಸರಾವ್ ಮುಂತಾದವರು ಅದರಲ್ಲಿ ಬರೆಯುತ್ತಿದ್ದರು. ೬೪ ಪುಟಗಳ ಸಂಚಿಕೆಯೊಂದರ ಬೆಲೆ ೪ ಆಣೆ ಮಾತ್ರವಾಗಿತ್ತು. ವಾರ್ಷಿಕ ಚಂದ ರೂ. ೩ ಮಾತ್ರ. ಆಕಾರ : ಡೆಮ್ಮಿ ಅಷ್ಟದಳ.

'ವಿಚಾರ ವಾಹಿನಿ'ಯ ಲೇಖನಗಳು ಹೇಗೆ ವಿಚಾರಪ್ಲುತವಾಗಿದ್ದು ದೇಶೀಯ ಚಿಂತನೆಯನ್ನು ಬೆಳೆಸುವಲ್ಲಿ ಮುಂದಾಗಿದ್ದವು ಎಂಬುದನ್ನು ಮನದಟ್ಟು ಮಾಡಿಕೊಳ್ಳುವ

ದೃಷ್ಟಿಯಿಂದ ಎಸ್.ವಿ. ಶ್ರೀನಿವಾಸರಾವ್ (ಎಸ್.ವಿ.ಶ್ರೀ) ಬರೆದ ಒಂದು ಲೇಖನವನ್ನು ಯಥಾವತ್ತಾಗಿ ಕೊಟ್ಟಿದೆ. ('ವಿಚಾರ ವಾಹಿನಿ'ಯ ಸಂಚಿಕೆ ೧ ಸಂಪುಟ, ೭-೮ ಪುಟ ೪೦೬-೪೧೬).

## ದೇಶೀಯ ಮೂಲ ಶಿಕ್ಷಣ

ವರ್ಧಾದಲ್ಲಿ ೧೯೩೭ನೆಯ ಅಕ್ಟೋಬರ್ ೨೨ ಮತ್ತು ೨೩ನೆಯ ತಾರೀಕು ಗಳಲ್ಲಿ ಅಖಿಲ ಭಾರತ ದೇಶೀಯ ಶಿಕ್ಷಣದ ಅಧಿವೇಶನವು ಮಾರ್ವಾಡಿ ಶಿಕ್ಷಣ ಸಂಘದ ರಜತ ಮಹೋತ್ಸವದ ಸಂದರ್ಭದಲ್ಲಿ ಸೇರಿತು. ಮಹಾತ್ಮಾ ಗಾಂಧಿಯವರು ಇದರ ಅಧ್ಯಕ್ಷರಾಗಿದ್ದರು. ಹಿಂದೆ ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ ಈಗಿನ ಶಿಕ್ಷಣವನ್ನು ವಿಮರ್ಶಿಸಿ, ಅದರ ಅಸಮರ್ಪಕತೆಯನ್ನು ತೋರಿಸಿ, ದೇಶೀಯ ಶಿಕ್ಷಣದಲ್ಲಿ ಅಗತ್ಯವಾಗಿ ಮಾಡಬೇಕಾದ ಬದಲಾಣೆಗಳನ್ನು ಸೂಚಿಸಿ, ಅನೇಕ ಲೇಖನಗಳನ್ನು ಬರೆದಿದ್ದರು. ಆದರಿಂದ ಅವರನ್ನು ಈ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಿದರು.

ಈ ಅಧಿವೇಶನದಲ್ಲಿ ಈ ನಿರ್ಣಯಗಳಾದುವು :

೧. ದೇಶಕ್ಕೆಲ್ಲ ಅನ್ವಯಿಸುವಂತೆ ಏಳು ವರ್ಷಗಳ ಉಚಿತವಾದ ಒತ್ತಾಯ ಶಿಕ್ಷಣವನ್ನು ಕೊಡಬೇಕು.

೨. ಶಿಕ್ಷಣವನ್ನು ಮಾತೃಭಾಷೆಯ ಮೂಲಕ ಕೊಡತಕ್ಕದ್ದು.

೩. ಮಹಾತ್ಮಗಾಂಧಿಯವರು ಸೂಚಿಸಿರುವಂತೆ ಈ ಶಿಕ್ಷಣವು ಮಗುವಿನ ಆವರಣ ದಲ್ಲಿರುವ ಮತ್ತು ಆದಾಯವನ್ನು ದೊರಕಿಸುವ (Productive) ಒಂದು ಕೈ ಕಸಬನ್ನು ಹೊಂದಿಕೊಂಡು ಅದನ್ನೆ ಸಾಧ್ಯವಾದಮಟ್ಟಿಗೆ ಶಿಕ್ಷಣದ ಕೇಂದ್ರವಾಗಿಟ್ಟುಕೊಳ್ಳುವ ತತ್ವವನ್ನು ಈ ಸಭೆ ಅನುಮೋದಿಸುತ್ತದೆ.

೪. ಈ ರೀತಿಯಲ್ಲಿ ಏರ್ಪಾಡಾದ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಮೇಣ ಉಪಾಧ್ಯಾಯರ ಸಂಬಳಕ್ಕೆ ಸಾಕಾಗುವಷ್ಟು ಉತ್ಪತ್ತಿ ಆಗಬಹುದೆಂದು ಈ ಸಭೆ ನಿರೀಕ್ಷಿಸುತ್ತದೆ. ಆಮೇಲೆ ೧೦ ಜನರನ್ನೊಳಗೊಂಡ ಒಂದು ಸಮಿತಿ ಏರ್ಪಟ್ಟು ಈ ನಿರ್ಣಯ ಗಳಿಗನುಸಾರವಾಗಿ ಈ ಶಿಕ್ಷಣದ ಪಾಠಗಳನ್ನು (Syllabus) ಗೊತ್ತುಮಾಡಿ, ಅಧ್ಯಕ್ಷರಿಗೆ ವರದಿಯನ್ನು ಒಂದು ತಿಂಗಳಿನಲ್ಲಿ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು.

**ಈ ಸಮಿತಿಯ ಸದಸ್ಯರು ಇವರುಗಳು :**

೧. ಡಾ|| ಜಕೀರ್ ಹುಸೇನ್, ಪಿ.ಎಚ್‌ಡಿ. (ಬರ್ಲಿನ್) ಜಾಮಿಯಾಮಿಲ್ಲಾ

ಇಸ್ಲಾಮಿಯಾ ಕಾಲೇಜಿನ ಪ್ರಿನ್ಸಿಪಾಲರು (ಅಧ್ಯಕ್ಷರು).

೨. ಪ್ರೊಫೆಸರ್ ಖ್ವಾಜಾ ಗುಲಾಂ ಸಯ್ಯುದೀನ್, ಬಿ.ಎ., ಎಂ.ಈಡಿ., (ಲೀಡ್ಸ್), ಅಲಿಘರ್ ವಿಶ್ವವಿದ್ಯಾನಿಲಯದ ಪ್ರೊಫೆಸರು ಅಲ್ಲದೆ ಕಾಶ್ಮೀರದ ಶಿಕ್ಷಣ ಡೈರೆಕ್ಟರು.

೩. ಶ್ರೀ ವಿನೋಬ ಭಾವೆ, ೨೦ ವರ್ಷಗಳ ಕಾಲ ಉಪಾಧ್ಯಾಯರಾಗಿದ್ದವರು.

೪. ಶ್ರೀ ಕಾಕಾ ಸಾಹೇಬ್ ಕಾಲೇಲ್ಕರ್, ಶಾಂತಿನಿಕೇತನದಲ್ಲಿ ಅಧ್ಯಾಪಕರಾಗಿದ್ದು ಆಮೇಲೆ ಸಬರ್ಮತಿ ಆಶ್ರಮದ ಶಾಲೆಯ ಮತ್ತು ಗುಜರಾತಿನ ವಿದ್ಯಾಪೀಠದ ಪ್ರಿನ್ಸಿಪಾಲರಾಗಿದ್ದರು.

೫. ಶ್ರೀ ಕಿಶೋರ್ ಲಾಲ್ ಮಶ್ರುವಾಲ, ಬಿ.ಎ., ಎಲ್.ಎಲ್‌ಬಿ., ಸತ್ಯಾಗ್ರಹ ಆಶ್ರಮದ ಅಧ್ಯಾಪಕರಾಗಿದ್ದು ಗುಜರಾತಿನ ವಿದ್ಯಾಪೀಠದ ರಿಜಿಸ್ಟ್ರಾರ್ ಮತ್ತು ಪ್ರೊಫೆಸರ್ ಆಗಿದ್ದವರು.

೬. ಶ್ರೀಮತಿ ಆಶಾದೇವಿ ಆರ್ಯನಾಯಕಂ, ಎಂ.ಎ. ಕಾಶಿಯ ಮಹಿಳೆಯರ ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಶಾಂತಿನಿಕೇತನದ ವಿಶ್ವಭಾರತಿಯ ರೆಕ್ಟಾರರೂ ಆಗಿದ್ದು ಈಗ ವಧಾನಲ್ಲಿ ಮಹಿಳಾ ವಿದ್ಯಾಲಯದ ಪ್ರಿನ್ಸಿಪಾಲರು.

೭. ಶ್ರೀ ಕೃಷ್ಣದಾಸ್ ಜಾಜು, ಬಿ.ಎ., ಬಿ.ಎಲ್. ಅಖಿಲ ಭಾರತದ ಗ್ರಾಮ ಕೈಗಾರಿಕೆಗಳ ಬೋರ್ಡಿನ ಅಧ್ಯಕ್ಷರಾಗಿದ್ದವರು ಮತ್ತು ಅಖಿಲ ಭಾರತ ನೆಯ್ಗೆಯವರ ಸಂಘದಲ್ಲಿ ಕೆಲಸ ಮಾಡಿರುವರು.

೮. ಪ್ರೊಫೆಸರ್ ಕೆ.ಟಿ. ಷಾ, ಬಿ.ಎ., ಬಿ.ಎಸ್‌ಸಿ. (ಲಂಡನ್) ಬಾರ್-ಅಟ್-ಲಾ ಪ್ರಸಿದ್ಧರಾದ ಅರ್ಥಶಾಸಜ್ಞರು ಮತ್ತು ಲೇಖಕರು.

೯. ಶ್ರೀ ಜೆ.ಸಿ. ಕುಮಾರಪ್ಪ ಎಂ.ಎ. (ಕೊಲಂಬಿಯಾ), ಬಿ.ಎಸ್‌ಸಿ. (ಸೈರಕ್ಯೂಸ್) ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಸ್ಥೆಯ ಕಾರ್ಯದರ್ಶಿರವರು.

೧೦. ಇ.ಡಬ್ಲ್ಯು. ಆರ್ಯನಾಯಕಂ, ಬಿ.ಡಿ., ಬಿ.ಇಡಿ.(ಆನರ್ಸ್), ಎಡಿನ್ ಬರೋ ಡಿಪ್. ಇನ್ ಎಡ್ (ಕ್ಯಾಂಟಾಬ್), ಎಫ್.ಆರ್.ಎಸ್.ಎ. (ಸಮಿತಿಯ ಸಂಚಾಲಕರು (ಕನ್ವೇನರ್)

ಶಾಂತಿನಿಕೇತನದ 'ವಿಶ್ವಭಾರತಿ'ಯ ರೆಕ್ಟಾರರೂ, ಕವಿ ರವೀಂದ್ರರ ಕಾರ್ಯದರ್ಶಿ ಯವರಾಗಿಯೂ, ಆಮೇಲೆ ವರ್ಧಾನಲ್ಲಿ ನವಭಾರತ ವಿದ್ಯಾಲಯದ ಪ್ರಿನ್ಸಿಪಾಲರಾಗಿದ್ದು ಈಗ ವರ್ಧಾನಲ್ಲಿ ವಿದ್ಯಾಮಂದಿರ ಶಿಕ್ಷಣ ಶಾಲಾ ಸಮಿತಿಯ ಅಧ್ಯಕ್ಷರು. ಈ

ಸಮಿತಿಯವರು ೧೯೩೭ನೆಯ ಡಿಸೆಂಬರು ೨ನೆಯ ತಾರೀಕಿನಲ್ಲಿ ದೇಶೀಯ ಮೂಲ ಶಿಕ್ಷಣದ (೧) ತತ್ವಗಳು (೨) ಅದರ ಧ್ಯೇಯಗಳು (೩.) ಏಳು ವರ್ಷಗಳ ಮೂಲ ಶಿಕ್ಷಣ ಕ್ರಮದ ವಿವರಣೆ - ಇವುಗಳನ್ನು ಒಳಗೊಂಡ ವರದಿಯನ್ನು ಗಾಂಧೀಜಿಯವರಿಗೆ ಕಳುಹಿಸಿಕೊಟ್ಟರು. ಮುಂದೆ ೧೯೩೮ನೆಯ ಏಪ್ರಿಲ್ ತಿಂಗಳಲ್ಲಿ ಈ ಶಿಕ್ಷಣ ಕ್ರಮದಲ್ಲಿ ಒಂದು ಕೈ ಕಸಬನ್ನು ಶಿಕ್ಷಣದ ಕೇಂದ್ರವಾಗಿಟ್ಟು ಎಲ್ಲ ಪಾಠಗಳನ್ನು ಅದಕ್ಕೆ ಹೊಂದುವಂತೆ ಹೇಳುವ ರೀತಿಯನ್ನೂ ಹೆಚ್ಚಾಗಿ ವಿವರಿಸಿ ವ್ಯವಸಾಯ ಮತ್ತು ನೆಯ್ಗೆ (ದಾರ ತೆಗೆಯುವುದು, ನೂಲುವುದು) ಕೈ ಕಸಬುಗಳಿಗೆ ಹೊಂದುವಂತೆ ಏಳು ತರಗತಿಗಳಿಗೆ ವಿಶದವಾದ ಪಾಠಗಳ ಪಟ್ಟಿ(Syllabus)ಯನ್ನು ತಯಾರಿಸಿ ಕಳುಹಿಸಿದರು. ಅಲ್ಲದೆ ಅಖಿಲ ಭಾರತ ಶಿಕ್ಷಣದ ಆವಶ್ಯಕತೆಯನ್ನು ತೋರಿಸಿ ಅಂತಹ ಸಂಸ್ಥೆಯೊಂದನ್ನು ಏರ್ಪಡಿಸಬೇಕೆಂದು ಸಮಿತಿಯವರು ಸೂಚಿಸಿದರು. ೧೯೩೮ನೆಯ ಹರಿಪುರದ ಅಧಿವೇಶನದಲ್ಲಿ ಕಾಂಗ್ರೆಸು ಈ ಸೂಚನೆಯನ್ನು ಅನುಮೋದಿಸಿದ ಮೇಲೆ ಅದೇ ವರ್ಷದ ಏಪ್ರಿಲ್ ತಿಂಗಳಲ್ಲಿ ''ಹಿಂದೂಸ್ತಾನಿ ತಾಲೀಮಿ ಸಂಘ'' ಎಂಬ ಹೆಸರಿನಿಂದ ಅಂತಹ ಸಂಸ್ಥೆಯು ಏರ್ಪಟ್ಟಿತು. ಆ ಸಂಘದ ಅಧ್ಯಕ್ಷರು ಡಾ|| ಜಕೀರ್ ಹುಸೇನ್‌ರವರು ಮತ್ತು ಇ.ಡಬ್ಲ್ಯು. ಆರ‍್ಯನಾಯಕಂರವರು ಕಾರ್ಯದರ್ಶಿಯವರು ಈ ಸಂಘದ ಮೊದಲನೆಯ ವರ್ಷದ ವರದಿಯು ಈಗ ತಾನೆ ಹೊರಬಿದ್ದಿದೆ. ಮುಂದೆ ಈ ಲೇಖನದಲ್ಲಿ ಆ ವರದಿಯ ಕೆಲವು ಭಾಗಗಳನ್ನು ಕೊಡುತ್ತೇನೆ.

ಈ ಮೂಲಕ ಶಿಕ್ಷಣ ಮತ್ತು ತತ್ವಗಳೇನು ಎಂಬುದು ಈಗಾಗಲೇ ಈ ಲೇಖನದಲ್ಲಿ ಸ್ಥೂಲವಾಗಿ ಪರಿಚಯವಾಗಿದೆ. ಗಾಂಧೀಜಿಯವರ ಮಾತಿನಲ್ಲಿ ಅದನ್ನು ವಿವರಿಸೋಣ. ''ಮೂಲ ದೇಶೀಯ ಶಿಕ್ಷಣ'' ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುತ್ತ ಗಾಂಧೀಜಿಯವರು ಈ ಶಿಕ್ಷಣವನ್ನು ಹೀಗೆ ವಿವರಿಸಿದ್ದಾರೆ.

''ಸುಮ್ಮನೆ ದೇಶೀಯ ಶಿಕ್ಷಣ ಎಂದು ಕರೆಯುವುದರ ಬದಲು ಹಳ್ಳಿಯ ಕಸಬುಗಳ ಮೂಲಕ 'ಗ್ರಾಮಾಂತರದ ದೇಶೀಯ ಶಿಕ್ಷಣ' ಎಂದು ಹೇಳುವುದು ಮೇಲು. ಗ್ರಾಮಾಂತರ ಶಿಕ್ಷಣ ಎಂದ ಮೇಲೆ, ಇಂಗ್ಲಿಷು ಭಾಷಾಭ್ಯಾಸ ಅಥವಾ ಉಚ್ಚ ಶಿಕ್ಷಣವೆಂದು ಕರೆಯಲ್ಪಡುವ ವಿದ್ಯೆಗೆ ಈ ಕ್ರಮದಲ್ಲಿ ಎಡೆಯಿಲ್ಲ. 'ದೇಶೀಯ' ಎಂದ ಮೇಲೆ ಸದ್ಯದಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಒಳಗೊಂಡಿದೆ ಎಂದು ಅರ್ಥವಾಗುತ್ತದೆ. ಅಲ್ಲದೆ 'ಹಳ್ಳಿಯ ಕಸಬುಗಳ ಮೂಲಕ' ಎಂದರೆ - ಮಕ್ಕಳಲ್ಲಿ ಅಡಗಿರುವ ಶಕ್ತಿ ಸಾಮರ್ಥ್ಯಗಳನ್ನು ಅವರು ವಾಸಿಸುವ ಹಳ್ಳಿಗಳಲ್ಲಿ ಅನುಕೂಲವಾದ ಕೆಲವು ಕೈ ಕಸಬುಗಳ ಮೂಲಕ ಹೊರಪಡಿಸುವಂತೆ ಶಿಕ್ಷಣ ಕೊಡುವುದೇ ಈ ಶಿಕ್ಷಣ ಕ್ರಮದ ಧ್ಯೇಯ, ಹೀಗೆಂದ ಮೇಲೆ ಈ ಕ್ರಮವು ಹಳ್ಳಿಯ ಮಕ್ಕಳ ವಿದ್ಯಾಭ್ಯಾಸದಲ್ಲಿ ತೀರ ಬದಲಾಣೆ, ಅಲ್ಲಿ ಒಂದು ಕ್ರಾಂತಿಯನ್ನೆ ಉಂಟು ಮಾಡುತ್ತದೆ.''

ನಮ್ಮ ದೇಶವು ಹಳ್ಳಿಗಳ ನಾಡು ಎಂದು ಪ್ರಸಿದ್ಧವಾಗಿದೆ. ಇಲ್ಲಿನ ಪ್ರಜಾಸಂಖ್ಯೆ ಹಿಂದಿನ ಜನಗಣತಿ ಪ್ರಕಾರ ೩.೫ ಕೋಟಿ. ಮುಂದಿನ ೧೯೪೧ನೆಯ ಗಣತಿಯ ಪ್ರಕಾರ ೩.೮ ಕೋಟಿಗೆ ಏರುವುದೆಂದು ನಿರೀಕ್ಷಣೆಯಿದೆ. ಇದರ ಸುಮಾರು ಶೇಕಡ ೯೦ ಭಾಗ ಹಳ್ಳಿಗಳಲ್ಲಿ ವಾಸಮಾಡುವ ಜನರಸಂಖ್ಯೆ. ಅಲ್ಲದೆ ಶೇಕಡ ೭೩ ಭಾಗ ಜನಗಳಿಗೆ ವ್ಯವಸಾಯದಿಂದ ಜೀವನ. ಆದ್ದರಿಂದ ದೇಶೀಯ ಶಿಕ್ಷಣದ ಏರ್ಪಾಡು ಗ್ರಾಮಾಂತರದ ಮಕ್ಕಳನ್ನು ಹೆಚ್ಚು ಲಕ್ಷ್ಯದಲ್ಲಿಟ್ಟಿರಬೇಕು. ಇನ್ನು ಇಂಗ್ಲಿಷ್ ಭಾಷೆಯ ವಿಚಾರ. ಜನಗಳಲ್ಲಿ ಮೊದಲು ಅದಕ್ಕಿದ್ದ ಮೋಹ ಈಗ ಬಹುಕಮ್ಮಿಯಾಗಿದೆ. ದೇಶಕ್ಕೆಲ್ಲ ಒಂದು ಭಾಷೆಯು ಆವಶ್ಯಕ; ಅದು ಇಂಗ್ಲಿಷು ಎಂದು ತಿಳಿದು ಅದಕ್ಕೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಾಮುಖ್ಯತೆಯನ್ನು ಕೊಟ್ಟಿದ್ದವರು ನಮ್ಮ ಭಾರತ ಸಂಸ್ಕೃತಿಗೂ, ನಾವುಗಳಾಡುವ ಭಾಷೆಗಳಿಗೂ ಬಹು ಹತ್ತಿರದಲ್ಲಿರುವ ಹಿಂದಿಯು ಈ ಸಾಮಾನ್ಯ ಭಾಷೆಯಾಗಬಹುದೆಂದು ಈಗ ಹೇಳುತ್ತಿದ್ದಾರೆ. ಎಲ್ಲ ವಿಷಯಗಳನ್ನೂ ಇಂಗ್ಲಿಷಿನ ಮೂಲಕ ಹೇಳಿಕೊಡ ಬೇಕು ಎನ್ನುವ ಕಾಲ ಹೋಯಿತು. ಈಗ ಭಾಷೇತರ ಪಾಠಗಳನ್ನು ಆಯಾ ಪ್ರಾಂತದ ದೇಶಭಾಷೆಯಲ್ಲಿ ಹೇಳಬೇಕೆನ್ನುವುದು ನಿರ್ವಿವಾದ ವಿಷಯ. ಆದ್ದರಿಂದ ಈ ಮೂಲ ಶಿಕ್ಷಣ ಕ್ರಮದಲ್ಲಿ ಇಂಗ್ಲಿಷಿಗೆ ಎಡೆಯಿಲ್ಲದಿರುವುದು ಸಹಜವೆ.

ಮೂರನೆಯದಾಗಿ ಶಿಕ್ಷಣಕ್ಕೂ ಸತ್ಯ ಮತ್ತು ಅಹಿಂಸೆಗೂ ಏನು ಸಂಬಂಧವೆಂಬ ಪ್ರಶ್ನೆ. ಈ ಸಂದರ್ಭದಲ್ಲಿ ಕೆಲವು ದಿನಗಳ ಹಿಂದೆ ನಡೆದ ಒಂದು ಸಂಭಾಷಣೆ ನೆನಪಿಗೆ ಬರುತ್ತದೆ. ನನ್ನ ಸ್ನೇಹಿತರು ಕೆಲವರು ಸಂಜೆ ಟೆನ್ನಿಸ್ ಆಟವಾದ ಮೇಲೆ ವಿನೋದ ಮಾಡುತ್ತ ಹರಟೆ ಹೊಡೆಯುತ್ತಿದ್ದಾಗ ಸ್ಕೂಲಿನ ಉಪಾಧ್ಯಾಯರು ಆ ಊರಿನ ಎಕ್ಸೈಜು ಇನ್‌ಸ್ಪೆಕ್ಟರನ್ನು ಕುರಿತು, ಆಗತಾನೆ ನಡೆದಿದ್ದ ಸೇಂದಿ ಹರಾಜು ವಿಚಾರವಾಗಿ "ಅಂತಾ ಜನರಗಳಿಗೆ ಹೆಂಡ ಕುಡಿಸಿ, ಕುಡಿಸಿ ಸರ್ಕಾರದ ಟ್ರೆಜರಿಗೆ ದುಡ್ಡು ತುಂಬೋದು – ಎಕ್ಸೈಜು ಇನ್‌ಸ್ಪೆಕ್ಟರ ಕೆಲಸ ಇದೆ ತಾನೆ?" ಎಂದು ಹೇಳಿದರು. "ಹೌದು, ನಾವು ದುಡ್ಡು ತುಂಬಿದೆ ಹೋದರೆ ನಿಮಗೆ – ಸ್ಕೂಲು ಮೇಷ್ಟರುಗಳಿಗೆ ಸಂಬಳ ಎಲ್ಲಿಂದ ಬರುತ್ತೆ?" ಎಂದು ಇನ್‌ಸ್ಪೆಕ್ಟರು ಹೇಳುತ್ತಲೂ ಉಪಾಧ್ಯಾಯರು ಸುಮ್ಮನಾದರು. ನಮ್ಮ ದೇಶದಲ್ಲಿ ಅಬ್ಕಾರಿ ಆದಾಯಕ್ಕೂ ಶಿಕ್ಷಣ ಶಾಖೆಯ ವೆಚ್ಚಕ್ಕೂ ಗಂಟು. ಆದ್ದರಿಂದ, ಒಂದು ಹೊಸ ಶಾಲೆಯನ್ನು ತೆರೆಯ ಬೇಕಾದರೆ ತಂದೆತಾಯಿಗಳು ಹೆಚ್ಚು ಹೆಚ್ಚಾಗಿ ಕುಡಿಯಬೇಕು. ಈ ಹಿಂಸಾವೃತ್ತಿಯಿಂದ ಶಿಕ್ಷಣವನ್ನು ಬಿಡುಗಡೆ ಮಾಡಬೇಕೆನ್ನುವುದು ನ್ಯಾಯತಾನೆ?

ಹಾಗಾದರೆ, ಶಿಕ್ಷಣದ ಖರ್ಚಿಗೆ ಬೇಕಾದ ಹಣವೆಲ್ಲಿಂದ ಬರಬೇಕು? ಈ ಪ್ರಶ್ನೆಗೆ ಉತ್ತರಕೊಡುತ್ತ, ಗಾಂಧೀಜಿಯವರು 'ಹರಿಜನ್' ಪತ್ರಿಕೆಯ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ. "ತೆರಿಗೆಗಳನ್ನು ಜಾಸ್ತಿ ಮಾಡಬೇಕು; ಈ ಬಡದೇಶದಲ್ಲಿ ತೆರಿಗೆ ಜಾಸ್ತಿ ಮಾಡಲು

ಮಾರ್ಗಗಳಿವೆಯೆಂದು ಪ್ರೊಫೆಸರ್‌ಷಾ ಅವರು ಅಭಿಪ್ರಾಯಪಟ್ಟಿದ್ದಾರೆ." ಆದರೆ, ಸದ್ಯದಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ, ಇಲ್ಲ, ಈ ಶಿಕ್ಷಣದ ವ್ಯವಸ್ಥೆಗೆ ಬೇಕಾದ ಹಣವನ್ನು ಪಡೆಯಲು ಇನ್ನೊಂದು ದಾರಿಯೆಂದರೆ - ಅನಾವಶ್ಯಕವಾದ ಖರ್ಚನ್ನು ಕಮ್ಮಿ ಮಾಡುವುದು. ವರ್ಧಾ ಅಽವೇಶನದ ಪ್ರಾರಂಭ ಭಾಷಣದಲ್ಲಿ ಗಾಂಧೀಜಿಯವರು ಈ ವಿಚಾರವಾಗಿ ಹೀಗೆ ಹೇಳಿದ್ದಾರೆ "ಬೇಕಾದ ಹಣ ಒದಗುವವರೆಗೆ, ಇಲ್ಲ ವೈಸ್‌ರಾಯರು ಸೈನ್ಯದ ವೆಚ್ಚವನ್ನು ಕಡಿಮೆ ಮಾಡುವವರೆಗೆ - ನಮಗೆ ಕಾಯಲು ಸಾಧ್ಯವಿಲ್ಲ". ಅಲ್ಲದೆ ನಮ್ಮ ದೇಶದ ನಿರಕ್ಷರತೆಯನ್ನೂ, ಅದನ್ನು ಹೋಗಲಾಡಿಸಲು ಇದುವರೆಗೆ ಮಾಡಿರುವ ಪ್ರಯತ್ನಗಳನ್ನೂ, ಅದು ಎಷ್ಟರಮಟ್ಟಿಗೆ ಸಫಲವಾಗಿದೆಯೆಂಬುದನ್ನೂ ಈ ಕಾರ್ಯ ಎಷ್ಟು ಆಗಾಧ ಎಂಬುದನ್ನೂ ಈ ಕೆಳಗಿನ ಅಂಕಿಗಳು ಸಾರುತ್ತವೆ.

ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಥಮಿಕ ಶಾಲೆಗಳು ಕೆಳಗೆ ಕೊಟ್ಟಿರುವ ಪ್ರಮಾಣದಲ್ಲಿ ವರ್ಷವರ್ಷವೂ ಜಾಸ್ತಿಯಾಗಿವೆ.

| | |
|---|---|
| ೧೯೧೭ | ೧,೪೨,೨೦೩ |
| ೧೯೨೨ | ೧,೬೩,೦೨೨ |
| ೧೯೨೭ | ೧,೮೯,೨೪೮ |
| ೧೯೩೧ | ೨,೦೪,೨೫೦ |

ಮತ್ತು ಅಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದ ಹಣ ಈ ಪಟ್ಟಿಯಲ್ಲಿ ಕೊಟ್ಟಿರುವಂತೆ ವರ್ಷ ವರ್ಷಕ್ಕೆ ಹೆಚ್ಚಿದೆ.

| | | |
|---|---|---|
| ೧೯೧೭ | ೨೯೨ | ಕೋಟಿ ರೂಪಾಯಿಗಳು |
| ೧೯೨೨ | ೫.೦೯ | ,, ,, |
| ೧೯೨೭ | ೬.೯೫ | ,, ,, |
| ೧೯೩೧ | ೭.೯೫ | ,, ,, |

ಹೀಗಿರಲು ಆ ಪ್ರಾಂತ್ಯದ ಅಕ್ಷರಸ್ಥರ ಸಂಖ್ಯೆ ಶೇಕಡ ೭.೫ ಇದ್ದದ್ದು ೧೯೩೧ರಲ್ಲಿ ಶೇಕಡ ೮.೬ಕ್ಕೆ ಏರಿದೆ.

ಆದ್ದರಿಂದ ಈ ಶಿಕ್ಷಣ ವ್ಯವಸ್ಥೆಯು ತನ್ನ ವೆಚ್ಚವನ್ನು ತಾನೆ ಹುಟ್ಟಿಸಿಕೊಳ್ಳಬೇಕು ಎಂದು ಗಾಂಧೀಜಿಯವರಿಗೆ ಮನದಟ್ಟಾಯಿತು. ಅಂದರೆ ಮಕ್ಕಳು ತಮ್ಮ ಕೈ ಕಸಬಿನಿಂದ

೧. Vide the Hon'ble C.J. Varkey's book - "The Wardha Scheme of Education" Published by the oxfor university press

ತಯಾರಿಸಿದ ವಸ್ತುಗಳ ಮಾರಾಟದಿಂದ ಒಟ್ಟು ಏಳು ವರ್ಷಗಳಲ್ಲಿ ಉಪಾಧ್ಯಾಯರುಗಳ ಸಂಬಳದ ಬಹುಭಾಗ ಹುಟ್ಟುವಳಿಯಾಗಬೇಕು. ಇದರ ಸಂಬಂಧವಾದ ಅಂಕಿಗಳನ್ನು ಮುಂದೆ ಕೊಡಬೇಕೆಂದಿದ್ದೇನೆ. ಸ್ಥೂಲವಾಗಿ ಹೇಳುವುದಾದರೆ ತಿಂಗಳಿಗೆ ರೂ.೨೫ರಂತೆ ಏಳು ವರ್ಷಗಳಿಗೆ ಒಬ್ಬ ಉಪಾಧ್ಯಾಯನ ಸಂಬಳ ರೂ. ೨,೧೦೦. ಒಬ್ಬ ಉಪಾಧ್ಯಾಯನಿಗೆ ೩೦ ವಿದ್ಯಾರ್ಥಿಗಳಂತೆ, ಅವರು ತಯಾರಿಸಿದ ನೂಲು ಮತ್ತು ಬಟ್ಟೆಗಳ ಮಾರಾಟದಿಂದ ಒಟ್ಟು ಏಳು ವರ್ಷಗಳಲ್ಲಿ ಆದಾಯ ರೂ. ೧೮೨೫. ಇದೇ ರೀತಿ ಎಲ್ಲ ಕೈಕಸಬುಗಳಲ್ಲಿಯೂ ಉಪಾಧ್ಯಾಯರ ಸಂಬಳವು ವಿದ್ಯಾರ್ಥಿಗಳು ತಯಾರಿಸಿದ ವಸ್ತುಗಳ ಮಾರಾಟದಿಂದ ದೊರೆಯುತ್ತದೆ.

ಈ ಶಿಕ್ಷಣ ವ್ಯವಸ್ಥೆಯು ತನ್ನ ಖರ್ಚನ್ನು ತಾನೆ ಹುಟ್ಟಿಸಿಕೊಳ್ಳಬಲ್ಲುದು. (Self-supporting) ಎಂಬ ವಿಚಾರದಲ್ಲಿ ಅನೇಕರು ಸಂಶಯ ಪಟ್ಟಿದ್ದಾರೆ. ಸಮಿತಿಯ ಸದಸ್ಯರಾದ ಪ್ರೊ. ಕೆ.ಟಿ. ಷಾ ಅವರು ಈ ಕ್ರಮವನ್ನು ಒಪ್ಪಲಿಲ್ಲ, ಅಲ್ಲದೆ, ಆ ರೀತಿಯ ಏರ್ಪಾಡು ಸಾಧುವೂ ಅಲ್ಲವೆಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಿ ಆ ಹಣವನ್ನು ಶಿಕ್ಷಣದ ವೆಚ್ಚಕ್ಕೆ ಉಪಯೋಗಿಸುವುದು ಸಾಧುವೆ, ಅಲ್ಲವೆ, (ಇದನ್ನು ಮಕ್ಕಳ ದುಡಿಮೆ Child Labour ಎಂದು ಕೆಲವರು ಕರೆದರು) ಎಂಬ ವಿಷಯದಲ್ಲಿ ಇಂಡಿಯಾ ಸರ್ಕಾರದ ಕೇಂದ್ರ ಶಿಕ್ಷಣ ಸಮಿತಿಯವರು (The Central Advisary Board of Education, Delhi) ದೇಶೀಯ ಮೂಲ ಶಿಕ್ಷಣವನ್ನು ವಿಮರ್ಶಿಸಿ ತಮ್ಮ ವರದಿಯಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ. ಈ ಮೂಲ ಶಿಕ್ಷಣ ಶಾಲೆಗಳ (Basic Schools) 'ಕೈ ಕಸಬಿನಿಂದ ತಯಾರಾದ ವಸ್ತುಗಳು ಮಾರಾಟವಾಗಲೇ ಬೇಕು; ಬಂದ ಉತ್ಪತ್ತಿಯನ್ನು ಶಾಲೆಯ ಖರ್ಚಿಗೆ ಉಪಯೋಗಿಸಿಕೊಳ್ಳಬೇಕು. ಮಾರಾಟವಾಗುವಂತಹ ವಸ್ತುಗಳನ್ನು ಮಕ್ಕಳ ಕೈಯಲ್ಲಿ ತಯಾರು ಮಾಡಿಸುವುದು ಆ ಶಾಲೆಗಳ ಶಿಕ್ಷಣದ ದಕ್ಷತೆಯನ್ನು ವ್ಯಕ್ತಪಡಿಸುತ್ತದೆ ಎಂದು ಗಾಂಧೀಜಿಯವರು [೨] ಬೇರೊಂದು ಕಡೆ ಹೇಳಿದ್ದಾರೆ. (ನಮ್ಮ ದೇಶದ ಶಾಲೆ ಮತ್ತು ನೆಯ್ಗೆ ಶಾಲೆಗಳ ಉತ್ಪತ್ತಿ ಖರ್ಚುಗಳನ್ನು ಈ ದೃಷ್ಟಿಯಿಂದ ಪರಿಶೀಲಿಸಿ) ಮುಂದೆ ಇಂಡಿಯಾ ಸರ್ಕಾರದ ಕೇಂದ್ರ ಶಿಕ್ಷಣ ಸಂಸ್ಥೆಯು ವರ್ಧಾ ಶಿಕ್ಷಣ ವ್ಯವಸ್ಥೆಯನ್ನು ಎಷ್ಟರಮಟ್ಟಿಗೆ ಅಂಗೀಕರಿಸಿದೆ ಎಂಬುದನ್ನೂ ಅದರ ಸ್ಥಾನದಲ್ಲಿ ವಿವರಿಸುತ್ತೇನೆ.

ಎಷ್ಟು ಆದಾಯ ಬರಬಹುದು? ಬಂದ ಹಣವು ಉಪಾಧ್ಯಾಯರ ಸಂಬಳಕ್ಕೆ ಸಾಕಾಗುವಷ್ಟು ಬಂದೀತೊ ಇಲ್ಲವೊ ಎನ್ನುವುದು ಕಾರ್ಯತಃ ತಿಳಿಯಬೇಕಾದ ಅಂಶ.

---

೨. This feature of the Scheme is the 'acid test of edfficiency' of Schools.

ಶೇಗಾಂವಿನ ಶಾಲೆ ಮತ್ತು ವಿದ್ಯಾಮಂದಿರ ಅಭ್ಯಾಸ ಶಾಲೆಯಲ್ಲಿ ಒಂದು ವರ್ಷದಲ್ಲಿ ಮಕ್ಕಳು ತಯಾರಿಸಿದ ವಸ್ತುಗಳ ಮಾರಾಟದಿಂದ ನಿರೀಕ್ಷಿಸಿದ್ದಕ್ಕಿಂತ ಸ್ವಲ್ಪ ಹೆಚ್ಚಿನ ಆದಾಯ ಬಂದಿರುವುದಾಗಿ ಈಗ ತಾನೆ ಹೊರಬಿದ್ದಿರುವ 'ಹಿಂದೂಸ್ಥಾನಿ ತಾಲೀಮಿ ಸಂಘದ' ಮೊದಲನೆಯ ವರ್ಷದ ವರದಿಯು ತಿಳಿಸುತ್ತದೆ.

ವಾರ್ಧಾ ಶಿಕ್ಷಣದ ಅಧಿವೇಶನದಲ್ಲಿ ಈ ವಿಷಯದ ಮೇಲೆ ಚರ್ಚೆ ನಡೆದಾಗ ಗಾಂಧೀಜಿಯವರು ಈ ಹೊಸ ಶಿಕ್ಷಣ ಕ್ರಮವು ಅಹಿಂಸಾ ತತ್ವದ ಮೇಲೆ ನಿಂತಿದೆ ಎಂದು ಹೇಳಲು, ಡಾ॥ ಜಕೀರ್ ಹುಸೇನ್‌ರವರು ಆಮೇಲೆ ಮಾತನಾಡುತ್ತ "ಅಹಿಂಸಾ ತತ್ವವೇ ಈ ಶಿಕ್ಷಣ ಕ್ರಮದ ತಳಹದಿ ಎನ್ನಬೇಕಾದ್ದಿಲ್ಲ, ಅಹಿಂಸಾತತ್ವ ಮತ್ತು ಗ್ರಾಮಾಂತರ ನಾಗರಿಕತೆ (Non-violence and rural Civilizations)ಗಳಲ್ಲಿ ಉತ್ಸಾಹಿಗಳಲ್ಲದವರಿಗೆ ಇದು ರುಚಿಸಬಾರದೆಂದು ಭಾವಿಸಬೇಕಾಗಿಲ್ಲ, ಈ ಶಿಕ್ಷಣ ಕ್ರಮದ ಮುಖ್ಯ ತತ್ವಗಳು, ಶಿಕ್ಷಣ ಶಾಸದ ಮುಖ್ಯ ತತ್ವಗಳು ಉತ್ತಮ ಶಿಕ್ಷಣವನ್ನು ಉತ್ತಮ ರೀತಿಯಲ್ಲಿ ಕೊಡಬೇಕಾದರೆ ಗಾಧೀಜಿಯವರು ಹೇಳಿರುವಂತೆ ಶಿಕ್ಷಣವು ಬಹುಮಟ್ಟಿಗೆ ಒಂದು ಕೈ ಕಸಬನ್ನು ಹೊಂದಿಕೊಂಡು ಬರಬೇಕು. ಮಗುವು ತನ್ನ ಕೈಗಳಿಂದ ಮಾಡಿ, ತನ್ನ ಅನುಭವದಿಂದ ಕಲಿಯಬೇಕು. ("Learning by doing") ಇದು ಮಗುವಿಗೆ ಸಹಜವಾದ ಮಾರ್ಗ ಮತ್ತು ಈ ತತ್ವವನ್ನು ಪ್ರಪಂಚದ ಎಲ್ಲ ಶಿಕ್ಷಣ ಶಾಸಜ್ಞರು ಒಪ್ಪಿದ್ದಾರೆ' ಎಂದು ಹೇಳಿದರು. ಜಕೀರ್ ಹುಸೇನ್‌ರವರ ಅಭಿಪ್ರಾಯವು ಹೇಗೆ ಸಾಧುವೆಂದು ಮುಂದೆ ವಿವರಿಸುತ್ತೇನೆ.

ಇನ್ನು ಗಾಧೀಜಿಯವರ ವಿವರಣೆಯಲ್ಲಿನ ನಾಲ್ಕನೆಯ ಅಂಶವೆ - ಹಳ್ಳಿಯ ಕೈ ಕಸಬುಗಳ ಮೂಲಕ ಶಿಕ್ಷಣ - ಈ ಶಿಕ್ಷಣ ಕ್ರಮದ ಅತಿಶಯವಾದ, ದೊಡ್ಡ ತತ್ವ; ಈ ಶಿಕ್ಷಣಕ್ಕೂ ನಮ್ಮ ದೇಶದಲ್ಲಿ ಇದುವರೆಗೂ ನಡೆಯುತ್ತಿರುವ ಶಿಕ್ಷಣಕ್ಕೂ ಇರುವ ಮುಖ್ಯ ವ್ಯತ್ಯಾಸ. ಡಾ॥ ಜಕೀರಂ ಹುಸೇನ್‌ರವರು ಹಿಂದೆಯೇ ಹೇಳಿದಂತೆ ಇದು ಎಲ್ಲ ಶಿಕ್ಷಣ ಶಾಸಜ್ಞರೂ ಒಪ್ಪಿರುವ ಅಂಶ. ಮಕ್ಕಳ ಶಿಕ್ಷಣದಲ್ಲಿ ಕೈ ಕಸಬುಗಳಿಗೆ ಬಹುಮುಖ್ಯ ಸ್ಥಾನವಿದೆ. ನಮ್ಮ ಈಗಿನ ಶಾಲೆಗಳಲ್ಲಿ ಅದನ್ನು ಶುದ್ಧಾಂಗವಾಗಿ ಮರೆತಿರುವುದು, ಇಲ್ಲ ತಿರಸ್ಕರಿಸುವುದು ದೊಡ್ಡ ಪ್ರಮಾದ. ಈಗ ನಮ್ಮ ದೇಶದಲ್ಲಿ ವಿದ್ಯಾವಂತರೆನಿಸಿಕೊಂಡು ದೊಡ್ಡ ಹುದ್ದೆಗಳಲ್ಲಿರುವವರೂ, ಸಾರ್ವಜನಿಕರೂ ಇಂತಹ ಶಿಕ್ಷಣವನ್ನು ಪಡೆಯದಿರುವವರಾದ್ದರಿಂದ ತಾವು ಹೊಂದದೆ ಇರುವ ಶಿಕ್ಷಣವನ್ನು ಸಹಾನುಭೂತಿಯಿಂದ ವಿಮರ್ಶಿಸಲು ಅವರುಗಳಿಗೆ ಕಷ್ಟವಾಗಿದೆ.

ಇಂಡಿಯಾ ಸರ್ಕಾರವು ೧೯೩೭ನೆಯ ಆಗಸ್ಟ್‌ನಲ್ಲಿ ಇಂಗ್ಲೆಂಡ್ ಸರ್ಕಾರದ ಶಿಕ್ಷಣ ಶಾಖಾ ಕಚೇರಿಗೆ (Board of Edication) ಪತ್ರ ಬರೆದು ಇಂಡಿಯಾ ದೇಶದ

ಶಿಕ್ಷಣದ ಏರ್ಪಾಡಿನ ವಿಚಾರದಲ್ಲಿಯೂ, ಮುಖ್ಯವಾಗಿ ವೃತ್ತಿ ಶಿಕ್ಷಣ (Vocational Education)ದ ವಿಚಾರವಾಗಿಯೂ ಸಲಹೆ ಕೊಡಲು ಸಮರ್ಥರಾದ ಕೆಲವು ಶಿಕ್ಷಣ ಶಾಸಜ್ಞರ ಸಮಿತಿ ಮತ್ತು ನಿಯಮಿಸಿ ಕಳುಹಿಸಿ ಕೊಡಬೇಕೆಂದು ಕೋರಿತು. ಎ. ಆಬಟ್ ಮತ್ತು ಎಸ್.ಎಚ್.ವುಡ್ ಎಂಬುವರು ಈ ಕೆಲಸಕ್ಕೆ ನಿಯಮಿಸಲ್ಪಟ್ಟು ನವೆಂಬರ್ ತಿಂಗಳಿನಲ್ಲಿ ಇಂಡಿಯಾಕ್ಕೆ ಬಂದು ಇಲ್ಲಿನ ಶಿಕ್ಷಣದ ಏರ್ಪಾಡಿನ ಸ್ಥಿತಿಗತಿಗಳನ್ನು ಪರಿಶೀಲಿಸಿ ೧೯೩೭ನೆಯ ಜೂನ್ ತಿಂಗಳಿನಲ್ಲಿ ತಮ್ಮ ವರದಿಯನ್ನು ಕಳುಹಿಸಿದರು. ಈ ಸಂದರ್ಭದಲ್ಲಿ ಆ ವರದಿಯ ಎರಡು ಅಂಶಗಳನ್ನು ನೋಡಿ :

ಈ ದೇಶದ ಶಾಲೆಗಳಲ್ಲಿ[೧] "ಅಕ್ಷರಾಭ್ಯಾಸವೇ ಪ್ರಾಥಮಿಕ ವಿದ್ಯಾಭ್ಯಾಸದ ಮುಖ್ಯ ಉದ್ದೇಶವಾಗಿರುವಂತೆ ನಮಗೆ ಕಾಣುತ್ತದೆ. ಯಾವ ದರ್ಜೆಯ ಶಿಕ್ಷಣಕ್ಕೂ ಈ ಉದ್ದೇಶವು ಸರಿಯಾದುದಲ್ಲವೆಂದು ನಮ್ಮ ಅಭಿಪ್ರಾಯ. ಒಂದು ವೇಳೆ ಓದು ಬರಹ ಕಲಿಯುವುದೇ ಉದ್ದೇಶವಾದರೂ ಅದನ್ನು ಸಾಧಿಸುವ ಮಾರ್ಗವಂತೂ ತೀರ ಅಸಮರ್ಪಕವಾಗಿದೆ. ಅಕ್ಷರತೆ, ನಮ್ಮ ಜೀವನದಲ್ಲಿ ಸುಖದಂತೆ ಅದನೆ ಗುರಿಯಾಗಿಟ್ಟುಕೊಂಡು ಕಾರ್ಯಗಳಲ್ಲಿ ತೊಡಗಿದರೆ ಸಿಗುವುದಿಲ್ಲ. ಅದು ಆತ್ಮ ತೃಪ್ತಿಗಾಗಿ ನಡೆಸುವ ಕಾರ್ಯಗಳಿಂದ ಪ್ರೇರಿತವಾಗಿ ದೊರೆಯುವ ಒಂದು ಉಪವಸ್ತು."

ಎರಡನೆಯದಾಗಿ "ಮಕ್ಕಳು ತಮ್ಮ ಶಿಕ್ಷಣದ ಭಾಗವಾಗಿ ಕೈಕಸಬನ್ನು ಕಲಿಯ ಬೇಕಾದ್ದು ಮುಂದೆ ತಮ್ಮ ಉದ್ಯೋಗಸಾಧನೆಗಾಗಿ ಅಲ್ಲ. ಮಕ್ಕಳ ಸರ್ವತೋಮುಖ ವಾದ ಪೂರ್ಣ ಬೆಳವಣಿಗೆಗೆ ಕೈಕಸಬಿನ ಶಿಕ್ಷಣವು ಅತ್ಯಾವಶ್ಯಕ."

ಇಂಗ್ಲೆಂಡ್, ಅಮೇರಿಕಾ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಂತೂ ಎಲ್ಲ ಉತ್ತಮ ಶಾಲೆಗಳಲ್ಲಿಯೂ ಕೈಕಸಬುಗಳು (Handocrafts) ಶಿಕ್ಷಣದ ಒಂದು ಅಂಗವಾಗಿದೆ. ವಾರ್ಧಾ ಶಿಕ್ಷಣ ಶಾಲೆಗಳಂತಹ ಶಾಲೆಗಳು ಪಾಶ್ಚಾತ್ಯ ದೇಶಗಳಲ್ಲಿವೆಯೇ ಎಂದು ಪ್ರಶ್ನೆ ಮಾಡಿ ಇಂಗ್ಲೆಂಡಿನ ಕೆಲವು ಪ್ರಮುಖ ಶಿಕ್ಷಣ ಪತ್ರಿಕೆಗಳ ಸಂಪಾದಕರಿಗೆ ಕಾಗದ ಬರೆಯಲು, ಅದೇ ರೀತಿಯ ಶಾಲೆಯಿಲ್ಲದಿದ್ದರೂ ಬಹುಮಟ್ಟಿಗೆ ಅದನ್ನು ಹೋಲುವ ಶಾಲೆಗಳಿವೆಯೆಂದು ತಿಳಿದುಬಂದಿದೆ. 'ವನಶಾಲೆ' (Forest School) ಎಂಬುದು ಇಂತಹದೊಂದು. ಆ ಶಾಲೆಗಳ ವೆಚ್ಚಕ್ಕೆ ದುಡ್ಡಿನ ಕೊರತೆಯೇನೂ ಇಲ್ಲ; ಮಕ್ಕಳು ತಯಾರಿಸಿದ ವಸ್ತುಗಳ ಮಾರಾಟದ ಆವಶ್ಯಕತೆಯಿಲ್ಲ. 'ವನಶಾಲೆ'ಯಲ್ಲಿ ಒಂದು ಮಗುವಿಗೆ ಒಂದು ಟರ್ಮಿಗೆ ೩೫ ಫೀಜು (ಊಟ, ತಿಂಡಿಸೇರಿ). ನಮ್ಮ ಮಗುವೊಂದನ್ನು ಈ ಶಾಲೆಯಲ್ಲಿ ಬಿಟ್ಟರೆ – ಪೌಂಡಿಗೆ ಹದಿಮೂರು ರೂಪಾಯಿ ಆರು ಆಣೆ ದರದಂತೆ –

೧ ."Literacy, Like happiness is not achieved by pursuing it is a narrow objective; it is bye-product of satisfyig activities.

ಒಂದು ಟರ್ಮಿಗೆ (ವರ್ಷಕ್ಕೆಲ್ಲ) ರೂ. ೪೬೮.೨.೦ ರನ್ನು ರವಾನಿಸಬೇಕು.

ಇನ್ನು ನಮ್ಮ ದೇಶದಲ್ಲೇ ಸ್ವಲ್ಪಮಟ್ಟಿಗಾದರೂ ಉತ್ತಮ ಶಿಕ್ಷಣ ದೊರಕುವ 'ಶಿಶುವಿಹಾರ'ದಂತಹ ಶಾಲೆಗಳಲ್ಲಿ. ಒಂದು ಮಗುವಿಗೆ ತಿಂಗಳಿಗೆ ಮೂರು ರೂಪಾಯಿ ನಿಂದ ಹತ್ತು ರೂಪಾಯಿಯವರೆಗೆ ಫೀಜು ಇದೆ. ಈ ಫೀಜನ್ನು ಕೊಟ್ಟು ಈ ದೇಶದಲ್ಲಿ ಎಷ್ಟು ಜನರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬಲ್ಲರು? ಹಾಗಾದರೆ ಹಣವಂತರ ಮಕ್ಕಳಿಗೆ ಮಾತ್ರ ಉತ್ತಮ ಶಿಕ್ಷಣ; ಇತರರಿಗೆ ಇಲ್ಲ ಎಂದು ತೀರ್ಮಾನಿಸುವುದು 'ಸತ್ಯದ ಮಾರ್ಗವೋ?'.

ಶ್ರೀ ಆರ್ಯನಾಯಕಂರವರೊಡನೆ ಈ ವಿಚಾರವಾಗಿ ಮಾತನಾಡುತ್ತಿದ್ದಾಗ ಅವರು ಹೇಳಿದ ವಿಷಯವೊಂದು ನೆನಪಿಗೆ ಬರುತ್ತದೆ. ಇಂಗ್ಲೆಂಡಿನಲ್ಲಿ ಅವರ ಸಹಪಾಠಿಯಾಗಿದ್ದವರೊಬ್ಬರು ಈಗ ನಮ್ಮ ದೇಶದ ವಿಶ್ವವಿದ್ಯಾನಿಲಯದ ಪ್ರೊಫೆಸರಾಗಿ ಒಂದು ಮಕ್ಕಳ ಇಲಾಖೆಯೊಂದನ್ನು ನಡೆಸುತ್ತಿದ್ದಾರೆ. ಅವರು ಕೆಲವು ದಿನಗಳ ಹಿಂದೆ ಶೇಗಾಂನಲ್ಲಿ ಆರ್ಯನಾಯಕಂರವರನ್ನು ಕಂಡಾಗ ತಾವೂ ತಮ್ಮ ಊರಿನಲ್ಲಿ ಕಿಂಡರ್‌ಗಾರ್ಟನ್ ಮತ್ತು ಮಾಂಟಿಸೋರಿ ಶಾಲೆಗಳ ಮಾದರಿಯಲ್ಲಿ ಒಂದು ಶಾಲೆಯನ್ನು ನಡೆಸುತ್ತಿರುವುದಾಗಿಯೂ, ಅಲ್ಲಿನ ಮಕ್ಕಳಿಗೆ ತಿಂಗಳಿಗೆ ಮೂರು ರೂಪಾಯಿ ಫೀಜನ್ನು ಹಾಕಿರುವುದಾಗಿಯೂ ತಿಳಿಸಿದರು. ಅದಕ್ಕೆ ಶ್ರೀ ಆರ್ಯನಾಯಕಂರವರು ''ಸರಿಯೆ, ಬಡವರ ಪಾಡೇನು?'' ಎಂದು ಕೇಳಿದರಂತೆ. ಆ ಮಾತಿನಿಂದ - ದೇಶೀಯ ಮೂಲ ಶಿಕ್ಷಣದ ವ್ಯವಸ್ಥೆಯನ್ನು ಏರ್ಪಡಿಸಿದವರ ಲಕ್ಷ್ಯವೆಲ್ಲಿದೆ, ಇದರ ಉದ್ದೇಶವೇನಿದೆ ಎಂಬುದು ವ್ಯಕ್ತವಾಗುತ್ತದೆ.

ವಾರ್ಧಾ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು ತಯಾರಿಸುವ ವಸ್ತುಗಳ ಮಾರಾಟದ ಏರ್ಪಾಡಿನಿಂದ ದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ಶಾಸ ಸಮ್ಮತವಾದ ಉತ್ತಮ ಶಿಕ್ಷಣ ಕಿಂಡರ್‌ಗಾರ್ಟನ್ ಮತ್ತು ಮಾಂಟಿಸೋರಿ ಶಾಲೆಗಳ ತತ್ವಗಳನ್ನೊಳಗೊಂಡ ಶಿಕ್ಷಣವನ್ನು ಒದಗಿಸಲು ಸಾಧ್ಯವಾಗುತ್ತದೆ. ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳಲ್ಲಿ ಇಂತಹ ಶಾಲೆಗಳಿಗೆ ಪ್ರಗತಿ ಶಾಲೆಗಳು ಎಂದು ಕರೆಯುತ್ತಾರೆ. ಅಂತಹ ಶಾಲೆಗಳನ್ನು ಇಂಡಿಯಾ ದೇಶದ ಹಳ್ಳಹಳ್ಳಿಗಳಲ್ಲಿಯೂ ಸ್ಥಾಪಿಸುವ ಏರ್ಪಾಡೇ ವಾರ್ಧಾ ಶಿಕ್ಷಣ ವ್ಯವಸ್ಥೆ. ದೇಶದ ಎಲ್ಲ ಮಕ್ಕಳ ಶಿಕ್ಷಣದೊಂದಿಗೆ ದೇಶವು ಉದ್ಧಾರವಾಗಬೇಕು. ಇಂಥ ವಿಚಾರಪೂರಿತ ಲೇಖನಗಳನ್ನು ಹೊತ್ತು ತರುತ್ತಿದ್ದ 'ವಿಚಾರ ವಾಹಿನಿ' - ಎಷ್ಟೇ ಅಲ್ಪಾಯುಷಿಯಾದರೂ ಕನ್ನಡದ ಮೇಧಾವಿ ಮಾಸಿಕಗಳ ಲ್ಲೊಂದಾಗಿತ್ತು ಎಂಬುದನ್ನು ನಾಮ ಸ್ಮರಿಸಲೇಬೇಕು. 'ವಿಚಾರವಾಹಿನಿ'ಯನ್ನು ಕುರಿತು ಡಾ॥ ಹಾ.ಮಾ. ನಾಯಕರು ಹೇಳಿರುವ ಮಾತುಗಳನ್ನು ನಾವಿಲ್ಲಿ ನೆನೆಯಬೇಕು :

[೧]''ಚಿದಂಬರಂ ಕೆಲವು ಕಾಲ ತೀರ್ಥಹಳ್ಳಿಯ ಬ್ಯಾಂಕೊಂದರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಅದೇ ಕಾಲದಲ್ಲಿ ಅವರು 'ವಿಚಾರ ವಾಹಿನಿ' ಎಂಬ ಒಂದು ಮಾಸಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ೧೯೩೯ರ ಜನವರಿಯಲ್ಲಿ ಪತ್ರಿಕೆಯ ಮೊದಲ ಸಂಚಿಕೆ ಪ್ರಕಟವಾಯಿತು. ಅದರ ಕಾಗದ ಮುದ್ರಣ ವಿನ್ಯಾಸಗಳು ಈಗ ಕನಸಿನ ಮಾತು. ಕನ್ನಡದ ಅಂದಿನ ಪ್ರಸಿದ್ಧ ಲೇಖಕರೆಲ್ಲ ಅದರಲ್ಲಿ ಬರೆದರು. ೬೪ ಪುಟಗಳ ಒಂದು ಸಂಚಿಕೆಯ ಬೆಲೆ ನಾಲ್ಕಾಣೆ; ವಾರ್ಷಿಕ ಚಂದಾ ಮೂರು ರೂಪಾಯಿಗಳು. 'ಇಂಥ ಒಂದು ಪ್ರೌಢವರ್ಗದ ಪತ್ರಿಕೆಯು ನಮ್ಮ ದೇಶದಲ್ಲಿ ಹುಟ್ಟಿರಲ್ಲ' ಎಂದು ಜನ ಅದನ್ನು ಸ್ವಾಗತಿಸಿದರು. ಆದರೆ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಚಿದಂಬರಂ ಅವರಿಗೆ 'ವಿಚಾರ ವಾಹಿನಿ'ಯನ್ನು ಬಹಳ ಕಾಲ ನಡೆಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ನಾನು ಚಿಕ್ಕ ಹುಡುಗನಾಗಿದ್ದಾಗ ಆ ನಿಯತಕಾಲದ ಸಂಚಿಕೆಗಳನ್ನು ಓದುತ್ತಿದ್ದೆ. ಈಚಿಗೆ ಇನ್ನೊಮ್ಮೆ ಅವನ್ನು ಪರಿಶೀಲಿಸಿದೆ. ಕನ್ನಡದಲ್ಲಿ ಈಗ ಪತ್ರಿಕೋದ್ಯಮವು ಬಹುವಾಗಿ ಬೆಳೆದಿದೆ. ವಿಸ್ತಾರ ವೈವಿಧ್ಯ ತಾಂತ್ರಿಕ ಸೌಲಭ್ಯಗಳನ್ನು ಪಡೆದಿದೆ. ಆದರೆ ನನಗನ್ನಿಸುತ್ತದೆ – 'ವಿಚಾರ ವಾಹಿನಿ'ಯಂಥ ಇನ್ನೊಂದು ಪತ್ರಿಕೆ ನಮ್ಮಲ್ಲಿ ಬರಲಿಲ್ಲ. ಇದು ನಮ್ಮ ಬಡತನದ ದ್ಯೋತಕವಾಗಿರಬಹುದು; ಚಿದಂಬರಂ ಅವರಂಥ ಮತ್ತೊಬ್ಬ ಕೆಲಸ ಗಾರರು ಬಾರದೆ ಹೋಗಿರಬಹುದು; ಅಥವಾ ನಮ್ಮ ಜನರಿಗೆ ಶ್ರೇಷ್ಠತೆಯ ಮಟ್ಟ ತಿಳಿಯದೆ ಹೋಗಿರಬಹುದು. ಕಾರಣಗಳು ಏನೇ ಇರಲಿ 'ವಿಚಾರ ವಾಹಿನಿ' ಇಂದಿಗೂ ಒಂದು ಆದರ್ಶವಾಗಿ ಉಳಿದಿದೆ. ಅದು ಚಿದಂಬರಂ ಅವರ ಸಾಧನೆ. ಸಿದ್ಧಿ!'' ತಿಳಿದು ಬರುವ ಹಾಗೆ ಈ ಪತ್ರಿಕೆಯ ೧೩. ಸಂಚಿಕೆಗಳು ಮಾತ್ರ ಹೊರಬಂದವು.

■

೧. ಸಂಪರ್ಕ – ಲೇ: ಹಾ.ಮಾ. ನಾಟಕ, ಮಿತ್ರ ಪ್ರಕಾಶನ, ಮೈಸೂರು ೧೯೮೨.

# ಶಿವಮೊಗ್ಗದಲ್ಲಿ ಕಾವ್ಯಾಲಯ

ಚಿದಂಬರಂ ಶಿವಮೊಗ್ಗದಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿರುವಾಗಲೆ ೧೯೨೮ರಲ್ಲಿ ಕನ್ನಡದ ಹೆಮ್ಮೆಯ ಪ್ರಕಾಶನ ಸಂಸ್ಥೆ 'ಕಾವ್ಯಾಲಯ' ಜನ್ಮತಾಳಿತು. ಕನ್ನಡ ಸಾಹಿತ್ಯಕೃತಿಗಳನ್ನು ಪ್ರಕಟಿಸಬೇಕೆಂಬ ಅವರ ಹೆಬ್ಬಯಕೆ ಪ್ರಕಟಣಾ ಸಂಸ್ಥೆಯ ಉದಯಕ್ಕೆ ಕಾರಣವಾಯಿತು. ದೇವಂಗಿ ಮಾನಪ್ಪ ಮತ್ತು ಕೆ.ವಿ. ಪುಟ್ಟಪ್ಪ ಅವರ ಬೆಂಬಲದಿಂದ ಸ್ಥಾಪಿತವಾದ ಪ್ರಕಟಣಾ ಸಂಸ್ಥೆ ಮೊದಮೊದಲು ಹವ್ಯಾಸಿಯಾಗಿಯೇ ಕಾರ್ಯ ನಿರ್ವಹಿಸಿತು. ನೀರಿನಲ್ಲಿ ತೇಲುತ್ತಿರುವ ಹಂಸ ಮತ್ತು ಅದನ್ನು ಬಳಸಿಕೊಂಡು ನಿಂತಿರುವ ತಾವರೆಯು 'ಕಾವ್ಯಾಲಯ'ದ ಚಿಹ್ನೆಯಾಗಿದ್ದು ಅದು ಸಾಹಿತ್ಯ-ಸಂಸ್ಕೃತಿಯ ಪ್ರತೀಕವೇ ಆಗಿದೆ. ಕ್ರಾಂತದರ್ಶಿ, ತ್ರಿಕಾಲಜ್ಞಾನಿಯೂ ಆಗಿ ಸತ್ಯದರ್ಶನವನ್ನು ಮಾಡಿಸುವ ಕವಿಗಳಿಗೆ ಆಶ್ರಯವನ್ನು ಕೊಡುವುದೇ 'ಕಾವ್ಯಾಲಯ'.

ಈ ಪ್ರಕಟಣಾ ಸಂಸ್ಥೆಯಿಂದ 'ಕನ್ನಡ ಕಾವ್ಯಮಾಲೆ' ಶೀರ್ಷಿಕೆ ಅಡಿಯಲ್ಲಿ ಪುಸ್ತಕಗಳು ಪ್ರಕಟಗೊಂಡವು. 'ಕನ್ನಡ ಕಾವ್ಯಮಾಲೆ'ಯ ಗುರಿ-ಕನ್ನಡಿಗರಿಗೆ ಉಪಯುಕ್ತವಾದ ಕಥೆ, ಕವನ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ ವಿಷಯಗಳ ಉತ್ತಮ ಗ್ರಂಥಗಳನ್ನು ಅಂದವಾಗಿ ಪ್ರಕಟಿಸಿ, ಸುಲಭ ಬೆಲೆಗೆ ಪ್ರಕಟಿಸಿಕೊಡಬೇಕೆಂಬುದು 'ಕಾವ್ಯಾಲಯ'ದ ಸ್ಥಾಪನೆಯ ಪರಮೋದ್ದೇಶವೆಂದು (೯.೮.೧೯೩೬ ಶಿವಮೊಗ್ಗ) ಪ್ರಕಾಶಕರು ತಮ್ಮ 'ಅರಿಕೆ'ಯಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಪ್ರಕಟಣೆ ಮಾಲೆ ಅಡಿಯಲ್ಲಿ ಅಚ್ಚಾದ ಮೊದಲ ಪುಸ್ತಕ ಕೆ.ವಿ. ಪುಟ್ಟಪ್ಪನವರ 'ಬೊಮ್ಮನಹಳ್ಳಿಯ ಕಿಂದರಜೋಗಿ ಮತ್ತು ಇತರ ಕಥನ ಕವನಗಳು' ಪುಸ್ತಕಕ್ಕೆ ಬಿ.ಎಂ. ಶ್ರೀಕಂಠಯ್ಯನವರ ಮುನ್ನುಡಿಯಿದೆ. ಆರ್.ಕೆ. ಲಕ್ಷ್ಮಣ್‌ರವರ ರೇಖಾ ಚಿತ್ರಗಳಿವೆ. ಅನಂತರ, ಕೆ.ವಿ. ಪುಟ್ಟಪ್ಪನವರ 'ಸಂನ್ಯಾಸಿ ಮತ್ತು ಇತರೆ ಕಥೆಗಳು' 'ಯಮನ ಸೋಲು ಮತ್ತು ಇತರ ನಾಟಕಗಳು' 'ಚಿತ್ರಾಂಗದಾ', 'ಕಾನೂರು ಸುಬ್ಬಮ್ಮ ಹೆಗ್ಗಡತಿ' (ನಾಲ್ಕು ಭಾಗಗಳಲ್ಲಿ), 'ನನ್ನ ಗೋಪಾಲ', 'ಶ್ಮಶಾನ ಕುರುಕ್ಷೇತ್ರಂ', 'ಜಲಗಾರ', 'ಮಹಾರಾತ್ರಿ', 'ನನ್ನ ದೇವರು ಮತ್ತು ಇತರ ಕಥೆಗಳು' ಪ್ರಕಟವಾದವು. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಆಮೇಲೆ ಒಂದೇ ಸಂಪುಟದಲ್ಲಿ ಪ್ರಕಟ ವಾಯಿತು. ಆ ಕಾದಂಬರಿಯ ಮುಖಪುಟಕ್ಕಾಗಿ ೧೯೩೬ರಲ್ಲಿ ಕಥೆಗಾರ ಶ್ರೀ ಆನಂದರು ಬರೆದುಕೊಟ್ಟ ಕಾಜಾಣಗಳ ಚಿತ್ರ ಮುಂದೆ ಕುವೆಂಪು ಅವರ 'ಉದಯರವಿ' ಪ್ರಕಾಶನಾದ ಲಾಂಛನವಾಯಿತು. (ಶಿವಾರೆಡ್ಡಿ).

ಮಾಸ್ತಿ ವೆಂಕಟೇಶ ಅಯ್ಯಂಗಾರರು ಅಂದಿನ ದಿನದಲ್ಲಿ 'ಕಾವ್ಯಾಲಯ'ವನ್ನು ಕುರಿತು 'ಇಂಥ ಸಾಹಿತ್ಯ ಪೋಷಕ ಸಂಸ್ಥೆ ಲೇಖಕರಿಗೆ ತೌರು ಮನೆಯಂತೆ..... ಹಳ್ಳಿಯ ಹೆಣ್ಣು ಮಕ್ಕಳ ಮಾತಿನಿಂದ ಅದರ ಏಳ್ಗೆಯನ್ನು ಬಯಸುತ್ತೇನೆ. ಹಳ್ಳದ ದಡದ ಬಳ್ಳಿಯಂತೆ ಅದು ಬಾಡದೆ ಬೆಳೆಯಲಿ, ತುಂಬ ಹೂ ತೊಡಲಿ, ತುಂಬ ಹಣ್ಣು ಬಿಡಲಿ' ಎಂದು ಹರಿಸಿದರು. ಅವರ ಹಾರೈಕೆ ಫಲಿಸಿತೇನೊ ಅನ್ನುವಂತೆ ಈ ೮೨ ವರ್ಷಗಳಲ್ಲಿ ಪ್ರಕಾಶನ ಸಂಸ್ಥೆಯ ಬಳ್ಳಿ ಬಹಳ ವಿಶಾಲವಾಗಿ ಹಬ್ಬಿ ಇನ್ನೂ ಬಹುದೂರದವರೆಗೆ ವ್ಯಾಪಿಸುವ ಲಕ್ಷಣವನ್ನು ತೋರುತ್ತಿದೆ.

'ಕಾವ್ಯಾಲಯ' ತಾನು ಪ್ರಕಟಿಸಿದ ಪುಸ್ತಕಗಳ ಜಾಹಿರಾತನ್ನು ತೀರ್ಥಹಳ್ಳಿಯಿಂದ ಚಿದಂಬರಂ ಅವರೇ ಸಂಪಾದಿಸಿ, ಪ್ರಟಿಸುತ್ತಿದ್ದ 'ವಿಚಾರ ವಾಹಿನಿ'ಯ ಸಂಚಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಅಂಥ ಒಂದು ಜಾಹಿರಾತು ಹೀಗಿದೆ :

ಚಿತ್ರಾಂಗದಾ

ಕೆ.ವಿ. ಪುಟ್ಟಪ್ಪ

ರವೀಂದ್ರನಾಥ ಠಾಕೂರರ 'ಚಿತ್ರಾ' ಮತ್ತು ಲಕ್ಷ್ಮೀಶನ ಜೈಮಿನಿ ಭಾರತದ 'ಚಿತ್ರಾಂಗದಾ' ಇವುಗಳ ಪ್ರಭಾವದಿಂದ ಮೂಡಿ ಸೃಷ್ಟಿಯಾಗಿರುವ ಸ್ವತಂತ್ರ ಕಲಾಕೃತಿಯೊಂದನ್ನು ವಾಚಕರು ಇದರಲ್ಲಿ ನೋಡಬಹುದಾಗಿದೆ.

ದೊರೆಯುವ ಸ್ಥಳ

ಕಾವ್ಯಾಲಯ ಪ್ರಕಾಶಕರು ಶಿವಮೊಗ್ಗಾ

ಚಿದಂಬರಂ 'ಕಾವ್ಯಾಲಯ'ದ ಪ್ರಕಟಣೆಗಳನ್ನು ತಾವೇ ಹೊತ್ತು ಮಾರುತ್ತಿದ್ದ ರಲ್ಲದೆ ಬೇರೆ ಊರುಗಳ ಪುಸ್ತಕದಂಗಡಿಗಳ ಮೂಲಕವೂ ಮಾರಾಟ ಮಾಡುತ್ತಿದ್ದರು. ಪುಸ್ತಕಗಳ ಪ್ರಕಟಣೆಯ ವರ್ಷಗಳನ್ನು ಗಮನಿಸಿದರೆ ಕಾವ್ಯಾಲಯ ಅಸ್ತಿತ್ವಕ್ಕೆ ಬಂದ ತಕ್ಷಣವೆ ಪ್ರಕಟಣಾ ಕಾರ್ಯವನ್ನು ಕೈಗೆತ್ತಿಕೊಳ್ಳಲಿಲ್ಲವೆಂದು ತೋರುತ್ತದೆ. ಈ ಅವಧಿಯಲ್ಲೇ ಅವರು ಶಿವಮೊಗ್ಗದಲ್ಲಿ ವಕೀಲವೃತ್ತಿ, ತೀರ್ಥಹಳ್ಳಿಯಲ್ಲಿ ಬ್ಯಾಂಕ್ ಮ್ಯಾನೇಜರ್ ಆಗಿ ಕೆಲವು ಕಾಲ ಕೆಲಸ ಮಾಡಿದರಲ್ಲದೆ, ಶಿವಮೊಗ್ಗ ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿಗಳಾಗಿಯೂ ಸೇವೆಸಲ್ಲಿಸಿದರು.

■

# ಮೈಸೂರಿನಲ್ಲಿ ಕಾವ್ಯಾಲಯ

ತೀರ್ಥಹಳ್ಳಿಯ ಬ್ಯಾಂಕಿನಲ್ಲಿ ಉದ್ಯೋಗಿಯಾಗಿದ್ದ ಕೂಡಲಿ ಚಿದಂಬರಂ ಅವರು, ಅಲ್ಲಿನ ವಿದ್ಯಮಾನಗಳಿಗೆ ಹೊಂದಿಕೊಳ್ಳಲಾಗದೆ ಆ ಕೆಲಸಕ್ಕೆ ರಾಜಿನಾಮೆ ಇತ್ತು, ೧೯೪೦ರ ಹೊತ್ತಿನಲ್ಲಿ ಮೈಸೂರಿನತ್ತ ಪ್ರಯಾಣ ಬೆಳೆಸಿದರು. ಹೆಂಡತಿ ಶೇಷಮ್ಮ, ಎರಡು ಮಕ್ಕಳು ಹಾಗೂ ತಾವು-ಒಟ್ಟು ನಾಲ್ಕು ಮಂದಿಯ ಭವಿಷ್ಯವನ್ನು ಕಂಡುಕೊಳ್ಳಲು ಮೈಸೂರಿಗೆ ಬಂದು ನೆಲೆನಿಂತುದು ಚಿದಂಬರಂ ಅವರ ಬದುಕಿನಲ್ಲಿ ಒಂದು ದೊಡ್ಡ ತಿರುವೇ ಅಂತನ್ನಬಹುದು. 'ಮೈಸೂರಿಗೆ ನಮ್ಮ ತಂದೆ ಬರಲು ಮುಖ್ಯಕಾರಣ ಕುವೆಂಪು' ಅನ್ನುತ್ತಾರೆ ಚಿದಂಬರಂ ಅವರ ಮಗ ಸಿ.ಕೆ. ಕೃಷ್ಣಮೂರ್ತಿ ಮೈಸೂರು ವಿಶ್ವವಿದ್ಯಾನಿಲಯದ ಕೇಂದ್ರವೂ ಆಗಿತ್ತಲ್ಲದೆ ಕೆಲವೊಂದು ಪುಸ್ತಕ ಪ್ರಕಾಶಕರು ಆ ಹೊತ್ತಿಗಾಗಲೆ ಅಲ್ಲಿ ಸ್ಥಾಪಿತರಾಗಿದ್ದರು. ಮೈಸೂರು ಪುಸ್ತಕ ಪ್ರಕಾಶನ, ಮಾರಾಟಕ್ಕೆ ಉತ್ತಮ ಸ್ಥಳವಾಗಿಯೂ ಮಾರ್ಪಟ್ಟಿದ್ದು ಆನಂತರವೂ ಅನೇಕ ಕನ್ನಡ ಪುಸ್ತಕ ಪ್ರಕಾಶಕರನ್ನು ಹುಟ್ಟುಹಾಕಿತು ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಹಾಗೆಯೇ ಅನೇಕ ವಿದ್ವಾಂಸರು, ಲೇಖಕರು ಇಲ್ಲಿ ನೆಲೆಸಿದ್ದರು. ಹಾಗಾಗಿ, ಚಿದಂಬರಂ ಶಿವಮೊಗ್ಗದ ಕನ್ನಡ ಗ್ರಂಥಗಳ ಪ್ರಕಾಶನದ ಅನುಭವವನ್ನು ವೃತ್ತಿಯನ್ನಾಗಿ ಬೆಳೆಸಿಕೊಳ್ಳಲು ಮೈಸೂರು ಅವಕಾಶವನ್ನು ಒದಗಿಸಿತು. ಇವೆಲ್ಲದರ ಜೊತೆಗೆ ಚಿದಂಬರಂ ಅವರು ಬಿ.ಎ. ಓದನ್ನು ಈ ಹಿಂದೆ ಮೈಸೂರಿನಲ್ಲೇ ಮಾಡಿದ್ದರಿಂದ ಅವರಿಗೆ ಈ ಊರಿನ ಪರಿಚಯವೂ ತಕ್ಕಮಟ್ಟಿಗೆ ಇತ್ತು. ಈ ಸಂದರ್ಭವನ್ನು ಹೆಸರಾಂತ ಸಾಹಿತಿಯಾದ ಎ.ಎನ್. ಮೂರ್ತಿರಾವ್ ಈ ರೀತಿ ಉಲ್ಲೇಖಿಸುತ್ತಾರೆ. [೧]'ಶಿವಮೊಗ್ಗದಲ್ಲಿ ಇದ್ದು ತಮ್ಮ ಪ್ರಕಟನಾ ಸಂಸ್ಥೆಯನ್ನು ಆರಂಭಿಸಿದರು. ಅದು ಆಗ ಬಹುಶಃ ಅರ್ಧ ಹವ್ಯಾಸ ಅರ್ಧವೃತ್ತಿ ಆಗಿತ್ತು. ಅದನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶವೇನೋ ಮೊದಲಿನಿಂದಲೂ ಇದ್ದದ್ದೇ. ಅದನ್ನು ಮೈಸೂರಿಗೆ ತಂದಾಗಲೂ ನಮಗೆಲ್ಲ 'ಇದು ಅವಿವೇಕದ ಕೆಲಸವಾದೀತೇನೋ' ಎಂಬ ಸಂದೇಹವಿತ್ತು. ನಾವು ಮೂರು ನಾಲ್ಕು ಜನ ಅದನ್ನು ಅವರೊಡನೆ ಚರ್ಚಿಸಿದ ನೆನಪೂ ಇದೆ; ಚರ್ಚೆಗೆ ಚಿದಂಬರಂ ಅವರ ಪ್ರತಿಕ್ರಿಯೆಯ ನೆನಪೂ

---

೧. 'ಕಾವ್ಯಾಲಯ' ಪ್ರಕಾಶಕರು; ಸಂಪಾದಕ : ಹೊರೆಯಾಲ ದೊರೆಸ್ವಾಮಿ, ಪುಟ, ೮, ಪ್ರ. ೨೦೦೮ ಪ್ರ. ಅಭಿನವ, ಬೆಂಗಳೂರು ೫೬೦ ೦೪೦.

ಇದೆ. ಅವರು ಎಂದೂ ಹೆಚ್ಚು ಮಾತಿನವರಲ್ಲ. 'ಮೈಸೂರು ಹೊಸಸ್ಥಳ. ಶಿವಮೊಗ್ಗದಲ್ಲಿರುವಷ್ಟು ಜನಸಹಾಯ ಮೈಸೂರಲ್ಲಿ ದೊರೆಯದಿರಬಹುದು, ಇಲ್ಲ ಖರ್ಚೂ ಹೆಚ್ಚು' ಇತ್ಯಾದಿ ವಾದವನ್ನೆಲ್ಲ ಅವರು ತಾಳ್ಮೆಯಿಂದ ಕೇಳಿದರು; ವಿರುದ್ಧವಾಗಿ ಏನನ್ನೂ ಹೇಳಿದಂತೆ ನೆನಪಿಲ್ಲ. ನಮ್ಮ ಮಾತು ಅವರ ಮನಸ್ಸಿಗೆ ನಾಟಿದೆ ಎಂದೇ ನಮ್ಮ ಭಾವನೆ. ಅವರು ನಾವು ಹೇಳಿದ್ದನ್ನೆಲ್ಲ ಮೊದಲೆ ಯೋಚಿಸಿದ್ದಿರಬೇಕು. 'I am taking a calculated risk' (ಸಾಧಕ ಬಾಧಕಗಳನ್ನು ಯೋಚಿಸಿಯೇ ಈ ದಾರಿ ಹಿಡಿದಿದ್ದೇನೆ.) ಎಂದು ಕಿರುನಗೆ ನಗುತ್ತ ಒಂದೇ ಮಾತಿನಲ್ಲಿ ಉತ್ತರ ಕೊಟ್ಟರು. ತಮ್ಮ ನಿರ್ಧಾರದಂತೆ ನಡೆದುಕೊಂಡರು. ಅವರೊಡನೆ ಯಾವ ಚರ್ಚೆ ನಡೆದರೂ ಹೀಗೆಯೇ 'ಇವರು ನಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ' ಎಂಬ ಭಾವನೆಗೆ ಅವಕಾಶವಿರುತ್ತಿರಲಿಲ್ಲ. ಅವರು ತಮ್ಮ ನಿಲುವನ್ನು ಪಟ್ಟು ಹಿಡಿದು ವೀರಾಭಿಮಾನದಿಂದ ಸಮರ್ಥಿಸುವ ಗೋಜಿಗೂ ಹೋಗುತ್ತಿರಲಿಲ್ಲ. ಒಂದೆರಡು ಮಾತಿನಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವುದು, ಅನಂತರ 'ಹಾಗೇ ನಿಶ್ಚಯ ಮಾಡಿಬಿಟ್ಟೆ' ಎನ್ನುವುದು''.

ಮೈಸೂರಿಗೆ ವಾಸವನ್ನು ಸ್ಥಳಾಂತರಿಸುವ ಹೊತ್ತಿನಲ್ಲಿ ಚಿದಂಬರಂ ಅವರ ಬಳಿ ಹಣಕಾಸೇನು ತುಂಬಿರಲಿಲ್ಲ. ತುಂಬಿದ್ದುದು ಕೇವಲ ಅವರ ಆತ್ಮವಿಶ್ವಾಸ. ಈ ಆತ್ಮವಿಶ್ವಾಸವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು 'ಕಾವ್ಯಾಲಯ'ವನ್ನು ಒಂದು ಶ್ರೇಷ್ಠ ಪ್ರಕಾಶನ ಸಂಸ್ಥೆಯನ್ನಾಗಿ ಬೆಳೆಸಿದರು. ಎಂಬುದು ಈಗ ಇತಿಹಾಸದ ಮಾತು.

■

## ನೆಲೆ

ಜೇಬಿನಲ್ಲಿ ಅತಿಸ್ವಲ್ಪ ಹಣವನ್ನು ಇಟ್ಟುಕೊಂಡು ನಿರುದ್ಯೋಗಿಯಾಗಿ ಮೈಸೂರಿನಲ್ಲಿ ಬದುಕು ಕಂಡುಕೊಳ್ಳಲು ಅವರು ಮನಸ್ಸು ಮಾಡಿದುದು ನಿಜಕ್ಕೂ ಆಶ್ಚರ್ಯದ ಸಂಗತಿಯೇ. ಮೈಸೂರಿನಲ್ಲಿ ಮೊದಲಿಗೆ ಪರಿಚಯದ ಎಸ್.ವಿ. ಶ್ರೀನಿವಾಸಮೂರ್ತಿ ಎಂಬುವರ ಮನೆಯಲ್ಲಿ ಒಂದ ವಾರ ಕಾಲ ಉಳಿದುಕೊಂಡು ಆಮೇಲೆ ಕೃಷ್ಣಮೂರ್ತಿ ಪುರಂ ಬಡಾವಣೆಯಲ್ಲಿ ಎರಡು ರೂಪಾಯಿನ ಬಾಡಿಗೆ ಮನೆಯೊಂದನ್ನು ಹಿಡಿದು ಹೆಂಡತಿ, ಎರಡು ಮಕ್ಕಳೊಂದಿಗೆ ಸಂಸಾರ ಹೂಡಿದರು. (೧೯೪೦) ಇಲ್ಲಿ ಕೆಲವು ಕಾಲ ಇದ್ದು ಅನಂತರ ಅದರ ಮಗ್ಗುಲಲ್ಲೇ ಇನ್ನೊಂದು ಬಾಡಿಗೆ ಮನೆಯನ್ನು ಹಿಡಿದರು (೧೯೪೮). ಅನಂತರ ಈ ಎರಡೂ ಮನೆಗಳ ಮಧ್ಯೆ ಮೂರನೆಯ ಬಾಡಿಗೆ ಮನೆಗೆ ಸ್ಥಳಾಂತರಿಸಿದರು. (೧೯೫೧) ಆರು ವರ್ಷಗಳ ಕಾಲ ಅಂದರೆ ಜಯನಗರದಲ್ಲಿ ಸ್ವಂತದ್ದಾದ ಮನೆ ಕಟ್ಟುವವರೆಗೆ (೧೯೫೭) ಆ ಮನೆಯಲ್ಲೇ ನೆಲೆ ನಿಂತರು.

೧೯೪೭ರಲ್ಲಿ ಕಾವ್ಯಾಲಯವನ್ನು ಪೂರ್ಣವಾಗಿ ಕಟ್ಟುವ ಕಾರ್ಯದಲ್ಲಿ ತೊಡಗಿ ಕೊಂಡಾಗ ಹತ್ತಿರದ ಬಿ. ನರಸಿಂಗರಾವ್ (ಭಾರತಿ ಪ್ರಕಾಶನ) ಎಂಬುವವರ ಮನೆಯಲ್ಲಿ ಪುಸ್ತಕಗಳನ್ನು ದಾಸ್ತಾನು ಇಡುವುದಕ್ಕಾಗಿ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದರು. ಆ ದಿನಗಳಲ್ಲಿ ಕೃಷ್ಣಮೂರ್ತಿಪುರಂನಲ್ಲಿ ಡಾಂಬರು ಹಾಕಿದ್ದ ರಸ್ತೆ ನರಸಿಂಗರಾವ್ ಮನೆಯಿದ್ದ ಬೀದಿ ಮಾತ್ರ.

## ಬದುಕು-ಬವಣೆ

ಮೈಸೂರಿಗೆ ಚಿದಂಬರಂ ಬಂದದ್ದೇನೊ ಆಯಿತು. ಹೇಗೊ ವಾಸಕ್ಕೊಂದು ಮನೆಯನ್ನು ಬಾಡಿಗೆಗೆ ಪಡೆದದ್ದೂ ಆಯಿತು. ಆದರೆ, ಬಡತನ ತುಂಬಿತುಳುಕುತ್ತಿತ್ತು. ಇನ್ನೊಬ್ಬರೊಂದಿಗೆ ಕಷ್ಟಗಳನ್ನು ಹೇಳಿಕೊಳ್ಳುವ ಸ್ವಭಾವ ಅವರದಲ್ಲ, ಎಲ್ಲ ತೊಂದರೆಗಳನ್ನೂ ಸಹಿಸುತ್ತಿದ್ದರು. ಅದು ಬಹು ಕಷ್ಟದ ಕಾಲ.

ಜೀವನೋಪಾಯಕ್ಕಾಗಿ ಪರದಾಡುವ ಸ್ಥಿತಿ ಒದಗಿಬಂದಿತು. 'ಮೈಸೂರಿಗೆ ಬಂದ ಮೇಲ' ಅವರಿಗೆ ಎ.ಎನ್. ಮೂರ್ತಿರಾವ್ ಹೇಳಿದ 'ಅವಿವೇಕ'ದ ಬಿಸಿ ತಟ್ಟಿತು. ನಂ. ಶಿವರಾಮಶಾಸಿ ಮತ್ತು ಎ.ಎನ್. ಮೂರ್ತಿರಾವ್ ಅವರು ಒಮ್ಮೆ ಚಿದಂಬರಂರವರೊಡನೆ

ಮೈಸೂರು ವಾಸದ ಬಗೆಗೆ ಮಾತನಾಡುತ್ತಿದ್ದಾಗ ಅವರು 'ನೀವೆಲ್ಲ ಹೇಳಿದ್ದೀರಿ. ನನಗೂ ತೋರಿತ್ತು. ಬಂದಾಯಿತಲ್ಲ, ಸರಿಹೋಗಿಸಿಕೊಳ್ಳಬೇಕು' ಎಂದು ಮೆಲುದನಿಯಲ್ಲಿ ಹೇಳಿ ಮೆಲುನಗೆ ನಕ್ಕು ಸುಮ್ಮನಾದರು. ಸಂಕೋಚ ಸ್ವಭಾವದ ಚಿದಂಬರಂ ಅವರ ಮನಸ್ಥಿತಿಯನ್ನು ಅರಿತಿದ್ದ ಡಾ|| ಸಿ.ಆರ್. ನರಸಿಂಹಶಾಸಿ ಎಂಬುವವರು (ಎ.ಎನ್. ಮೂರ್ತಿರಾವ್ ನೆನಪಿನಂತೆ) ಅವರನ್ನು ಚಾಮರಾಜಪುರಂ ಕೋ-ಆಪರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರರಾಗಿ ಕೆಲಸಕ್ಕೆ ಸೇರಿಸಿದರು. ಅಲ್ಲಿ ಅವರು ಕೆಲಕಾಲ ಕೆಲಸ ಮಾಡಿದರು (೧೯೪೦-೪೩). ಅಲ್ಲಿಯ ಅನುಭವ ಅವರಿಗೆ ಹಿತಕಾರಿಯಾಗಲಿಲ್ಲ, ಆಗ ಅಲ್ಲಿದ್ದ ಚುನಾಯಿತ ಸದಸ್ಯರು ಅವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ, ಹಾಗಾಗಿ, ತಮ್ಮ ವ್ಯಕ್ತಿತ್ವಕ್ಕೆ ಒಗ್ಗದ ಕೆಲಸಕ್ಕೆ ಅವರು ರಾಜಿನಾಮೆ ಇತ್ತರು.

ಗ್ರಂಥ ಪ್ರಕಾಶನದ ಕೆಲಸ ಕೃಷ್ಣಮೂರ್ತಿಪುರಂನ ಬಾಡಿಗೆ ಮನೆಯಲ್ಲೇ ಮುಂದುವರಿಯಿತು. ಈ ನಡುವೆ ವಯಸ್ಕರ ಶಿಕ್ಷಣ ಸಮಿತಿಯ ಹಿರಿಯ ಅಧಿಕಾರಿ ಯಾಗಿದ್ದ ನ. ಭದ್ರಯ್ಯನವರ ನೆರವಿನಿಂದ 'ವಯಸ್ಕರ ಶಿಕ್ಷಣ ಪುಸ್ತಕಮಾಲೆ'ಯ ಸಂಪಾದಕರಾಗಿ ನೇಮಕಗೊಂಡರು. (೧೯೪೪ರ ಜನವರಿಯಿಂದ). ವಯಸ್ಕರರಿಗೆ ಓದುವ ಪೂರಕ ಪುಸ್ತಕಗಳನ್ನು ಪ್ರಕಟಿಸುವ ಕೆಲಸ ಅವರದಾಗಿತ್ತು. ವಿವಿಧ ಲೇಖಕರಿಂದ ಪುಸ್ತಕಗಳನ್ನು ಬರೆಸಿ ಪ್ರಕಟಿಸಿದರು. ಕೆ.ವಿ. ಪುಟ್ಟಪ್ಪ ಮಾಸ್ತಿ, ಎಲ್. ಗುಂಡಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಈ ಮೊದಲಾದವರಿಂದ ಹಸ್ತಪ್ರತಿಗಳನ್ನು ತರಿಸಿ, ಸಂಪಾದಿಸಿ ಪ್ರಕಟಿಸಿದರು. ಅಲ್ಲದೆ ಸ್ವತಃ ಚಿದಂಬರಂ ಅವರೇ ಕೀಚಕವಧೆ, ಜರಾಸಂಧ ವಧೆ, ರಾಜಸೂಯಯಾಗ, ವೀರ ಅಭಿಮನ್ಯು, ಸೈಂಧವ ವಧೆ, ಶ್ರೀಕೃಷ್ಣನ ರಾಯಭಾರ, ಘೋಷಯಾತ್ರೆ, ಧರ್ಮರಾಯನ ಜೂಜು, ದ್ರೌಪದಿಯ ಭಂಗ ಈ ಮುಂತಾದ ಕಿರುಪುಸ್ತಕಗಳನ್ನು ಪುರಾಣ, ಕಾವ್ಯಗಳಿಂದ ಆಯ್ದಕಥೆಗಳನ್ನು ತಿಳಿಗನ್ನಡದಲ್ಲಿ ಸಂಗ್ರಹಿಸಿ, ಸಂಪಾದಿಸಿ 'ಪುಸ್ತಕ ಮಾಲೆ' ಅಡಿಯಲ್ಲಿ ಪ್ರಕಟಿಸಿದರು. ವಯಸ್ಕರರು ಕೇವಲ ಅಕ್ಷರ ಕಲಿತರಷ್ಟೇ ಸಾಲದು. ಕಲಿತ ವಿದ್ಯೆ ಅವರಲ್ಲಿ ಆತ್ಮಗೌರವವನ್ನು ಹುಟ್ಟಿಸಿ, ಸಾರ್ಥಕ ಬಾಳನ್ನು ಕಂಡುಕೊಳ್ಳಬೇಕೆಂಬುದು 'ಪುಸ್ತಕ ಮಾಲೆ'ಯ ಸದುದ್ದೇಶವಾಗಿತ್ತು ಮತ್ತು ಚಿದಂಬರಂ ಆ ಕೆಲಸವನ್ನು ಅಚ್ಚು ಕಟ್ಟಾಗಿ ನಿರ್ವಹಿಸಿದರು. ಹೀಗೆ, ಸಮರ್ಥವಾಗಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದವರು - ಆ ಕೆಲಸವನ್ನೂ ಬಿಟ್ಟದ್ದಕ್ಕೆ ಅಲ್ಲಿನ ಅಧಿಕಾರಿಗಳ ಅನುಚಿತ ವರ್ತನೆಯಲ್ಲದೆ ಇನ್ನಿತರ ಕಾರಣಗಳೂ ಇದ್ದವು. ಎ.ಎನ್. ಮೂರ್ತಿರಾವ್ ಹೇಳುತ್ತಾರೆ 'ಪುಸ್ತಕದ ಮುದ್ರಣದ ಕೆಲಸ ಹೇಗೋ ನಡೆದರಾಯಿತು' ಅನ್ನುವವರಲ್ಲ ಚಿದಂಬರಂ.

■

# ಪೂರ್ಣಾವಧಿ 'ಕಾವ್ಯಾಲಯ'

ಈವರೆಗೂ ಅರೆವೃತ್ತಿಯಾಗಿ ಇಲ್ಲವೆ ಹವ್ಯಾಸಿಯಾಗಿ ಪುಸ್ತಕ ಪ್ರಕಾಶನವನ್ನು ಕೈಗೊಂಡ ಅವರು ೧೯೪೬ರಿಂದ ಕಾವ್ಯಾಲಯದತ್ತ ಇಡಿಯಾಗಿ ಗಮನ ಹರಿಸಿದರು. ಪುಸ್ತಕ ಪ್ರಕಾಶನವನ್ನು ಬೆಳೆಸುವ ಮನಸ್ಸೇನೊ ಇತ್ತು. ಆದರೆ, ಅದಕ್ಕೆ ಅಗತ್ಯವಾದ ಬಂಡವಾಳ ಅವರಲ್ಲಿರಲಿಲ್ಲ. ಹಾಗೆಂದೇನು ಅವರು ಎದೆಗುಂದಲಿಲ್ಲ. 'ಮನಸ್ಸಿದ್ದಲ್ಲಿ ಮಾರ್ಗ' ಎಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಮುದ್ರಣದ ಕಾಗದವನ್ನು ಪರಿಚಯದ ಪೇಪರ್ ವ್ಯಾಪಾರಿಗಳಿಂದ ಸಾಲ ತಂದು ತಮ್ಮ ಕೆಲಸವನ್ನು ಮುಂದು ವರಿಸಿದರು. ಮೈಸೂರಿನ ದೇವರಾಜ ಮಾರುಕಟ್ಟೆ ಬಳಿ ಇರುವ ಆದಿನಾರಾಯಣ ಶೆಟ್ಟಿ ಪೇಪರ್ ಅಂಗಡಿಯಿಂದ ಮುದ್ರಣ ಕಾಗದವನ್ನು ಸಾಲ ತಂದರು. ಮೈಸೂರಿನ ಅಂದಿನ ಹೆಸರಾಂತ ಪ್ರೆಸ್ಸುಗಳಾದ ವೆಸ್ಲಿ ಹಾಗೂ ಮೈಸೂರು ಪ್ರಿಂಟಿಂಗ್ ಪ್ರೆಸ್ಸುಗಳಲ್ಲಿ (ಪರಿಚಯದ ಆಧಾರದ ಮೇಲೆ) ಸಾಲದ ಆಧಾರದ ಮೆಲೆಯೇ ಗ್ರಂಥಗಳನ್ನು ಮುದ್ರಿಸಿದರು. ಪುಸ್ತಕಗಳು ಮಾರಾಟವಾದನಂತರ ನಿಯತವಾಗಿ ಸಾಲಗಳನ್ನು ತೀರಿಸಿದರು. 'ನೀವು ಬಿಸಿನೆಸ್ ಕೊಡಬೇಕು' ಎಂಬ ಸ್ನೇಹದ ಒಪ್ಪಂದದ ಮೇಲೆ ಗ್ರಂಥ ಪ್ರಕಾಶನ ಮುಂದುವರೆಯಿತು. ಕಡು ನಿಷ್ಠೆಯ ಚಿದಂಬರಂ ಅವರು ಅದರಂತೆಯೇ ನಡೆದುಕೊಂಡರು ಎಂದು ಬೇರೆ ಹೇಳಬೇಕಾಗಿಲ್ಲ.

ಪೂರ್ಣಪ್ರಮಾಣದ ಪ್ರಕಾಶಕರಾಗಿ ಚಿದಂಬರಂ ಅವರು ತೊಡಗಿಕೊಂಡಮೇಲೆ ಅವರ ಕೆಲಸವೂ ಅಧಿಕವಾಯಿತು. ಲೇಖಕರಿಂದ ಹಸ್ತಪ್ರತಿ ಪಡೆಯುವುದು (ಹಲವೊಮ್ಮೆ ಲೇಖಕರಿಗೆ ಹೇಳಿ ಪುಸ್ತಕ ಬರೆಸುವುದು); ಪಡೆದ ಹಸ್ತಪ್ರತಿಯನ್ನು ಕೂಲಂಕಷವಾಗಿ ಓದಿ, ಅಗತ್ಯ ಬಿದ್ದರೆ ತಿದ್ದಿ, ಚರ್ಚಿಸಿ, ಅಂತಿಮವಾಗಿ ಅದನ್ನು ಮುದ್ರಣಕ್ಕೆ ಅಣಿಗೊಳಿಸುವುದು ಪುಸ್ತಕ ಪ್ರಕಾಶನದ ಒಂದು ಮಗ್ಗಲು ಕೆಲಸವಾದರೆ, ಅದನ್ನು ಮುದ್ರಿಸುವುದಕ್ಕೆ ಅಗತ್ಯವಾದ 'ಸಕಲ ಸಿದ್ಧತೆಗಳನ್ನು' ಮಾಡಿಕೊಳ್ಳುವುದು ಇನ್ನೊಂದು ಮಗ್ಗಲು ಕೆಲಸವಾಗುತಿತ್ತು. ತಪ್ಪಿಲ್ಲದಂತೆ, ಅಂದವಾಗಿ ಮುದ್ರಿಸಿದ ಪುಸ್ತಕದ ಮಾರಾಟ ಮುಂದಿನ ಹಂತದ್ದು. ಆ ಕೆಲಸವು ಕೂಡ ಸುಲಭವಾದದ್ದೇನಲ್ಲ. ಕನ್ನಡ ಓದುಗರ ಸಂಖ್ಯೆ ಸಾಕಷ್ಟು ಹೆಚ್ಚಿರುವ ಇಂದಿನ ದಿನದಲ್ಲೂ ೧೦೦೦ ಪ್ರತಿಗಳು ಮಾರಾಟವಾಗಬೇಕಾದರೆ ಹರಸಾಹಸ ಮಾಡಬೇಕಾಗಿರುವುದನ್ನು ನೆನೆಸಿಕೊಂಡರೆ ಚಿದಂಬರಂ ಅವರ ಅಂದಿನ ಕನ್ನಡ ಪುಸ್ತಕ

ಮಾರಾಟದ ಸಾಹಸವನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ (ಈ ಬಗ್ಗೆ ವಿವರಗಳನ್ನು ಮುಂದೆ ನೀಡಿದೆ).

'ಕಾವ್ಯಾಲಯ'ದಿಂದ ಸದಭಿರುಚಿಯ ಪುಸ್ತಕಗಳು ಕ್ರಮವಾಗಿ ಹೊರಬರ ತೊಡಗಿದವು. ನಾಡಿನ ಅಂದಿನ ಹೆಸರಾಂತ ಲೇಖಕರ ಕೃತಿಗಳು ಈ ಸಂಸ್ಥೆಯಿಂದ ಪ್ರಕಾಶಕ್ಕೆ ಬಂದವು. ಕೆ.ವಿ. ಪುಟ್ಟಪ್ಪ ಪು.ತಿ. ನರಸಿಂಹಾಚಾರ್, ಎ. ಸೀತಾರಾಮ್, ತೀ.ನಂ. ಶ್ರೀಕಂಠಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ವಿ. ರಂಗಣ್ಣ ಸಿ. ಕೃಷ್ಣ, ಎ.ಎನ್. ಮೂರ್ತಿರಾವ್, ಎಲ್. ಗುಂಡಪ್ಪ ಎಂ. ಗೋಪಾಲಕೃಷ್ಣ ಅಡಿಗ, ಹೊಯಿಸಳ, ಎಸ್.ವಿ. ಪರಮೇಶ್ವರ ಭಟ್ಟ, ಹೆಚ್.ವಿ. ಸಾವಿತ್ರಮ್ಮ ಎಂ.ಎಸ್. ಪುಟ್ಟಣ್ಣ ಚ. ವಾಸುದೇವಯ್ಯ, ಕೆ.ಎಸ್. ನರಸಿಂಹಸ್ವಾಮಿ, ಬಿ.ಎಂ. ಶ್ರೀಕಂಠಯ್ಯ, ಡಿ.ವಿ. ಗುಂಡಪ್ಪ ರಾಳ್ಲಪಳ್ಳಿ ಅನಂತಕೃಷ್ಣ ಶರ್ಮ, ಭೂಪಾಳಂ ಚಂದ್ರಶೇಖರಯ್ಯ, ಗೋವಿಂದಪೈ, ಕುಲಕರ್ಣಿ ಬಿಂದು ಮಾಧವ, ದೇವಕಿಮೂರ್ತಿ, ಕೆ. ಕೃಷ್ಣಮೂರ್ತಿ, ಕೆ. ನರಸಿಂಹ ಶಾಸಿ, ಎಸ್.ಜಿ. ನರಸಿಂಹಾಚಾರ್, ಎನ್. ಬಾಲ ಸುಬ್ರಹ್ಮಣ್ಯಂ, ವಾಸುದೇವಾಚಾರ್ಯ, ಶೇಷನಾರಾಯಣ, ರವೀಂದ್ರನಾಥ ಠಾಕೂರ್ (ಅನುವಾದ ಕೃತಿಗಳು), ಈ ಮುಂತಾದ ಹಲವು ಪ್ರಸಿದ್ಧ ಲೇಖಕರ ಒಂದು ಸಾವಿರಕ್ಕೂ ಮಿಕ್ಕು ಕೃತಿಗಳನ್ನು ಪ್ರಕಟಿಸಿದ್ದು ಕಾವ್ಯಾಲಯದ ಹಿರಿಮೆ ಅನ್ನಬಹುದು. ಪ್ರಸ್ತುತ ಆ ಸಂಖ್ಯೆ ಒಂದು ಸಾವಿರದ ಐನೂರನ್ನು ಮಿಕ್ಕಿದೆ.

ಹೊಸ ಲೇಖಕರನ್ನು ಕೇವಲ ಅವರ ಕೃತಿಗಳ ಗುಣವನ್ನಾಧರಿಸಿಯೇ ಪ್ರಕಟಿಸಿ, ಸಾಹಿತ್ಯ ಜಗತ್ತಿಗೆ ಪರಿಚಯ ಮಾಡಿಕೊಟ್ಟದ್ದು ಕಾವ್ಯಾಲಯದ ಆ ಮೂಲಕ ಚಿದಂಬರಂ ಅವರ ಹೆಚ್ಚುಗಾರಿಕೆಯೇ ಅನ್ನಬಹುದು. ವಾಸ್ತವವಾಗಿ ಕಾವ್ಯಾಲಯ ಮತ್ತು ಚಿದಂಬರಂ ಅಭಿನ್ನ, ಪ್ರತ್ಯೇಕಿಸಿ ನೋಡುವುದು ಎಂದೂ ಅಸಾಧ್ಯ.

ಕಾವ್ಯಾಲಯ ಮೊದಮೊದಲು ಹೆಚ್ಚಿನ ಸಂಖ್ಯೆಯಲ್ಲಿ ಕೆ.ವಿ. ಪುಟ್ಟಪ್ಪನವರ ಕೃತಿಗಳನ್ನು ಪ್ರಕಟಿಸಿತು. ಅದಕ್ಕೆ ಕಾರಣವಿಲ್ಲದೆ ಇಲ್ಲ. ಕೆ.ವಿ. ಪುಟ್ಟಪ್ಪ ಮತ್ತು ಕೂಡಲಿ ಚಿದಂಬರಂ ತೀರ್ಥಹಳ್ಳಿಯಲ್ಲಿ ಓದುವಾಗಲಿಂದಲೂ ಸಹಪಾಠಿಗಳು ಮತ್ತು ಹತ್ತಿರದ ಗೆಳೆಯರು. ಆ ನಿರಂತರ ಒಡನಾಟವೂ ಒಂದು ಪ್ರಮುಖ ಕಾರಣ ಅನ್ನಬಹುದು. ಕೆ.ವಿ. ಪುಟ್ಟಪ್ಪನವರು ಮೈಸೂರಿನಿಂದ ತಮ್ಮ ಊರಿಗೆ ಹೋಗುವ ಸಂದರ್ಭ ಬಂದಾಗಲೆಲ್ಲ ಶಿವಮೊಗ್ಗೆಯ ತಮ್ಮ ಈ ಗೆಳೆಯ ಮತ್ತಿತತರರನ್ನು ಕಂಡು, ಮಾತನಾಡಿಸದೆ ಹೋಗುತ್ತಿರಲಿಲ್ಲ. ಅವರು ಮೈಸೂರಿನಲ್ಲಿ ನೆಲೆಸಿದ್ದರೂ ತಮ್ಮ ತೌರು ಜಿಲ್ಲೆಯ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮದೇ ಆದ ಕಾಣಿಕೆ ಸಲ್ಲಿಸುತ್ತಿದ್ದರು. ಅಲ್ಲಿನ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೇರಕರೂ ಪೂರಕರೂ ಆಗಿದ್ದರು. ಕೆ.ವಿ. ಪುಟ್ಟಪ್ಪನವರು ಕುವೆಂಪು ಆಗಿ ಬೆಳೆಯುವಲ್ಲಿ ಕಾವ್ಯಾಲಯದ ಪಾತ್ರವನ್ನು ನಾವು ಕಡೆಗಣಿಸುವುವಂತಿಲ್ಲ.

ಕುವೆಂಪು ಅವರ ಮೊದಲ ೫೨ ಪುಸ್ತಕಗಳನ್ನು ಕೂಡಲಿ ಚಿದಂಬರಂ ನೇತೃತ್ವದ ಕಾವ್ಯಾಲಯ ಪ್ರಕಟಿಸಿತು. ಕವನ, ಕಾದಂಬರಿ, ಸಣ್ಣ ಕಥೆ, ಪ್ರಬಂಧ, ನಾಟಕ, ಮಕ್ಕಳ ಸಾಹಿತ್ಯ, ವೈಚಾರಿಕ, ಸಾಹಿತ್ಯ ವಿಮರ್ಶೆ ಈ ಮೊದಲಾದ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಆ ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಅವರಿಗೊಂದು ಭದ್ರವಾದ ಸ್ಥಾನವನ್ನು ತಂದುಕೊಟ್ಟವು.

ಕುವೆಂಪು ಅವರ ಮೊದಲ ಕೃತಿ 'ಕಿಂದರಿ ಜೋಗಿ ಮತ್ತು ಇತರ ಕಥನ ಕವನಗಳು' (ಕಾವ್ಯಾಲಯದಿಂದ ಪ್ರಕಟವಾದ ಮೊದಲ ಕೃತಿ). ಅನಂತರ 'ಸಂನ್ಯಾಸಿ ಮತ್ತು ಇತರ ಕಥೆಗಳು' 'ಚಿತ್ರಾಂಗದಾ', 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಈ ಮೊದಲಾದ ಕೃತಿಗಳನ್ನು 'ಕಾವ್ಯಾಲಯ' (ಶಿವಮೊಗ್ಗದಲ್ಲಿ) ಪ್ರಕಟಿಸಿ, ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ಹೆಜ್ಜೆಯನ್ನು ಹಾಕಿತು. ಬಿ.ಎಂ. ಶ್ರೀಕಂಠಯ್ಯನವರ ಮುನ್ನುಡಿಯೊಂದಿಗೆ 'ಕಿಂದರಿಜೋಗಿ ಮತ್ತು ಇತರ ಕಥನ ಕವನಗಳು' ಪ್ರಕಟಗೊಂಡಿತು. ''ಕಾವ್ಯಾಲಯದ ಸೇವಾಸಕ್ತಿಯು ಕನ್ನಡಿಗರ, ಕನ್ನಡದ ಭಕ್ತಿಯು ವರ್ಧಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ' ಎಂದು ಬಿ.ಎಂ.ಶ್ರೀ.ಯವರು ಕಾವ್ಯಾಲಯವನ್ನು ಹರಸಿ ಹಾರೈಸಿದರು. 'ಕೊಳಲು' ಕವನ ಸಂಕಲನಕ್ಕೆ ಬಿ.ಎಂ. ಶ್ರೀಯವರು ಮುನ್ನುಡಿ ಬರೆದು (೧೯೩೦) ತಮ್ಮ ಶಿಷ್ಯನ ಸಾಹಿತ್ಯ ಕೃತಿಯ ಮೇಲೆ ಬೆಳಕು ಚೆಲ್ಲಿದರು. ''... ಕನ್ನಡ ಕಾವ್ಯದ ಹೊಲವನ್ನು ಹೊಸ ರೀತಿಯಲ್ಲಿ ಉತ್ತು ಬೆಳೆ ಮಾಡಬೇಕೆಂದು ಪ್ರಯತ್ನ ಪಡುತ್ತಿರುವವರಲ್ಲಿ ಶ್ರೀ ಪುಟ್ಟಪ್ಪನವರ ಸಾಧನೆ ಸ್ತೋತ್ರಾರ್ಹವಾಗಿದೆ. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಇವರು ವಿದ್ಯಾರ್ಥಿ ಕವಿಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಈ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೋಧಕರಾಗಿ ತಮ್ಮ ಉತ್ಸಾಹವನ್ನು ಕಿರಿಯರಲ್ಲಿ ತುಂಬುತ್ತಿರುವವರು. ಶ್ರೀಮನ್ ಮಹಾರಾಜರವರ ಜೂಬಿಲಿ ಮಹೋತ್ಸವದಲ್ಲಿ ತಮ್ಮ ರಾಜಭಕ್ತಿಯನ್ನೂ – 'ಬೆಳ್ಳಿಯ ಹಬ್ಬದ ಕಬ್ಬದ ಬಳ್ಳಿ' ಎಂಬ ಗೀತದಲ್ಲಿ ಪ್ರಕಟಿಸಿರುತ್ತಾರೆ. ಇವರ 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ'ಗೆ ಮರುಳಾಗದ ಮಕ್ಕಳೇ ಇಲ್ಲ. 'ಯಮನ ಸೋಲು', 'ಜಲಗಾರ', 'ಚಂದ್ರಹಾಸ', 'ಬಿರುಗಾಳಿ' ಮುಂತಾದ ನಾಟಕಗಳು ವಿಧವಿಧ ಪ್ರಯತ್ನ ಪರೀಕ್ಷೆಗಳಿಗೆ ಸಾಕ್ಷಿಗಳಾಗಿವೆ. ಇವರ ಕವನಗಳನ್ನು ಸರಸ್ವತೀದೇವಿಯೇ ನುಡಿಸುತ್ತಿರುವಳೆಂಬುದರಲ್ಲಿ ಸಂದೇಹವಿಲ್ಲ.

....ಪುಟ್ಟಪ್ಪನವರ ಕವಿತ್ವಗಳೆಲ್ಲಾ ಹೃದಯದಿಂದ ಬಂದುವೇ; ನೇರವಾಗಿ ಹೃದಯಕ್ಕೆ ಹೋಗತಕ್ಕುವೇ. ಇವರು ಹುಟ್ಟಿ ಬೆಳೆದದ್ದು ಶಿವಮೊಗ್ಗೆಯ ಪ್ರಾಂತದ ಮಲೆನಾಡಿನ ಒಕ್ಕಲು ಮಕ್ಕಳ ಕುಲದಲ್ಲಿ; ಈಗ ಇವರ ವಾಸ ಮೈಸೂರಿನ ಶ್ರೀರಾಮಕೃಷ್ಣಾಶ್ರಮದಲ್ಲಿ; ಉದ್ಯೋಗ, ಕಾವ್ಯಪ್ರಿಯರೊಡನೆ ಕವಿತಾಪ್ರಸಾದವನ್ನು ಸವಿಯುವುದರಲ್ಲಿ ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು. ಇವರ ತಿರುಳಗನ್ನಡ ನುಡಿಗಳು,

ಇಂಪಾದ ಹೊಸ ಹೊಸ ಮುದ್ದು ಪದ್ಯಗಳು, ಸರಳ ಶೈಲಿ, ಭಾವೋದ್ರೇಕ ಗೀತ ಪ್ರವಾಹ, ಇವುಗಳ ಹೊಡೆತದಲ್ಲಿ ಏನಾದರೂ ತಪ್ಪುಗಳು ಒಂದು ವೇಳೆ ಬಿದ್ದಿದ್ದರೂ ಅವು ಕಾಣದಂತೆ ಮುಚ್ಚಿಹೋಗುವುವು. ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ; ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ; ಆತ್ಮವಿದೆ. ಇರುವುದರಿಂದ ಅಮೃತತ್ವದ ಸಾರವಿದೆ' ಬಿ.ಎಂ.ಶ್ರೀ ಅವರ ಈ ನುಡಿಗಳು ನಿಷ್ಕಲ್ಮಶತೆಯಿಂದ ಕೂಡಿದ್ದು ಕೆ.ವಿ. ಪುಟ್ಟಪ್ಪನವರ ಸಾಹಿತ್ಯ ಬಾಳ್ವೆಗೆ ಪ್ರೋತ್ಸಾಹ ತುಂಬಿದವು. ಇದು ಸಾಧ್ಯವಾದುದು 'ಕಾವ್ಯಾಲಯ' ದಿಂದ. ಅದೇ ರೀತಿ ಟಿ.ಎಸ್. ವೆಂಕಣ್ಣಯ್ಯನವರು 'ಯಮನ ಸೋಲು', 'ಬಿರುಗಾಳಿ' ನಾಟಕಗಳಿಗೆ ಮುನ್ನುಡಿ ಬರೆದು (೧೯೩೦) ಆ ನಾಟಕಗಳ ಒಳಹೊರಗನ್ನು ವಿವರವಾಗಿ ಚರ್ಚಿಸಿದ್ದಾರೆ.... ''ಮೊದಮೊದಲು ಕನ್ನಡ ನಾಟಕಕಾರರು ಸಂಸ್ಕೃತ ನಾಟಕಗಳ ಮಾದರಿಯನ್ನು ಅವಲಂಬಿಸಿದರು; ಈಗ ಪುಟ್ಟಪ್ಪನವರು ಈ ಇಂಗ್ಲಿಷ್ ಸಂಪ್ರದಾಯವನ್ನು ಕನ್ನಡಕ್ಕೆ ತರಲು ಈ ನಾಟಕಗಳಲ್ಲಿ ಪ್ರಯತ್ನಿಸಿರುತ್ತಾರೆ....

'ಈ ನಾಟಕಗಳಲ್ಲಿರುವ ಪದ್ಯದ ಮೂಲವು ರಗಳೆಯಲ್ಲಿದೆ. ಲಲಿತರಗಳೆಯಲ್ಲಿ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕುಗಣಗಳಿರುತ್ತವೆ; ಪಾದದ ಆದ್ಯಂತಗಳಲ್ಲಿ ಪ್ರಾಸವಿರುತ್ತದೆ. ಈ ಪ್ರಾಸದ ಕಟ್ಟನ್ನು ತೆಗೆದು ಹಾಕಿದರೆ ಪುಟ್ಟಪ್ಪನವರು ಬರೆದಿರುವ ತಳಹದಿ ಸಿಕ್ಕುತ್ತದೆ. ಈ ಪ್ರಾಸರಹಿತವಾದ ರಗಳೆಯನ್ನು 'ಸರಳ ರಗಳೆ' ಎಂದು ಕರೆಯಬಹುದು.

ಈ ಸರಳ ರಗಳೆಯನ್ನು ಪುಟ್ಟಪ್ಪನವರು ಹೊಸದಾಗಿ ಕಲ್ಪಿಸಿಕೊಳ್ಳಲಿಲ್ಲ. ಅದು ಮೊದಲೇ ಪ್ರಚಾರಕ್ಕೆ ಬಂದಿತ್ತು. ಅದನ್ನು ಮೊದಲು ನಾಟಕಕ್ಕೆ ಬಳಸಿಕೊಂಡವರು ಪುಟ್ಟಪ್ಪನವರು.

ಇಂಥ ಸಾಹಿತ್ಯಿಕ ಚಿಂತನೆಯಿಂದ ಕೂಡಿದ ಮುನ್ನುಡಿಗಳನ್ನು ಹೊತ್ತು ತರುತ್ತಿದ್ದ 'ಕಾವ್ಯಾಲಯ'ದ ಪುಸ್ತಕಗಳು ಸಹಜವಾಗೆ ಓದುಗರನ್ನು ಆಕರ್ಷಿಸ ತೊಡಗಿದವು. ಮಾತ್ರವಲ್ಲ, ಈ ಸಂಸ್ಥೆಯ ಪ್ರಕಟಣೆಗಳಿಗೆ ಮೆರಗನ್ನೂ ತಂದವು ಕಾನೂರು ಸುಬ್ಬಮ್ಮ ಹೆಗ್ಗಡತಿ, ನನ್ನ ಗೋಪಾಲ, ಸ್ಮಶಾನ ಕುರುಕ್ಷೇತ್ರಂ, ಜಲಗಾರ, ಮಹಾರಾತ್ರಿ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪಾಂಚಜನ್ಯ, ಶೂದ್ರತಪಸ್ವಿ, ನಿರಂಕುಶಮತಿಗಳಾಗಿ, ನನ್ನ ದೇವರು ಮತ್ತು ಇತರ ಕಥೆಗಳು, ರಕ್ತಾಕ್ಷಿ, ಮಲೆನಾಡಿನ ಚಿತ್ರಗಳು, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಾವ್ಯವಿಹಾರ, ಕೃತ್ತಿಕೆ, ಕಿಂಕಿಣಿ, ಅಗ್ನಿಹಂಸ, ನನ್ನ ಮನೆ, ಮರಿ ವಿಜ್ಞಾನಿ, ಬೆರಳ್‌ಗೆ ಕೊರಳ್, ಮೇಘಪುರ, ಷೋಡಶಿ ಈ ಮೊದಲಾದ ಕೃತಿಗಳು ಪ್ರಥಮಬಾರಿಗೆ ಬೆಳಕು ಕಂಡದ್ದು 'ಕಾವ್ಯಾಲಯ'ದಿಂದಲೇ.

'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿ ಮೊದಲು ನಾಲ್ಕು ಭಾಗಗಳಲ್ಲಿ

'ಕಾವ್ಯಾಲಯ'ದಿಂದ ಪ್ರಕಟಗೊಂಡಿತು ಮಲೆನಾಡಿನ ಕುಟುಂಬವೊಂದರ ಬದುಕಿನ ಹಿನ್ನೆಲೆಯಲ್ಲಿ ಇಡೀ ಮಲೆನಾಡಿನ ಜೀವನವನ್ನು ಅನಾವರಣಗೊಳಿಸುವ ಈ ಬೃಹತ್ ಕಾದಂಬರಿ ಕುವೆಂಪು ಅವರನ್ನು ಕನ್ನಡದ ಒಬ್ಬ ಮಹತ್ತಿನ ಕಾದಂಬರಿಕಾರರನ್ನಾಗಿ ಸ್ಥಾಪಿಸಿತು ಎಂಬ ಬಗ್ಗೆ ಅನುಮಾನವಿಲ್ಲ. ಈ ಕಾದಂಬರಿ ಸೃಷ್ಟಿಗೊಳ್ಳುತ್ತಿದ್ದ ಸಂದರ್ಭ ವನ್ನೂ, ಅದಕ್ಕೆ ಪೂರಕವಾಗಿದ್ದ ತಮ್ಮ ಮಿತ್ರ ಬಳಗವನ್ನೂ ಕುವೆಂಪು 'ನೆನಪಿನ ದೋಣಿ' ಯಲ್ಲಿ ಸ್ಮರಿಸಿದ್ದಾರೆ. ಅವರು ಬರೆಯುತ್ತಾರೆ. ('ನೆನಪಿನ ದೋಣಿ'; ಪುಟ ೧೦೨೪) "ಅದು (ಕಾನೂರು ಹೆಗ್ಗಡಿತಿ) ಮೊದಲು ಪ್ರಕಟವಾದದ್ದು ನಾಲ್ಕು ಹೊತ್ತಿಗೆಗಳಲ್ಲಿ, ಮೊದಲನೆಯ ಭಾಗ ೧೯೩೦ರಲ್ಲಿ ಹೊರಬಿತ್ತು. ಆಗ ಶಿವಮೊಗ್ಗೆಯಲ್ಲಿ ವಕೀಲಿ ಮಾಡುತ್ತಿದ್ದ ಕೂಡಲಿ ಚಿದಂಬರಂ ನೇತೃತ್ವದಲ್ಲಿ ದೇವಂಗಿ ಮಾನಪ್ಪನವರು ಮತ್ತು ನಾನೂ ಸೇರಿದಂತೆ 'ಕಾವ್ಯಾಲಯ ಪ್ರಕಾಶನ' ಸಂಸ್ಥೆಯಿಂದ ಈ ಪ್ರಕಾಶನ ಸಂಸ್ಥೆಯ ಎಲ್ಲ ಜವಾಬ್ದಾರಿಯನ್ನೂ ಕೂಡಲಿ ಚಿದಂಬರಂ ಅವರೇ ಹೊತ್ತುಕೊಂಡರು.

ಅದು ಕಾದಂಬರಿಕಾರನ ಹೃದಯದಲ್ಲಿ ಜನ್ಮತಳೆಯುತ್ತಿದ್ದ ಸಂದರ್ಭದ ಬಗ್ಗೆ ಬರೆಯುತ್ತಾ ಕುವೆಂಪು ಹೇಳುತ್ತಾರೆ. ('ನೆನಪಿನ ದೋಣಿ' : ಪು. ೧೦೫೧)

"....೬.೪.೧೯೩೪. ಬೆಳಗ್ಗೆ ಶಿವಮೊಗ್ಗಕ್ಕೆ ಬಂದೆವು. ಏನು ಸೆಕೆ! ದೇವರೆಗತಿ! ನನ್ನ ಕಾದಂಬರಿಯನ್ನು ಓದಲು ಪ್ರಾರಂಭಿಸಿದೆ. 'ಕಾನೂನು ಸುಬ್ಬಮ್ಮ ಹೆಗ್ಗಡಿತಿ' ಎಂಬ ಹೆಸರಿನಿಂದ ಪ್ರಕಟವಾದ ನನ್ನ ಮೊದಲ ಕಾದಂಬರಿ. ಅದು ಮುಗಿದಿರಲಿಲ್ಲ... ಅದರ ಮೊದಲ ಭಾಗ ೧೯೩೦ರಲ್ಲಿ ಪ್ರಕಟವಾಯಿತು. ಆಮೇಲೆ ಅದರ ಹೆಸರು 'ಕಾನೂರು ಹೆಗ್ಗಡಿತಿ' ಎಂದಾಯಿತು. ನನ್ನ ಶಿವಮೊಗ್ಗೆಯ ಮಿತ್ರರು – ದೇವಂಗಿ ಮಾನಪ್ಪ ಭೂಪಾಳಂ ಚಂದ್ರಶೇಖರಯ್ಯ, ಕೂಡಲಿ ಚಿದಂಬರಂ, 'ಆನಂದ' ಕಾವ್ಯನಾಮದ ಎ. ಸೀತಾರಾಂ – ಈ ಮೊದಲಾದವರು ಪೀಡಿಸಿ ಕೇಳಿಕೊಂಡಿದ್ದರಿಂದ ಆಗ ಬರೆದದ್ದಷ್ಟನ್ನೆ ಅವರಿಗೆ ಓದಿದ್ದ" ಈ ಸಂದರ್ಭ ಅಂದಿನ ಸಾಹಿತ್ಯಿಕ ಸಹೃದಯತೆಯನ್ನು ಪರೋಕ್ಷವಾಗಿ ತಿಳಿಸುತ್ತದಲ್ಲದೆ ಚಿದಂಬರಂ ಅವರು (ಅವರ ಗೆಳೆಯರೂ) ಕುವೆಂಪು ಅವರ ಸಾಹಿತ್ಯಿಕ ಜೀವನದಲ್ಲಿ ಹೇಗೆ ಅವಿಭಾಜ್ಯ ಅಂಗವಾಗುತ್ತಾರೆ ಎಂಬುದನ್ನು ತಿಳಿಸುತ್ತದೆ.

ಪುಸ್ತಕ ಪ್ರಕಟಣೆಯ ದಿನಗಳು ಈ ಇಬ್ಬರು ಬಾಲ್ಯ ಗೆಳೆಯರನ್ನು ಇನ್ನಷ್ಟು ಹತ್ತಿರಕ್ಕೆ ತಂದವು. ಶಿವಮೊಗ್ಗದಿಂದ 'ಕಾವ್ಯಾಲಯ' ಸ್ಥಳಾಂತರಗೊಂಡಮೇಲೂ ಅದೇ ಬಾಂಧವ್ಯ ಮುಂದುವರಿಯಿತು. ಕುವೆಂಪು ಅವರ ಒತ್ತಾಸೆಯೂ ಒಂದು ಪ್ರಮುಖ ಕಾರಣವಾಗಿ 'ಕಾವ್ಯಾಲಯ'ದ ಸಮೇತ ಚಿದಂಬರಂ ಮೈಸೂರಿನತ್ತ ಪ್ರಯಾಣ ಬೆಳೆಸಿದರು. ಚಿದಂಬರಂ ಅವರು ಮೈಸೂರಿನ ಕೃಷ್ಣಮೂರ್ತಿಪುರಂನ ತಮ್ಮ ಮನೆಯಲ್ಲಿ ಗ್ರಂಥ ಪ್ರಕಟಣೆಯ ಕಾರ್ಯವನ್ನು ಮುಂದುವರಿಸಿದಾಗ, ಕುವೆಂಪು ಆಗಾಗ್ಗೆ ಅವರ ಮನೆಗೆ ಬರುತ್ತಿದ್ದರು. ಕೆಂಪುಬಣ್ಣದ ಎತ್ತರದ ನಿಲುವಿನ ಕುವೆಂಪು ನಡೆದುಕೊಂಡೇ ತಮ್ಮ ಮನೆಗೆ ಬರುತ್ತಿದ್ದುದನ್ನು

ಚಿದಂಬರಂ ಅವರ ಮಕ್ಕಳು ನೆನೆಸಿಕೊಳ್ಳುತ್ತಾರೆ. ಅವರ ಶುಭ್ರತೆಯನ್ನು ಕಂಡ ಅಕ್ಕಪಕ್ಕದ ಮನೆಯವರು 'ಅವರನ್ನು ಬ್ರಾಹ್ಮಣರೆಂದೇ ತಿಳಿದುಕೊಂಡಿದ್ದರು' (ಸಿ.ಕೆ. ಕೃಷ್ಣಮೂರ್ತಿ) ಕುತೂಹಲದಿಂದ ಜನ ಅವರನ್ನು ನೋಡುತ್ತಿದ್ದರು. ಆ ಹೊತ್ತಿಗಾಗಲೆ ಕೆ.ವಿ. ಪುಟ್ಟಪ್ಪ 'ಕುವೆಂಪು' ಆಗಿ ಸಾಕಷ್ಟು ಪ್ರಸಿದ್ಧಿ ಪಡೆದಿದ್ದರು.

ಕುವೆಂಪು ಅವರಲ್ಲದೆ ಅನೇಕ ಹಿರಿಕಿರಿದು ಸಾಹಿತಿಗಳ ಪುಸ್ತಕಗಳನ್ನೂ ಪ್ರಕಟಿಸಿ, 'ಕಾವ್ಯಾಲಯ' ತನ್ನ ಸಾಹಿತ್ಯಿಕ ಪರಿಚಾರಿಕೆಯನ್ನು ನಿಸ್ಪೃಹತೆಯಿಂದ ಮಾಡಿತು. ಪು.ತಿ. ನರಸಿಂಹಾಚಾರ್ (ಅಹಲ್ಯೆ, ರಾಮಾಚಾರಿಯ ನೆನಪು ಇತ್ಯಾದಿ), ತೀ.ನಂ. ಶ್ರೀಕಂಠಯ್ಯ (ರಾಕ್ಷಸನ ಮುದ್ರಿಕೆ, ನಂಬಿಯಣ್ಣನ ರಗಳೆ ಇತ್ಯಾದಿ), ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಹಳ್ಳಿಯ ಬಾಳು, ಬೆಸ್ತರ ಕರಿಯ ಇತ್ಯಾದಿ), ಎಸ್.ವಿ. ರಂಗಣ್ಣ (ಶೈಲಿ, ರಂಗಬಿನ್ನಪ ಇತ್ಯಾದಿ), ಸಿ. ಕೃಷ್ಣ (ನನ್ನ ಅಪ್ಪನೆ, ಮುಗುದೆಯ ಪತ್ರಗಳು ಇತ್ಯಾದಿ), ಎ.ಎನ್. ಮೂರ್ತಿರಾವ್ (ಹಗಲುಗನಸುಗಳು, ಆಷಾಢಭೂತಿ ಇತ್ಯಾದಿ), 'ಆನಂದ' (ಮಾಟಗಾತಿ, ಸ್ವಪ್ನಜೀವಿ ಮತ್ತು ಇತರ ಕಥೆಗಳು ಇತ್ಯಾದಿ), ಎಲ್. ಗುಂಡಪ್ಪ (ಚಟಾಕಿ, ಇತ್ಯಾದಿ) ಎಸ್.ಜಿ. ಶಾಸ್ತ್ರಿ (ಇದ್ದರೂ ಇರಬಹುದು), ಟಿ.ಎಸ್. ಶಾಮರಾವ್ (ಕನ್ನಡ ಮಹಾಭಾರತ ಉದ್ಯೋಗಪರ್ವ ಸಂಗ್ರಹ) 'ರಾಘವ' (ಹೂವಾಡಗಿತ್ತಿ), ಎಂ. ಗೋಪಾಲಕೃಷ್ಣ ಅಡಿಗ (ಭಾವತರಂಗ, ಕಟ್ಟುವೆವು ನಾವು ಇತ್ಯಾದಿ), 'ಹೊಯಿಸಳ' (ಪೋರಿ, ಪುಟ್ಟರಸು ಇತ್ಯಾದಿ), ಎಸ್.ವಿ. ಪರಮೇಶ್ವರ ಭಟ್ಟ (ಕನ್ನಡ ಋತು ಸಂಹಾರ), 'ಭಾರತೀಪ್ರಿಯ' (ರುದ್ರವೀಣೆ), ಜವಾಹರ್ ಲಾಲ್ ನೆಹ್ರು (ಭಾರತದರ್ಶನ, ಪತ್ರಗುಚ್ಛ- ಕ್ರಮವಾಗಿ Discovery of India ಮತ್ತು Bunch of old letters ಅನುವಾದ) ಚ. ವಾಸುದೇವಯ್ಯ (ಆರ್ಯಕೀರ್ತಿ-೧, ಛತ್ರಪತಿ ಶಿವಾಜಿ ಇತ್ಯಾದಿ), ಶ್ರೀಪತಿ (ಶ್ರೀಪತಿಯ ಕಥೆಗಳು) ಹೆಚ್.ವಿ. ಸಾವಿತ್ರಮ್ಮ (ನಿರಾಶ್ರಿತೆ, ಸರಿದ ಬೆರಳು ಇತ್ಯಾದಿ), ಭೂಪಾಳಂ ಚಂದ್ರಶೇಖರಯ್ಯ (ವಿಶ್ವವಿಜೇತನ ಸಿಂಹಾಸನಾರೋಹಣ), ಎನ್. ಬಾಲಸುಬ್ರಹ್ಮಣ್ಯಂ (ಕಲೆಗಳು ಮತ್ತು ಮಾನವ ವೇದಾಂತಸಾರ ಇತ್ಯಾದಿ), ಎಂ.ಎಸ್. ಪುಟ್ಟಣ್ಣ (ಸುಮತಿ ಮದನಕುಮಾರರ ಚರಿತ್ರೆ; ಮಾಡಿದ್ದುಣ್ಣೋ ಮಹಾರಾಯ ಇತ್ಯಾದಿ), ಕೆ.ಎಸ್. ನರಸಿಂಹಸ್ವಾಮಿ (ದೀಪದಮಲ್ಲಿ, ಉಂಗುರ ಇತ್ಯಾದಿ), ಬಿ.ಎಂ. ಶ್ರೀಕಂಠಯ್ಯ (ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಇಂಗ್ಲಿಷ್ ಗೀತೆಗಳು ಇತ್ಯಾದಿ), ಡಿ.ಎಲ್. ನರಸಿಂಹಾಚಾರ್ (ಸಿದ್ಧರಾಮಚರಿತೆಯ ಸಂಗ್ರಹ), ಡಿ.ವಿ. ಗುಂಡಪ್ಪನವರು (ಸಮಗ್ರ ಕೃತಿಗಳು), ಆರ್.ಎಲ್. ನರಸಿಂಹಯ್ಯ (ಜಗತ್ತುಗಳ ಹುಟ್ಟುಸಾವು) ರಾಳ್ಲಪಳ್ಳಿ ಅನಂತಕೃಷ್ಣ ಶರ್ಮ (ಗಾನಕಲೆ, ಸಾಹಿತ್ಯ ಮತ್ತು ಜೀವನಕಲೆ) ಕುಲಕರ್ಣಿ ಬಿಂದುಮಾಧವ (ಬಲಿಪೀಠ), ಗೋವಿಂದಪೈ (ಸಮಗ್ರ ಕೃತಿಗಳು) ಕೆ. ನರಸಿಂಹ ಶಾಸ್ತ್ರಿ (ಸೊಹ್ರಾಬ್ ರುಸ್ತುಂ, ಕನ್ನಡ ಹಿತೋಪದೇಶ ಇತ್ಯಾದಿ), ಎಸ್.ಜಿ. ನರಸಿಂಹಾಚಾರ್ (ಅಲ್ಲಾವುದ್ದೀನ್ ಮತ್ತು ಅದ್ಭುತ

ದೀಪ), ವಾಸುದೇವಾಚಾರ್ಯ (ನೆನಪುಗಳು, ನಾ ಕಂಡ ಕಲಾವಿದರು) ಕೆ. ಶಂಕರರ ಪ್ರೇಮ ಪ್ರಕರಣ, ವಿವಾಹ ವಿಚ್ಛೇದ ಇತ್ಯಾದಿ), ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ (ಮೇಘ ಸಂದೇಶ) ಈ ಮುಂತಾದ ಹಿರಿಯ ಲೇಖಕರ ಕೃತಿಗಳನ್ನು ಪ್ರಕಟಿಸಿದ್ದು ತಂದದ್ದು 'ಕಾವ್ಯಾಲಯ'ದ ಹೆಗ್ಗಳಿಕೆಯೇ ಆಗಿದೆ.

'ಕಾವ್ಯಾಲಯ' ಅಷ್ಟಕ್ಕೇ ವಿರಮಿಸದೆ ತನ್ನ ಪ್ರಕಟಣೆಯ ಕಾರ್ಯವನ್ನು ನಿರಂತರ ಮುಂದುವರಿಸಿ ಸ್ವಾತಂತ್ರ್ಯೋತ್ತರದ ಹಲವಾರು ಲೇಖಕರ ಕೃತಿಗಳನ್ನು ತಂದಿದೆ; ತರುತ್ತಿದೆ. ಅರವಿಂದ ನಾಡಕರ್ಣಿ, ಭಾರತಿಕೇಶವ್, ಎಚ್.ಆರ್. ಲೀಲಾವತಿ, ಹಾ.ಮಾ. ನಾಯಕ, ಪಂಕಜ, ಸ.ಚ. ಮಹದೇವನಾಯಕ, ಎಸ್.ಆರ್. ರಾಮಸ್ವಾಮಿ, ಬಿ.ಜಿ.ಎಲ್. ಸ್ವಾಮಿ, ತ.ರಾ. ಸುಬ್ಬರಾವ್, ಟಿ.ವಿ. ವೆಂಕಟಾಚಲಶಾಸಿ, ಕೆ.ಎಸ್. ಉಮಾಪತಿ, ಶಿವಾರೆಡ್ಡಿ, ಕಮಲಾ ರಾಮಸ್ವಾಮಿ ಈ ಮುಂತಾದ ಲೇಖಕರ ಕೃತಿಗಳನ್ನು ಪ್ರಕಟಿಸುತ್ತ ತನ್ನ ಪ್ರಕಾಶನ ಕೌರ್ಯವನ್ನು ಇಂದಿಗೂ ಸಮರ್ಥವಾಗಿಯೇ 'ಕಾವ್ಯಾಲಯ' ಮುನ್ನಡೆಸಿದೆ.

ಚಿದಂಬರಂರವರು ಅಪರಿಚಿತ ಲೇಖಕರ ಬಗ್ಗೆಯೂ ಎಷ್ಟೊಂದು ಸಹೃದಯ ವಾಗಿ ವರ್ತಿಸುತ್ತಿದ್ದರು ಎಂಬುದಕ್ಕೆ ಒಂದು ನಿದರ್ಶನವನ್ನು ನೋಡಬಹುದು : ''ಕನ್ನಡ ಮನೆಮಾತಾಗಿದ್ದರೂ ತಮಿಳುನಾಡಿಗೆ ಸೇರಿಹೋದ ಊರಿನವರಾದ ತರುಣ ಸಾಹಿತಿಯೊಬ್ಬ ಬರೆದ ಕಾಗದವನ್ನು ಚಿದಂಬರಂ ಓದಿದರು. ಆ ತರುಣನಾದರೊ ಯಾವ ಪದವೀಧರನೂ ಅಲ್ಲ, ಜೀವನ ವಿಶ್ವವಿದ್ಯಾನಿಲಯದಲ್ಲಿ ನಾನಾ ಕಷ್ಟ ಕಾರ್ಪಣ್ಯ ಗಳನ್ನು ಅನುಭವಿಸಿದ್ದವನು. ಕರ್ನಾಟಕದ ಹೊರಗೆ ದುಡಿದು ಉಣ್ಣುತ್ತಿದ್ದರೂ ಕನ್ನಡದ ಹಂಬಲದಲ್ಲಿದ್ದವನು. ಆತ ಒಂದು ದಿನ ಚಿದಂಬರಂ ಅವರಿಗೆ ತಾನು ಪಟ್ಟ ಪಾಡುಗಳನ್ನೆಲ್ಲ ವಿವರಿಸಿ ಕಾಗದ ಬರೆದು ಕೊನೆಯಲ್ಲಿ 'ನಾನೊಂದು ಕಾದಂಬರಿ ಬರೆದಿದ್ದೇನೆ. ನೀವೇ ಅದನ್ನು ಪ್ರಕಟಿಸಬೇಕು' ಎಂದು ಆಗ್ರಹಿಸಿದ್ದರು. ಬೇರೆ ಯಾರಾದರೂ ಪ್ರಕಾಶಕರಾಗಿದ್ದರೆ ಉತ್ತರವನ್ನೇ ಬರೆಯುತ್ತಿರಲಿಲ್ಲ. ಚಿದಂಬರಂ ಹೀಗೆ ಪತ್ರ ಬರೆದರು. 'ನಿಮ್ಮ ಕಾಗದ ನೋಡಿ ಸಂತೋಷವಾಯಿತು. ದುಃಖವೂ ಆಯಿತು. ಹಾಗೆಯೇ ನಿಮ್ಮ ಸಾಹಸಕ್ಕೆ ಮೆಚ್ಚಿಕೆಯೂ ಆಯಿತು. ಹಸ್ತಪ್ರತಿ ಕಳಿಸಿ. ಪ್ರಕಟಣೆಗೆ ನಿಮ್ಮ ಕೃತಿ ಅರ್ಹವಾಗಿದ್ದರೆ ಪ್ರಕಟಿಸುತ್ತೇನೆ.' ಮುಂದೆ ಆ ತರುಣನ ಕಾದಂಬರಿ ಪ್ರಕಟವಾಯಿತು. ಆತನಿಗೆ ಎಂಥ ಆನಂದದಾಯಿತು ಎಂಬುದನ್ನು ಆತನ ಮಾತುಗಳಿಂದಲೇ ಕೇಳಬೇಕು. 'ಮನೆಯಲ್ಲಿ ಎಲ್ಲರಿಗೂ ಹಿಗ್ಗು, ಸಂತೋಷ. ನನ್ನ ಹಳ್ಳಿಗೆ ಹಿಂದಿರುಗಿ ಸಾಹಿತಿ ಆಗಿಬಿಟ್ಟಿದ್ದೇನೆ. ಹೀರೋ ಆಗಿದ್ದೇನೆ...' ಚಿದಂಬರಂ ಅವರ ಉದಾರ ಮನಸ್ಸಿಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?''[೧]

---

೧. 'ಕಾವ್ಯಾಲಯ' ಪ್ರಕಾಶಕರು: ಸಂ. ಹೊರೆಯಾಲ ದೊರೆಸ್ವಾಮಿ, ಪ್ರ : ಅಭಿನವ, ಬೆಂಗಳೂರು-೫೬೦೦೪೦, ಪು. ೩-೪. ಆ ಲೇಖಕರು ಹೆಸರಾಂತ ಕಥೆಗಾರರಾದ ಶೇಷನಾರಾಯಣ ಅವರು (ಲೇಖಕ)

'ಕಾವ್ಯಾಲಯ'ದ ಪ್ರಕಟಣೆಗಳಲ್ಲಿ ದಾರ್ಶನಿಕ ಬರಹಗಾರರಾದ ಡಿ.ವಿ. ಗುಂಡಪ್ಪನವರ ಗ್ರಂಥಗಳಿಗೊಂದು ಮಹತ್ವದಸ್ಥಾನ ಇದೆ. ಡಿ.ವಿ. ಗುಂಡಪ್ಪನವರು ಬೆಂಗಳೂರು ನಿವಾಸಿಯಾಗಿದ್ದುಕೊಂಡು, ಅಲ್ಲಿಂದಲೇ ತಮ್ಮ ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು ಡಿ.ವಿ.ಜಿ.ಯವರ ಪುಸ್ತಕಗಳನ್ನು ಅವರ ತಮ್ಮ ಡಿ.ವಿ. ರಾಮರಾವ್ ಎಂಬುವವರು ಪ್ರಕಟಿಸುತ್ತಿದ್ದರು (ಕರ್ನಾಟಕ ಪ್ರಕಟನಾಲಯ, ಬೆಂಗಳೂರು). ಆದರೆ ಪುಸ್ತಕಗಳ ಮುದ್ರಣದ ಗುಣಮಟ್ಟದ ಬಗ್ಗೆ ಅವರಿಗೆ ಸಮಾಧಾನ ಇರುತ್ತಿರಲಿಲ್ಲ, ಕರಡು ಪ್ರತಿ ತಿದ್ದುವುದರಲ್ಲಿ ಆಗುತ್ತಿದ್ದ ದೋಷದಿಂದ ಉಳಿಯುತ್ತಿದ್ದ ತಪ್ಪುಗಳು, ಪುಸ್ತಕದ ಮುಖಪುಟದ ವಿನ್ಯಾಸದ ಅಸಮರ್ಪಕತೆ, ಪುಸ್ತಕ ವಿನ್ಯಾಸಗಳಲ್ಲಿ ಡಿವಿಜಿ ಯವರಿಗೆ ತೃಪ್ತಿ ಇರುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ ಅವರಿಗೆ 'ಕಾವ್ಯಾಲಯ'ದ ಪ್ರಕಟಣೆಗಳನ್ನು ನೋಡುವ ಅವಕಾಶ ಒದಗಿಬಂತು. ಅಚ್ಚಿನ ತಪ್ಪಿಲ್ಲದ ಮುದ್ರಣ, ಉತ್ತಮ ವಿನ್ಯಾಸ, ಆಕರ್ಷಕವಾದ ಪುಸ್ತಕ ಹೊದಿಕೆ ಆ ಮೂಲಕವಾಗಿ ಅಂತರ್ಗತವಾಗಿ ಮಿಡಿಯುತ್ತಿದ್ದ ಪುಸ್ತಕ ಪ್ರಕಾಶಕನ ಶಿಸ್ತು ಮತ್ತು ಶ್ರದ್ಧೆ ಅವರನ್ನು ಆಕರ್ಷಿಸಿತು. ಈ ಅಂಶಗಳೇ - ಶಿಸ್ತು ಮತ್ತು ಶ್ರದ್ಧೆ ಅವರನ್ನು ಆಕರ್ಷಿಸಿತು. ಈ ಅಂಶಗಳೇ ಶಿಸ್ತು ಮತ್ತು ಶ್ರದ್ಧೆಯನ್ನು ಮೈಗೂಡಿಸಿಕೊಂಡಿದ್ದ 'ಕಾವ್ಯಾಲಯ'ದ ಹಿಂದಿನ ಶಕ್ತಿಯಾದ ಕೂಡಲಿ ಚಿದಂಬರಂ ಅವರ ನಂಟಿಗೆ ಕಾರಣವಾಯಿತು. ಇಬ್ಬರೂ ಖಚಿತವಾದಿಗಳು. ಖಂಡಿತವಾದಿಗಳು. ಶಿಸ್ತುಬದ್ಧರು. ಶ್ರದ್ಧಾವಂತರು. ಇಬ್ಬರಲ್ಲೂ ಸಮಾನವಾಗಿದ್ದ ಈ ಅಂಶಗಳೇ ಅವರಿಬ್ಬರನ್ನು ಹತ್ತಿರ ತಂದವು. ಕೊನೆಯ ವರೆಗೂ ಆ 'ಹತ್ತಿರ' ಸ್ಥಿರವಾಗಿಯೇ ಉಳಿಯಿತು. ಡಿವಿಜಿಯವರು ಚಿದಂಬರಂ ಅವರನ್ನು ಅವರ ಕಾರ್ಯವೈಖರಿಯನ್ನೂ ಬಹುವಾಗಿ ಮೆಚ್ಚಿಕೊಂಡಿದ್ದರು. ಪರಸ್ಪರ ವಿಶ್ವಾಸ ಶಾಶ್ವತವಾಗುಳಿಯಿತು.

'ಅಂತಃಪುರಗೀತೆ'ಯನ್ನು ಹಸ್ತಪ್ರತಿಯಲ್ಲಿ ಓದಿ, ಹಾಡಿಸಿ, ಅದಕ್ಕೆ ಅನುಗುಣ ವಾದ ಹೊದಿಕೆ ವಿನ್ಯಾಸ ಮಾಡಿಸಿ, ಆಕರ್ಷಕವಾಗಿ ಮುದ್ರಿಸಿದ ಚಿದಂಬರಂ ಅವರ ಗ್ರಂಥ ಪ್ರಕಟಣೆಯ ಅಭಿರುಚಿ ನಿಜಕ್ಕೂ ಅನನ್ಯವಾದುದೆಂದೇ ಹೇಳಬಹುದು. ಜೀವನ ಸೌಂದರ್ಯ ಮತ್ತು ಸಾಹಿತ್ಯ, ಸಂಸ್ಕೃತಿ, ಸಾಹಿತ್ಯ ಶಕ್ತಿ, ಮಂಕುತಿಮ್ಮನ ಕಗ್ಗ ಮರುಳ ಮುನಿಯನ ಕಗ್ಗ ಉಮರನ ಒಸಗೆ, ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ, ಜ್ಞಾಪಕ ಚಿತ್ರಶಾಲೆಗಳು ಈ ಮುಂತಾದ ಕೃತಗಳನ್ನು ಓತಪ್ರೋತವಾಗಿ ಪ್ರಕಟಿಸಿ, ಕನ್ನಡ ಸಾಹಿತ್ಯಕ್ಕೆ ತನ್ಮೂಲಕ ಭಾರತೀಯ ಸಾಹಿತ್ಯಕ್ಕೆ ಚಿರಸ್ಮರಣೀಯ ಕಾಣಿಕೆಗಳನ್ನು ನೀಡಿದುದು ಕಾವ್ಯಾಲಯದ ಸ್ಮರಣೀಯ ಕೊಡುಗೆ ಗಳಾವೆ. ಡಿವಿಜಿಯವರ ಸಮಸ್ತ ಗ್ರಂಥಗಳನ್ನು ಈಗಲೂ ಕಾವ್ಯಾಲಯ ಪ್ರಕಟಿಸುತ್ತಲೇ ಬಂದಿದೆ.

ಹಾಗೆಯೇ ಕಾವ್ಯಾಲಯದ ಗಮನಾರ್ಹವಾದ ಪ್ರಕಟಣೆಗಳಲ್ಲಿ ರಾಷ್ಟ್ರಕವಿ ಗೋವಿಂದ ಪೈ ಅವರ ಕೃತಿಗಳ ಪ್ರಕಟಣೆಯೂ ಒಂದು. ಬೊಂಬಾಯಿಂದ ಸಾಹಿತ್ಯಾಸಕ್ತರೊಬ್ಬರು ಬರೆದ ಕಾಗದದ ಆಧಾರದ ಮೇಲೆ (ಎಂ.ಕೆ. ಗಾಂಧಿ) ಕೇರಳದ ಮಂಜೇಶ್ವರಕ್ಕೆ ಹೋಗಿ, ಅವರೆಲ್ಲ ಅಪ್ರಕಟಿತ ಹಸ್ತಪ್ರತಿಗಳನ್ನೂ ಸಂಗ್ರಹಿಸಿ ಅವನ್ನು ಅಚ್ಚಿಸುವ ಮಹತ್ತಿನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 'ಇದು ತಮ್ಮ ಬದುಕಿನ ಕೊನೆಯ ಕೆಲಸ ಎಂದೂ ಅವರು ಹತ್ತು ಹದಿನೈದು ದಿನಗಳ ಹಿಂದೆ (ಕಡೆಯ ದಿನಗಳು) ನನ್ನೊಡನೆ ಹೇಳಿದ್ದರು. ಆ ಕೆಲಸ ತುಂಬ ಮಹತ್ವದ್ದೆಂದೂ ಕಾವ್ಯಾಲಯದ ಪ್ರಕಟಣೆಗಳಲ್ಲಿ ಕಿರೀಟಪ್ರಾಯವಾದದ್ದೆಂದೂ ಅವರು ಭಾವಿಸಿದ್ದರು. ಆ ಪುಸ್ತಕದ ಮೊದಲ ಒಂದು ಫಾರಮ್ಮಿನ ಕರಡನ್ನು ನೋಡಿದ್ದಷ್ಟೇ ಅವರ ಪಾಲಿನ ಅದೃಷ್ಟವಾಯಿತು. ಈಗ ಆ ಬೃಹದ್ಗ್ರಂಥ ಗೋವಿಂದ ಪೈ ಅವರದಷ್ಟೇ ಅಲ್ಲ; ಚಿದಂಬರಂ ಅವರದೂ ಆಗಿದೆ. (ಸಂಪರ್ಕ: ಲೇ. ಹಾ.ಮಾ. ನಾಯಕ, ಮಿತ್ರ ಪ್ರಕಾಶನ, ಮೈಸೂರು ೧೯೮೨ ಪು. ೨೨೮-೨೨೯).

'ಕಾವ್ಯಾಲಯ'ದ ಪ್ರಕಟಣೆಗಳು ವಿಷಯ ವೈವಿಧ್ಯದಿಂದ ಕೂಡಿವೆ. ವಿಷಯ ಸಂಪತ್ತಿನಿಂದ ತುಂಬಿವೆ. ಪ್ರಕಾಶನ ಸಂಸ್ಥೆ ತನ್ನ ಪ್ರಾರಂಭಿಕ ವರ್ಷಗಳಲ್ಲಿ ಲೇಖಕರ ಸೃಜನಾತ್ಮಕ ಕೃತಿಗಳಿಗೆ ಪ್ರಕಟಣೆಯಲ್ಲಿ ಆದ್ಯತೆ ನೀಡಿದಷ್ಟೇ ಸೃಜನೇತರ ಕೃತಿಗಳಿಗೂ ಆದ್ಯತೆಯನ್ನು ನೀಡಿತು. ವಿಮರ್ಶೆ, ಸಂಶೋಧನೆ, ವಿಚಾರ, ವಿಜ್ಞಾನ, ಶಾಸ, ಗ್ರಂಥ ಸಂಪಾದನೆ ಇಂಥ ಅಷ್ಟಾಗಿ ಜನಪ್ರಿಯವಲ್ಲದ ಕೃತಿಗಳನ್ನು ಪ್ರಕಟಿಸಿ, ಸಮಾಜದಲ್ಲಿ ಹೊಸ ಅಭಿರುಚಿಯನ್ನೂ, ಹೊಸತಿಳಿವನ್ನೂ ಪ್ರಸರಿಸಲು ಪ್ರಯತ್ನಿಸಿದ್ದು ಸಾಮಾನ್ಯ ಸಂಗತಿಯೇನಲ್ಲ. ಅಂಥ ಕೃತಿಗಳು ಮಾರಾಟವಾಗುವುದಕ್ಕೆ ಅನೇಕ ವರ್ಷಗಳೇ ಹಿಡಿಯುತ್ತಿದ್ದವು. ಅವನ್ನು ಮೆಚ್ಚಿ ಒಲ್ಲೈಸುವವರ ಸಂಖ್ಯೆಯೂ ಕಮ್ಮಿ ಇತ್ತು. ಅಂಥ ಸಂದರ್ಭದಲ್ಲೂ ಚಿದಂಬರಂರವರು ತೆಗೆದುಕೊಂಡ ಪ್ರಕಟಣೆಯ ನಿರ್ಧಾರಗಳು - ಅವರ ಧೈರ್ಯವನ್ನೂ, ಅಭಿರುಚಿಯನ್ನೂ ಸ್ಪಷ್ಟವಾಗಿ ಸಾರಿಹೇಳುತ್ತವೆ ಅಂತನ್ನ ಬಹುದು.

೧೯೪೦, ೧೯೫೦, ೧೯೬೦ರ ಕಾಲದಲ್ಲಿ ನವೋದಯ-ಪ್ರಗತಿಶೀಲ ಪಂಥಗಳು ಹೆಚ್ಚು ಪ್ರಚಾರದಲ್ಲಿದ್ದವು. ಜನಪ್ರಿಯ ಸಾಹಿತ್ಯ ಪ್ರಕಾರವಾದ ಕಾದಂಬರಿ ಅಗ್ರಗಣ್ಯ ಸ್ಥಾನದಲ್ಲಿತ್ತು. ಅದರಲ್ಲೂ ಪತ್ತೇದಾರಿ ಕಾದಂಬರಿಗಳು, ಪ್ರೇಮ ರೋಮಾಂಚನದ ಕಾದಂಬರಿಗಳು - ಪುಸ್ತಕ ಮಾರುಕಟ್ಟೆಯಲ್ಲಿ ಹೇರಳವಾಗಿ ವಿಜೃಂಭಿಸು ತ್ತಿದ್ದವು. ಅನಕೃ ತರಾಸು ಈ ಮುಂತಾದ ಲೇಖಕರ ಕೃತಿಗಳು (ಕಾದಂಬರಿಗಳು) ಸಾಲುಗಟ್ಟಿ ಬರುತ್ತಿದ್ದವು. ಅವುಗಳ ಸಾಹಿತ್ಯಿಕ ಗುಣಮಟ್ಟ ಹೇಗಾದರೂ ಇರಲಿ, ಜನರನ್ನು ತಮ್ಮೆಡೆಗೆ ಸೆಳೆಯುತ್ತಿದ್ದುದಂತು ವಾಸ್ತವವೇ ಆಗಿತ್ತು. ಆದರೂ ಚಿದಂಬರಂರವರು ತಮ್ಮ ಸಾಹಿತ್ಯಿಕ ಸದಭಿರುಚಿಯೊಂದಿಗೆ ರಾಜಿ ಮಾಡಿಕೊಂಡು ಜನಪ್ರಿಯ ಪ್ರಕಾರವಾದ ಬಗೆಬಗೆಯ ಕಾದಂಬರಿಗಳನ್ನು ಅಚ್ಚು ಮಾಡಲಿಲ್ಲ, ಮಾರಾಟ ಮಾಡಲಿಲ್ಲ. ಸದಭಿರುಚಿಯ

ಪ್ರತೀಕವಾಗಿಯೇ ಕಾವ್ಯಾಲಯ ವನ್ನು ಬೆಳೆಸಿದರು; ಉಳಿಸಿದರು. ಆದುದರಿಂದಲೇ ಇರಬೇಕು ಅನಕೃ ಅವರ ಒಂದು ಕೃತಿಯೂ ಈ ಪ್ರಕಾಶನ ಸಂಸ್ಥೆಯಿಂದ ಪ್ರಕಟಗೊಳ್ಳಲಿಲ್ಲ. ಮತ್ತೊಬ್ಬ ಜನಪ್ರಿಯ ಕಾಂಬರಿಕಾರ ರಾಗಿದ್ದ ತರಾಸು ಅವರ ಕೃತಿಯೂ ಚಿದಂಬರಂ ಅವರಿದ್ದ ಕಾಲದಲ್ಲಿ ಪ್ರಕಟ ಗೊಳ್ಳಲಿಲ್ಲ. ಅವರ ಬೃಹತ್ ಕಾದಂಬರಿ 'ದುರ್ಗಾಸ್ತಮಾನ' ಕಾವ್ಯಾಲಯದಲ್ಲಿ ಪ್ರಕಟವಾದುದು ಚಿದಂಬರಂ ಅವರ ನಿಧನಾನಂತರ ಎಂಬುದನ್ನು ಗಮನಿಸಬೇಕು.

## ಅನುವಾದ

ಕನ್ನಡ ಭಾಷೆಗೆ ಇತರ ಭಾಷೆಗಳ ಕೃತಿಗಳನ್ನು ಅನುವಾದಿಸಿ ಪ್ರಕಟಿಸುವುದರ ಮೂಲಕ ಅವುಗಳ ಸಾರಸತ್ವವನ್ನು ತರುವುದು ಚಿದಂಬರಂ ಅವರ ಇನ್ನೊಂದು ಬಯಕೆಯೂ ಆಗಿತ್ತು. ಸ್ವತಃ ಲೇಖಕರಾದ ಅವರೇ ಕೆಲವಾರು ಕೃತಿಗಳನ್ನು ಅನುವಾದಿಸಿದರಲ್ಲದೆ ಇನ್ನಿತರ ಅನುವಾದಕರಿಂದಲೂ ಕನ್ನಡಕ್ಕೆ ತರ್ಜುಮೆ ಮಾಡಿಸಿ ಕಾವ್ಯಾಲಯದ ಮೂಲಕ ಪ್ರಕಟಿಸಿದರು. ಅಹೋಬಲಶಂಕರ ಅವರ ಮೂಲಕ ರವೀಂದ್ರನಾಥಠಾಕೂರರ ಕೆಲವಾರು ಕೃತಿಗಳನ್ನು ಭಾಷಾಂತರಿಸಿ ಪ್ರಕಟಿಸಿದರು. ನೌಕಾಘಾತ, ಗೋರಾ, ವಿನೋದಿನಿ, ಬಲಿದಾನ ಈ ಮುಂತಾದ ಕೃತಿಗಳು ಕನ್ನಡಕ್ಕೆ ಬಂದವು. ಅವುಗಳನ್ನು ಪಾಕೆಟ್ ಬುಕ್ ಮಾಲೆಯಲ್ಲಿ ಪ್ರಕಟಿಸಿ, ಜನತೆಯ ಮುಂದಿರಿ ಸಿದರು. ಪ್ರತಿಯೊಂದು ಪುಸ್ತಕದ ಬೆಲೆ ರೂ. ೧.೫೦. ಆಗ ಕಾದಂಬರಿಗಳನ್ನು ಪಾಕೆಟ್ ಬುಕ್ ಮಾದರಿಯಲ್ಲಿ ಪ್ರಕಟಿಸುವ ವಾತಾವರಣವಿತ್ತು. (೧೯೫೦ ದಶಕ) ಇವುಗಳಲ್ಲದೆ ಹವಳದ ದ್ವೀಪ (Treasure Island ಅನು : ಎ.ಎನ್.ಮೂರ್ತಿರಾವ್), ಸ್ಮರಭಸ್ಮ, ಶಶಿರೇಖಾ, ನೀಲಿನೇತ್ರ, ಮದುವಣಗಿತ್ತಿ (ಅನು: ಎಚ್.ವಿ. ಸಾವಿತ್ರಮ್ಮ) ಈ ಕೆಲವಾರು ಕೃತಿಗಳು ಕನ್ನಡಕ್ಕೆ ಬಂದವು. ಬಂಕಿಮಚಂದ್ರ, ಅವರ ಆನಂದಮಠ, ವಿಷವೃಕ್ಷ, ರಜನೀ, ಶ್ರೀಕೃಷ್ಣ ಚರಿತ್ರೆ, ಇಂದಿರಾ ಯುಗಳಾಂಗುರೀಯ ರಾಧಾರಾಣಿ, ಬಿರೇನ್‌ದಾಸ್‌ರವರ ಇನ್ನೂ ದೂರದ ದಾರಿ, ಮಾಯಾ ಅಥವಾ ಬಹುರಾಣಿ, ಭವಾನಿ ಭಟ್ಟಾಚಾರ್ಯ ಅವರ ಹಸಿವೋ ಹಸಿವು, ಹುಲಿಯ ಬೆನ್ನೇರಿದಾಗ ಇತ್ಯಾದಿ ಕೃತಿಗಳು, ರಮೇಶಚಂದ್ರ ದತ್ತರ ಸಂಸಾರ, ಸಮಾಜ ಇತ್ಯಾದಿ ಕೃತಿಗಳು, ರಮೇಶಚಂದ್ರದತ್ತರ ಸಂಸಾರ, ಸಮಾಜ ಇತ್ಯಾದಿ ಕೃತಿಗಳು, ಶರಶ್ಚಂದ್ರರ ಶುಭದಾ ಹಳ್ಳಿಯ ಸಮಾಜ, ಮಾಣಿಕ ಬ್ಯಾನರ್ಜಿ ಅವರ ಬೊಂಬೆಯ ಕುಣಿತದ ಕಥಾಪ್ರಸಂಗ, ವಿಮಲ ಮಿತ್ರರ ಮಿಥುನ ಲಗ್ನ, ಸಾಹೇಬ್ - ಬೇಬಿ ಔರ್ ಗುಲಾಮ್ ಇತ್ಯಾದಿ ಕೃತಿಗಳನ್ನು ಕಾವ್ಯಾಲಯದಲ್ಲಿ ಪ್ರಕಟಿಸಿದರು. ಕಾವ್ಯಾಲಯ ಪ್ರಕಟಿಸಿದ ಅನುವಾದಗಳಲ್ಲಿ ಮಹಾತ್ಮ ಗಾಂಧೀಜಿಯವರ ಕೃತಿಗಳಿಗೊಂದು ಗಣ್ಯಸ್ಥಾನವಿದೆ. ಗೀತೆಯ ಸಂದೇಶ, ಗೋಖಲೆ - ನನ್ನ ರಾಜಕೀಯ ಗುರು, ಸತ್ಯ ಮತ್ತು ದೇವರು, ನನ್ನ ಕನಸಿನ ಭಾರತ ಇವು ಅನುವಾದಿತಗೊಂಡ ಕೃತಿಗಳು. ಗಾಂಧೀಪ್ರಣೀತ

ವ್ಯಕ್ತಿತ್ವದ 'ಚಿದಂಬರಂ' ಅವರು ಗಾಂಧೀಜಿ ಅವರ ಕೃತಿಗಳನ್ನು ಕನ್ನಡದಲ್ಲಿ ಪ್ರಕಸಿದುದು ಸಹಜವಾಗೇ ಇದೆ. ಈ ಪ್ರಕಾಶನ ಸಂಸ್ಥೆಯಿಂದ ಪ್ರಕಟಗೊಂಡ ಎಲ್ಲ ಅನುವಾದಗಳು ಸರಳ, ಸಹಜ ಓದಿನಿಂದ ಸಹೃದಯರನ್ನು ಆಕರ್ಷಿಸುತ್ತವೆ. ಕನ್ನಡ ಓದುಗರ ಸಾಹಿತ್ಯ ವಿಸ್ತರಣೆಗೆ ಈ ಕೃತಿಗಳು ನೆರವಾದವು ಎಂದು ಬೇರೆ ಹೇಳಬೇಕಾಗಿಲ್ಲ, ಅಲ್ಲದೆ ಸುಮಾರು ೧೫೦ಕ್ಕೂ ಮಿಕ್ಕ ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿ ಆ ಕ್ಷೇತ್ರಕ್ಕೂ ತಮ್ಮ ಕಾಣಿಕೆ ಸಲ್ಲಿಸಿದ್ದಾರೆ.

## ಇಂಗ್ಲಿಷ್ ಕೃತಿಗಳು

ಕಾವ್ಯಾಲಯದ ಪ್ರಧಾನ ಕ್ಷೇತ್ರ ಕನ್ನಡವೇ ಆದರೂ ಭಾರತೀಯ ಸಂಸ್ಕೃತಿಗೆ ಪೂರಕವಾದ ಕನ್ನಡ ಸಾಹಿತ್ಯವನ್ನು ಅನ್ಯಭಾಷೀಯರಿಗೆ ಸಂಚಯಿಸುವ ಸದುದ್ದೇಶದಿಂದ ಕೆಲವಾರು ಇಂಗ್ಲಿಷ್ ಕೃತಿಗಳನ್ನೂ ಕಾವ್ಯಾಲಯ ಹೊರತಂದಿದೆ.

ಪ್ರೊ॥ ಎಂ. ಹಿರಿಯಣ್ಣನವರ Art Experience, Sanskrit Studies, Popular Eassays in Indian Philosophy, Outline of Indian philosophy ಇತ್ಯಾದಿ ಕೃತಿಗಳು, ಆರ್.ಪಿ. ಮಸಾನಿ ಅವರ Dadabhai Naorji ಎಸ್.ಕೆ. ರಾಮಚಂದ್ರರಾವ್ ಅವರ Samkara - Psycological Study, The idea of Sarvodaya, ಇತ್ಯಾದಿ ಕೃತಿಗಳು, ಸಿ.ವಿ. ಶ್ರೀನಿವಾಸಮೂರ್ತಿ ಅವರ Elements of Social Science, Elements of Logic and Scientific Method ಕೃತಿಗಳು, ಸಯ್ಯದ್ ಹಾಫಿಜುದ್ದೀನ್ ಅವರ So of Became a Teacher ಸಯ್ಯದ್ ಅಮನುದ್ದೀನ್ ಅವರ The Forbidden Fruit, The Children of Hiroshima ಇತ್ಯಾದಿ ಕೃತಿಗಳು, ಡಾ॥ ವಿ. ರಾಘವನ್‌ರವರ Om Kalidasa, ಜೆ.ಪಿ. ಸಕ್ಸೇನ ಅವರ Flashes of wisdom, ಕೆ.ಜಿ. ಮಲ್ಯ ಅವರ Ramaswamedham, ಎಸ್, ನಾರಾಯಣ್ ಅವರ Dr. DVG (Poem) Chennakka (Poem) ಇತ್ಯಾದಿ ಕೃತಿಗಳನ್ನು ಪ್ರಕಟಿಸಿದೆ. ಅವು ತಮ್ಮ ಗುಣಮಟ್ಟದಿಂದ ಸಾರಸ್ವತ ಕ್ಷೇತ್ರದಲ್ಲಿ ಸ್ಥಿರವಾಗಿ ನಿಂತಿವೆ.

## ಲೇಖಕರಾಗಿ ಚಿದಂಬರಂ

ಈ ಹಿಂದೆಯೇ ತಿಳಿಸಿದಂತೆ ಕೂಡಲಿ ಚಿದಂಬರಂರವರು ಕನ್ನಡ ಸಾಹಿತ್ಯವನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಸಂಸ್ಕೃತಿವೇತ್ತ ವ್ಯಕ್ತಿ. ಕನ್ನಡ ಗ್ರಂಥಗಳ ಪ್ರಕಟಣೆಯಲ್ಲಿ ಅವರು ತೋರಿಸಿದ ಶ್ರದ್ಧೆ ಮತ್ತು ಶಿಸ್ತು ಅವರ ಬರಹಗಳಲ್ಲೂ ಕಂಡುಬರುತ್ತವೆ. ಕನ್ನಡ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದ ಅವರು ಕೆಲವಾರು ಮಕ್ಕಳ ಪುಸ್ತಕಗಳನ್ನು ಬರೆದಿರುವಂತೆಯೇ, ಉತ್ತಮ ಅನುವಾದ ಕೃತಿಗಳನ್ನೂ ಪ್ರಕಟಿಸಿದ್ದಾರೆ.

ವಾಸ್ತವವಾಗಿ ಬರೆಯುವ ಕಲೆ ಅವರಿಗೆ ಶಿವಮೊಗ್ಗದಲ್ಲಿದ್ದಾಗಲೆ ಸಿದ್ಧಿಸಿತ್ತು. 'ವಿಚಾರ ವಾಹಿನಿ' ಸಂಚಿಕೆಗಳಲ್ಲಿ ಕಂಡುಬರುವ ಕಿರಿಪ್ರಮಾಣದ ಲೇಖನಗಳು ಅವರ ಕನ್ನಡ ಭಾಷಾ ಪ್ರೌಢಿಮೆಯನ್ನು ಸ್ಪಷ್ಟವಾಗಿ ಹೇಳುತ್ತವೆ. ಬರಹಗಾರರಾಗಿಯೂ ಅವರು ಬದುಕನ್ನು ರೂಢಿಸಿಕೊಳ್ಳಬಹುದಾದ ಶಕ್ತಿ ಅವರಿಗಿದ್ದುದು ಅಲ್ಲಿ ನಮಗೆ ಗೋಚರವಾಗುತ್ತದೆ. ಆದರೂ ಅವರು ಕನ್ನಡ ಪುಸ್ತಕಗಳ ಪ್ರಕಟಣೆಗೆ ತಮ್ಮ ಮನಸ್ಸನ್ನು ವಾಲಿಸಿದುದು ಅಂದಿನ ಕನ್ನಡ ಲೇಖಕರ ಸೌಭಾಗ್ಯವೇ ಆಗಿತ್ತೆಂದು ಹೇಳಬಹುದು.

ಚಿದಂಬರಂ ಅವರ ಬರವಣಿಗೆಯಲ್ಲಿ ಎರಡು ಪ್ರಕಾರಗಳನ್ನು ನಾವು ಗುರುತಿಸಬಹುದು. ೧ ಮಕ್ಕಳ ಸಾಹಿತ್ಯ, ೨ ಅನುವಾದ ಸಾಹಿತ್ಯ, ರಾಮಾಯಣ, ಮಹಾಭಾರತ ಕಾವ್ಯಗಳಿಂದ ಕೆಲವಾರು ಪ್ರಸಂಗಗಳನ್ನು ತೆಗೆದುಕೊಂಡು ಮಕ್ಕಳ ಕಥೆಗಳನ್ನು ಬರೆದಂತೆಯೇ ಜನಪ್ರಿಯ ಈ ಸೋಪನ ಕಥೆಗಳು, ಗ್ರಿಮ್ ಸಹೋದರರ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದರು. ಚಿಕ್ಕ ಚಿಕ್ಕ ವಾಕ್ಯರಚನೆ, ಸರಳ ಭಾಷೆ ಇವು ಅವರು ಅನುವಾದಿಸಿದ ಕಥೆಗಳ ಪ್ರಧಾನ ಗುಣಗಳಾಗಿವೆ. 'ಮನುಷ್ಯನ ಆಯಸ್ಸು' ಎಂಬ ಅನುವಾದಿತ ಕಥೆ ಹೇಗೆ ಮಾನವ ಸಂಸ್ಕೃತಿಯನ್ನು ಪರೋಕ್ಷವಾಗಿ ಬಿಂಬಿಸುತ್ತ, ಹೇಗೆ ನಮ್ಮ ಬದುಕಿನ ಒಂದು ಭಾಗವೇ ಆಗಿಬಿಡುತ್ತದೆ ಎಂಬುದನ್ನು ಓದಿಯೇ ತಿಳಿಯುವುದು ಮೇಲು. ಗ್ರಿಮ್ ಸಹೋದರರ ಕಥೆಯ ಅನುವಾದ ಹೀಗಿದೆ :

"ಮನುಷ್ಯನ ಆಯಸ್ಸು"

ಬಹುಕಾಲದ ಹಿಂದೆ ದೇವರು ಜಗತ್ತನ್ನು ಸೃಷ್ಟಿಸಿದನಂತೆ. ಯಾವ ಯಾವ ಪ್ರಾಣಿ ಎಷ್ಟೆಷ್ಟು ವರ್ಷಕಾಲ ಬಾಳಬೇಕೆಂಬುದನ್ನು ಗೊತ್ತುಮಾಡಿದನಂತೆ. ಆಗ ಕತ್ತೆ ದೇವರ ಬಳಿಗೆ ಬಂದು –

'ಒಡೆಯ ನನಗೆ ಎಷ್ಟು ಆಯಸ್ಸು ಗೊತ್ತು ಮಾಡಿದ್ದೀಯೆ?' ಎಂದು ಕೇಳಿತು.

ದೇವರು – 'ಮುವ್ವತ್ತು ವರ್ಷಕಾಲ ಆಗಬಹುದೇ?' ಎಂದನು.

ಕತ್ತೆ – 'ಒಳ್ಳೇದು ಒಡೆಯ. ಆದರೆ ಮುವ್ವತ್ತು ವರ್ಷಕಾಲ ನನಗೆ ಜಾಸ್ತಿಯಲ್ಲವೆ? ನನ್ನದು ಕಷ್ಟದ ಬಾಳು. ಬೆಳಗಿನಿಂದ ಬೈಗಿನವರೆಗೆ, ಕಾಳುಕಡ್ಡಿ, ಬಟ್ಟೆಬರೆ, ಕಲ್ಲುಮಣ್ಣು ಹೊರಲಾರದೆ ಹೊರಬೇಕು, ಒಂದೇಸಮನೆ ದುಡಿಯಬೇಕು. ಇಷ್ಟೆಲ್ಲ ಪರರ ಹೊಟ್ಟೆಗಾಗಿ. ನನಗೆ ಬದಲಾಗಿ ಸಿಕ್ಕುವುದು ಒದೆತ, ಬೈಗುಳ! ನನ್ನಲ್ಲಿ ಕನಿಕರ ಇಡು ಒಡೆಯ! ಹೇಗಾದರೂ ಮಾಡಿ ನನ್ನ ಆಯಸ್ಸನ್ನು ಕಡಿಮೆ ಮಾಡು, ಸ್ವಾಮಿ' – ಎಂದು ಬೇಡಿಕೊಂಡಿತು.

ಕತ್ತೆಯ ವಿಷಯದಲ್ಲಿ ದೇವರಿಗೆ ಕರುಣೆಮೂಡಿತು. ಆದರ ಆಯುಸ್ಸಿನಲ್ಲಿ ಹದಿನೆಂಟು

ವರ್ಷಗಳನ್ನು ಕಡಿಮೆ ಮಾಡಿದನು. ಕತ್ತೆ ಕೃತಜ್ಞತೆಯಿಂದ ಹಿಂದಿರುಗಿತು.

ನಾಯಿ ಬಂದು ನಿಂತಿತು, ದೇವರ ಇದಿರಿನಲ್ಲಿ,

'ಎಷ್ಟು ವರ್ಷ ಬದುಕಬೇಕೆಂದು ಆಸೆ ನಿನಗೆ? ಕತ್ತೆ ಮುವ್ವತ್ತು ವರ್ಷವೇ ಜಾಸ್ತಿ ಎಂದಿತು. ನಿನಗೆ ಮುವ್ವತ್ತು ಇರಲಿ?' ಎಂದು ಸೃಷ್ಟಿಧಾತನು ಕೇಳಿದನು. 'ಒಡೆಯ, ನನ್ನ ವಿಷಯದಲ್ಲಿ ಇಷ್ಟು ಕಠಿಣವಾದರೆ ಹೇಗೆ? ಮುವ್ವತ್ತು ವರ್ಷ ಬದುಕುವುದಾದರೆ ನನ್ನ ಗತಿಯೇನಾದೀತು? ಆಗ ಓಡಲು ಕಾಲಿನಲ್ಲಿ ಸತ್ವ ಉಳಿದಿರುವುದಿಲ್ಲ; ಕಚ್ಚಲು ಹಲ್ಲು ಉದುರಿಹೋಗಿರುತ್ತೆ; ಬಗುಳಲು ದನಿ ಉಡುಗಿರುತ್ತೆ; ಸುಮ್ಮನೆ ಗುರುಗುಟ್ಟುತ್ತ, ಸರಿಯಾದ ಆಹಾರವಿಲ್ಲದೆ ಒಂದು ಮೂಲೆಯಲ್ಲಿ ಬಿದ್ದಿರಬೇಕಾಗುತ್ತದೆ. ಸ್ವಾಮಿ ನೀನು ದಯೆ ತೋರದಿದ್ದರೆ ನನ್ನ ಪಾಡು ಏನಾಗಬೇಕು?' – ಎಂದು ನಾಯಿ ಮೊರೆಯಿಟ್ಟಿತು.

ನಾಯಿಯಲ್ಲಿ ಕನಿಕರ ಹುಟ್ಟಿ ದೇವರು ಅದಕ್ಕೆ ಹನ್ನೆರಡು ವರ್ಷ ಮಾತ್ರ ಆಯುಸ್ಸು ಹಾಕಿದನು.

ಆಗ ಕೋತಿ ಮುಂದೆ ಬಂದಿತು.

'ಕತ್ತೆ ನಾಯಿಗಳಂತೆ ನೀನು ಕಷ್ಟ ಪಟ್ಟು ದುಡಿಯಬೇಕಾಗಿಲ್ಲ, ನಿನ್ನ ಬದುಕೆಲ್ಲ ತಮಾಷೆಯಲ್ಲಿ ಕಳೆಯುತ್ತೆ. ಮುವ್ವತ್ತು ವರ್ಷ ಬದುಕಲು ನಿನಗೆ ಒಪ್ಪಿಗೆ ತಾನೆ?' ಎಂದು ದೇವರು ನಗುತ್ತ ಕೇಳಿದನು.

'ಸ್ವಾಮಿಯೆ, ಮೇಲು ನೋಟಕ್ಕೆ ನೀನು ಹೇಳುವುದೆಲ್ಲ ಸರಿ. ಆದರೆ, ಅದು ನಿಜವೇ? ನಿನಗೆ ತಿಳಿಯದ್ದು ಉಂಟೆ? ಹೊಟ್ಟೆಪಾಡಿಗಾಗಿ ನಾನು ಎಲ್ಲ ಕಾಲವೂ ವಿನೋದ ಮಾಡಬೇಕು. ಜನ ನಗಲೆಂದು ಮೋರೆ ಸೊಟ್ಟಮಾಡಿ, ಅಣಕಿಸಬೇಕು. ಅಂಗಚೇಷ್ಟೆ ಮಾಡಬೇಕು. ಹೊಟ್ಟೆಯಲ್ಲಿ ಸಂಕಟವೆನಿದ್ದರೂ ಹೊರಗೆ ನಗಬೇಕು! ಇಷ್ಟೆಲ್ಲ ಮಾಡಿದ್ದರೂ ನನ್ನ ಕಡೆ ಜನ ಎಸೆಯುವುದು ಕೊಳೆತ ಹಣ್ಣೋ, ಹುಳಿಯಕಾಯೋ! ವಿನೋದದ ಹಿಂದೆ ಇರುವ ದುಃಖವನ್ನು ನೀನಲ್ಲದೆ ಯಾರು ಬಲ್ಲರು? ಮುವ್ವತ್ತು ವರ್ಷ ಕಾಲ ಈ ಬಾಳನ್ನು ಹೇಗೆ ಸಹಿಸಿಕೊಂಡಿರಲಿ? ದೇವ, ನನ್ನಲ್ಲಿ ಕೃಪೆ ಮಾಡಬೇಕು, ಸ್ವಾಮಿ.'

– ಎಂದು ಕೋತಿ ಗೋಗರೆಯಿತು.

ಕೋತಿಯ ಕಷ್ಟ ದೇವರಿಗೆ ಅರ್ಥವಾಯಿತು. ಅವನು ಅದರ ಆಯುಸ್ಸನ್ನು ಹತ್ತು ವರ್ಷಗಳಿಗೆ ನಿಲ್ಲಿಸಿದರು.

ಪ್ರಾಣಿಗಳ ಸರದಿಯೆಲ್ಲ ಮುಗಿದ ಮೇಲೆ ಮನುಷ್ಯ ಬಂದನು ಆತನು ಆರೋಗ್ಯ

ದೃಢಕಾಯನಾಗಿ, ಸಂತೋಷದಿಂದ ಉಕ್ಕುತ್ತ, ಧೈರ್ಯದಿಂದ ನಡೆದು ಬಂದು ದೇವರನ್ನು ಕುರಿತು 'ಮನುಜಕುಲಕ್ಕೆ ಎಷ್ಟು ಆಯಸ್ಸು ಅರ್ಪಣೆ ಮಾಡಬೇಕು.' ಎಂದನು.

'ಮುವ್ವತ್ತು ವರ್ಷ ಸಾಕೆ?' ಎಂದು ದೇವರು ಕೇಳಿದನು.

'ಎಷ್ಟು ಅಲ್ಪ ಕಾಲ!' ಎಂದನು ಮನುಷ್ಯ ನಿರಾಶೆಯಿಂದ. 'ನಾನು ಸಂಸಾರ-ವಂದಿಗನಾಗಿ, ದುಡಿದು, ಮನಕಟ್ಟಿ, ಹೊಲಗದ್ದೆ ಸಂಪಾದಿಸಿ, ನನ್ನ ಶ್ರಮದ ಫಲ ಕೈಗೆ ಬಂದು-ನಾನು ಅದನ್ನು ಅನುಭವಿಸಬೇಕೆನ್ನುವಾಗ - ನನಗೆ ಸಾವು ಗತಿಯೇ! ಇದೇನು ಅನ್ಯಾಯ, ದೇವರೆ! ಕರುಣೇಸು ಸ್ವಾಮಿ, ಕರುಣಿಸು. ಮನುಜನ ಬಾಳು ದೀರ್ಘವಾಗಲಿ ಎಂದು ಹರಸುದೇವ.'

- ಎಂದು ಕೇಳಿಕೊಂಡೆನು.

-'ಹಾಗೋ? ಕತ್ತೆಯ ಹದಿನೆಂಟು ವರ್ಷಗಳನ್ನು ನಿನಗೆ ಸೇರಿಸಿಕೊಡುತ್ತೇನೆ. ತೃಪ್ತಿಯೇ?'- ಎಂದು ದೇವರು ಕೇಳಿದನು.

'ಸಾಲದು ಸ್ವಾಮಿ!'

'ನಾಯಿಯ ಹನ್ನೆರಡನ್ನೂ ತೆಗೆದುಕೊ!'

'ಆದರೂ ಕಡಿಮೆಯೇ!'

'ಒಳ್ಳೇದು ಕೋತಿಯ ಹತ್ತನ್ನೂ ಸೇರಿಸಿಕೊ. ಇನ್ನು ಹೆಚ್ಚು ಆಯುಸ್ಸು ಕೇಳಬೇಡ, ಹೋಗು'.

- ಎಂದನು ದೇವರು.

ಅಲ್ಲಿಗೂ ತೃಪ್ತಿಯಿಲ್ಲದೆ ಮನುಷ್ಯ ಹಿಂದಿರುಗಿದನು. ಹೀಗೆ ಮನುಷ್ಯನ ಆಯುಸ್ಸು ಎಪ್ಪತ್ತು ವರ್ಷಗಳೆಂದಾಯಿತು. ಅದರಲ್ಲಿ ಮೊದಲಿನ ಮುವ್ವತ್ತು ವರ್ಷಗಳು ಎಳೆತನ, ಬಾಲ್ಯ, ಪ್ರಾಯ; ಮನುಷ್ಯನ ಬದುಕಿನ ಉತ್ತಮ ಭಾಗ. ಆ ಕಾಲ ಬಹುಬೇಗ ಜಾರುತ್ತದೆ. ಈ ಅವಧಿಯಲ್ಲಿ ಅವನು ದೃಢಕಾಯನಾಗಿರುತ್ತಾನೆ. ಆನಂದವಾಗಿರುತ್ತಾನೆ. ಸದಾ ಸಂತೋಷದಿಂದ ಕೆಲಸ ಮಾಡುತ್ತಾ ಕಾಲ ಕಳೆಯುತ್ತಾನೆ. ಬಾಳನ್ನು ಚೆನ್ನಾಗಿ ಸವಿಯುತ್ತಾನೆ.

ಆಮೇಲೆ ಕತ್ತೆಯ ಹದಿನೆಂಟು ವರುಷಗಳ ಅವಧಿ ಬರುತ್ತದೆ. ಆಗ ಮನುಷ್ಯನಿಗೆ ಒಂದರ ಮೇಲೊಂದು ಹೊರೆ; ಪರರ ಹೊಟ್ಟೆಪಾಡಿಗಾಗಿ ದುಡಿಯುವುದು! ಸಲ್ಲದ ನಿಷ್ಠುರ ಹೊರುವುದು. ಉಪಕಾರ ಮಾಡಿ ಅಪಕಾರ ಹೊಂದುವುದ! ಹೀಗೆ ಕಷ್ಟಜೀವನ.

ಆನಂತರ, ವಾಯಿಯ ಹನ್ನೆರಡು ವರ್ಷ. ಕಡಿಯಲು ಅಧಿಕಾರವಿಲ್ಲದೆ, ಕೂಗಲು

ಶಕ್ತಿಯಿಲ್ಲದೆ, ಅಜ್ಞಾತ ಮೂಲೆಯಲ್ಲಿ ಬಿದ್ದು ಗುರ್ರೆನ್ನುವುದು.

ಈ ಕಾಲ ಕಳೆದ ಮೇಲೆ, ಕಡೆಯದಾಗಿ ಕೋತಿಯ ಹತ್ತು ವರ್ಷ ಬರುತ್ತದೆ. ಆಗ ಮನುಷ್ಯನ ತಲೆ ಹಗುರವಾಗುತ್ತದೆ. ಬುದ್ಧಿ ಮಂದವಾಗುತ್ತದೆ. ಅರುಳು ಮರುಳು ಎನ್ನಿಸಿಕೊಂಡು, ಸ್ಥಿಮಿತವಿಲ್ಲದೆ, ಮನಸ್ಸಿಗೆ ಬಂದಂತೆ ನಡೆಯುತ್ತಾನೆ. ಮಕ್ಕಳಿಗೆ ಕೂಡ ಅವನನ್ನು ಕಂಡರೆ ತಾತ್ಸಾರ, ತಮಾಷೆ, ಗೇಲಿ.

ಚಿದಂಬರಂ ಕೆಲವಾರು ಇಂಗ್ಲಿಷ್ ಕೃತಿಗಳನ್ನೂ ಕನ್ನಡಕ್ಕೆ ತಂದಿರುವರು. ಅವು ಅನುವಾದ ಕಾರ್ಯದಲ್ಲಿ ಅವರೆಷ್ಟು ಸಮರ್ಥರು ಎಂಬುದನ್ನು ಸಾಬೀತುಪಡಿಸುತ್ತವೆ. ಜವಾಹರಲಾಲ್ ನೆಹರು ಅವರ Discovery of India ('ಭಾರತ ದರ್ಶನ' ಎಂಬ ಹೆಸರಿನಿಂದ) Bunch of Lettersಗಳನ್ನು ('ಪತ್ರಗುಚ್ಛ' ಎಂಬ ಹೆಸರಿನಿಂದ) ಕನ್ನಡಕ್ಕೆ ತಂದು ಅವುಗಳ ತಿರುಳನ್ನು ಕನ್ನಡಿಗರ ಮುಂದಿರಿಸಿದರು. 'ಭಾರತ ದರ್ಶನ' ಮತ್ತು 'ಪತ್ರಗುಚ್ಛ' ಪ್ರಕಟವಾದಾಗ ಸ್ವತಃ ನೆಹರೂ ಅವರೆ ಮೆಚ್ಚುಗೆಯ ಪತ್ರವನ್ನು ಬರೆದಿದ್ದರು. ಗಾಂಧೀಜಿಯವರ 'ಗೋಖಲೆ : ನನ್ನ ರಾಜಕೀಯ ಗುರು' (೧೯೫೭), ಆರ್.ಪಿ. ಮಸಾನಿಯವರ 'ದಾದಾಬಾಯಿ ನವರೋಜಿ' (೧೯೫೭) ಮತ್ತು ಜೇಮ್ಸ್ ಕೆಲ್ಲರ್ ಅವರ 'ಮಹಾದೇವ ಗೋವಿಂದ ರಾನಡೆ' (೧೯೫೯) – ಈ ಮೂರು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದ ಮಹನೀಯರ ಬದುಕು ಬವಣೆಯನ್ನು ಚಿತ್ರಿಸಿಕೊಡುವ ಪುಸ್ತಕಗಳು; ಅವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತಂದು, ತಮ್ಮ ರಾಷ್ಟ್ರಪ್ರೇಮವನ್ನು ಚಿದಂಬರಂ ಪ್ರಕಟಿಸಿದ್ದಾರೆ.

ಅದೇ ರೀತಿ ಅವರು ಕನ್ನಡಕ್ಕೆ ತಂದ ಮತ್ತೊಂದು ಮಹತ್ತರವಾದ ಕೃತಿ 'ಎವರೆಸ್ಟ್ ವೀರ'. ಇದು ೧೯೫೩ರ ಮೇ ತಿಂಗಳಿನಲ್ಲಿ ಎಡ್ಮಂಡ್ ಹಿಲರಿಯೊಂದಿಗೆ ಸೇರಿ ವಿಶ್ವದ ಅತ್ಯುನ್ನತ ಶಿಖರವಾದ ಹಿಮಾಲಯ ಶ್ರೇಣಿಯ ಎವರೆಸ್ಟ್ ಶಿಖರವನ್ನು ಏರಿದ ನೇಪಾಳದ ಷರ್ಪಾ ತೇನ್‌ಸಿಂಗ್‌ನ ಆತ್ಮಕಥೆ. ಇಂಗ್ಲಿಷಿನಲ್ಲಿ ಈ ಕೃತಿಯ ಮೂಲ ಲೇಖಕ ಜೇಮ್ಸ್ ರ್‍ಯಾಮ್ಸೆ ಉಲ್ಮಾನ್ (ತೇನ್‌ಸಿಂಗ್‌ನು ಹೇಳಿದಂತೆ). ಈ ಕೃತಿಯ ಅನುವಾದಕ್ಕೆ ಕೊಡಲಿ ಚಿದಂಬರಂರವರು ಜನಾರ್ದನ ಗುರ್ಕಾರ್ (ಕಾದಂಬರಿ ಕಾರರು) ಅವರ ನೆರವನ್ನು ಪಡೆದಿದ್ದಾರೆ.

ಸಾಕಷ್ಟು ವಿಸ್ತಾರವಾಗಿ ಹರಡಿಕೊಂಡಿರುವ ಕೃತಿ (ಕ್ರೌನ್ ೧/೮ ನಲ್ಲಿ ೩೭೩ ಪುಟ) ತೇನ್‌ಸಿಂಗ್ ಜೀವನ ವೃತ್ತಾಂತವನ್ನು ಕುತೂಹಲಭರಿತವಾಗಿ ತಿಳಿಸಿಕೊಡುತ್ತದೆ. ತೇನ್‌ಸಿಂಗ್ ತನ್ನ ಹುಟ್ಟು ಬಾಲ್ಯ, ಪರಿಸರ, ಎವರೆಸ್ಟ್ ಶಿಖರ ಏರುವ ಆತನ ಪ್ರಯತ್ನಗಳು, ಆತನ ಅನುಭವ ಈ ಎಲ್ಲವನ್ನೂ ಹಂತಹಂತವಾಗಿ ಬಿಡಿಸಿಡುತ್ತ, ಓದುಗರನ್ನು ತನ್ನೆಡೆಗೆ ಸೆಳೆಯುತ್ತಾನೆ. ರೋಮಾಂಚಕಾರಿಯಾಗಿ ಸಾಗುವ ಈ ಆತ್ಮಕಥನವು ಇಂದಿಗೂ ತನ್ನ ತಾಜಾತನವನ್ನು ಉಳಿಸಿಕೊಂಡಿದೆ. ಆ ತಾಜಾತನ ಕನ್ನಡ ಅನುವಾದದಲ್ಲೂ ಉಳಿದು

ಬಂದಿದೆ. ಬಾಲಕ ತೇನ್‌ಸಿಂಗ್ ತನ್ನೂರನ್ನು (ಸೋಲೋ ಖುಂಬು ಪ್ರದೇಶವನ್ನು) ಪ್ರಥಮ ಬಾರಿಗೆ ಬಿಟ್ಟು ನೇಪಾಳದ ಕಠ್ಮಂಡುವಿಗೆ ಹೋಗುವ ಒಂದು ಸಂದರ್ಭ–

'ಜಗತ್ತು ಬಹು ದೊಡ್ಡದು ಸೋಲೋ ಖುಂಬು ತೀರ ಚಿಕ್ಕದು. ನನಗೆ ವಯಸ್ಸಾದಂತೆಲ್ಲ ನಾನು ಆ ಸ್ಥಳವನ್ನು ಬಿಡಬೇಕೆಂದು ನನಗನ್ನಿಸಿತು. ಆದರೆ ಅಲ್ಲಿಂದ ನಾನು ಮೊದಲು ಹೊರಟದ್ದು ಪರ್ವತಗಳಿಗಲ್ಲ, ಡಾರ್ಜಲಿಂಗಿಗೂ ಅಲ್ಲ, ನೇಪಾಳದ ರಾಜಧಾನಿ ಕಠ್ಮಂಡುವಿಗೆ. ಆಗ ನಾನು ಕೇವಲ ಹದಿಮೂರು ವರ್ಷದ ಹುಡುಗ. ಒಬ್ಬನೇ ಎಲ್ಲರಿಗೂ ಕಾಣುವಂತೆ ಹೋಗುವಂತಿರಲಿಲ್ಲ; ಆದ್ದರಿಂದ ಓಡಿಹೋದೆ. ನನ್ನ ಮನಸ್ಸು ಅಪರಾಧಿಯಾಗಿತ್ತು. ನನ್ನ ತಂದೆತಾಯಿಗಳಿಗೆ ನಾನು ಬಹು ಅಕ್ಕರೆಯ ಮಗುವೆಂದು ನನ್ನ ಅಕ್ಕ ಲ್ಹಾಮ ಕಿಪಾ ನನಗೆ ಹೇಳಿದ್ದಳು. ನನಗೂ ಅವರನ್ನು ಕಂಡರೆ ಬಹು ಇಷ್ಟ, ಅವರ ಮನಸ್ಸನ್ನು ನೋಯಿಸಲು ಇಷ್ಟವಿರಲಿಲ್ಲ, ಆದರೆ ನನ್ನ ಆಸೆ ಬಹು ವಾಗಿತ್ತು. ಅದು ಬಲಯುತವಾಗಿತ್ತು. ಮೊದಲು ನಾನೊಬ್ಬನೇ . ಮಕಾಲುವಿನ ಮಾರ್ಗ ವಾಗಿ, ಬಳಸಿಕೊಂಡು ಕಠ್ಮಂಡುವಿಗೆ ಹೊರಟೆ. ಆಮೇಲೆ ದಾರಿಯಲ್ಲಿ ಬೇರೆ ಪ್ರಯಾಣಿಕರು ಜೊತೆಯಾದರು. ಕಠ್ಮಂಡುವನ್ನು ಸೇರಲು ಎರಡು ವಾರಗಳಿಗಿಂತ ಕೊಂಚ ಹೆಚ್ಚು ಕಾಲ ಹಿಡಿಯಿತು. ಅದೇ ಮೊದಲನೆಯ ನಗರ ನಾನು ನೋಡಿದ್ದು, ಕಠ್ಮಂಡುವಿನಲ್ಲಿ ಮುಖ್ಯವಾಗಿ ಹಿಂದುಗಳಿರುವುದು, ನಾನಾದರೋ ಬೌದ್ಧರ ಮಧ್ಯ ದಿಂದ ಬಂದವನು; ಆದ್ದರಿಂದ ಅಲ್ಲಿ ನನಗೆಲ್ಲವೂ ವಿಚಿತ್ರವಾಗಿ ಕಂಡಿತು. ಮನಸ್ಸಿಗೆ ಗೊಂದಲವಾಯಿತು. ಸ್ವಲ್ಪ ಕಾಲದ ಮೇಲೆ ಅಲ್ಲೊಂದು ಬೌದ್ಧಮಠವನ್ನು ಕಂಡೆ. ಅಲ್ಲಿ ಆಗಂತುಕರಿಗೆ ಆಶ್ರಯ ಕೊಡುತ್ತಿದ್ದರು; ನಾನೂ ಅಲ್ಲಿಯೇ ನಿಂತೆ.

ಸುಮಾರು ಎರಡು ವಾರಗಳ ಪರ್ಯಂತ ನಾನು ನಗರವನ್ನೆಲ್ಲ ಸುತ್ತಾಡಿದೆ; ಅದುವರೆಗೆ ನಾನು ಯಾವಾಗಲೂ ನೋಡದಿದ್ದಂಥ ಜನರ ಗುಂಪುಗಳನ್ನೂ ಅಂಗಡಿ ಬೀದಿಗಳನ್ನೂ ದೊಡ್ಡ ದೊಡ್ಡ ಕಟ್ಟಡಗಳನ್ನೂ ದೇವಾಲಯಗಳನ್ನೂ ಇನ್ನೂ ನಾನಾ ತೆರನ ವಸ್ತುಗಳನ್ನೂ ನೋಡಿದೆ. ನೇಪಾಳದಲ್ಲಿ ಸೊಗಸಾದ ಸೈನ್ಯವಿದೆ. ಮಧ್ಯ ಮತ್ತು ಪಶ್ಚಿಮ ನೇಪಾಳದ ಹೆಸರಾದ ಗೂರ್ಖಾ ಜನರೇ ಈ ಸೈನ್ಯದಲ್ಲಿ ಹೆಚ್ಚಾಗಿದ್ದಾರೆ. ಅವರು ಶಿಸ್ತಿನಿಂದ ನಡೆಯುವುದನ್ನು ನಿಂತು ನೋಡುವುದೂ, ಆ ಕಾಲದಲ್ಲಿ ಬಾಜಿಸುತ್ತಿದ್ದ ವಾದ್ಯಗೀತಗಳನ್ನು ಕೇಳುವುದೂ ನನಗೆ ಬಹು ಇಷ್ಟವಾಯಿತು. ಅಂತೆಯೇ, ಮಂಗೋಲಿಯ ಬುಡಕಟ್ಟಿನವರಲ್ಲದ ಅಲ್ಲಿನ ಹಿಂದೂ ಜನರನ್ನು ಅಚ್ಚರಿಯಿಂದ ನಿಂತು ನೋಡುತ್ತಿದ್ದೆ. ಅವರ ಮುಖಗಳೂ ಉಡಿಗೆ ತೊಡಿಗೆಗಳೂ ಕೆಲಸದ ರೀತಿಗಳೂ ನಾನು ಅದುವರೆಗೆ ನೋಡಿದ್ದೆಲ್ಲದರಿಂದ ಬೇರೆಯಾಗಿದ್ದವು. ಹೀಗೆ ಎಲ್ಲ ಕುತೂಹಲಕರವಾಗಿದ್ದರೂ ಮನೆಯ ಚಿಂತೆ ಬಾಧಿಸುತ್ತಿತ್ತು. ಊರಿಗೆ ಹಿಂದಿರುಗಲಿರುವ ಸೋಲೋ – ಖುಂಬುವಿನ ಜನರನ್ನು ಕಂಡೊಡನೆ ನಾನೂ ಅವರೊಡನೆ ಹೊರಟೆ. ಈ ಬಾರಿ ನೇರವಾದ ಹಾದಿಯನ್ನು ಹಿಡಿದೆವು.

ಅನೇಕ ವರ್ಷಗಳ ನಂತರ ಸ್ವಿಸ್ ಮತ್ತು ಬ್ರಿಟಿಷ್ ತಂಡಗಳೊಡನೆ ನಾನು ಎವರೆಸ್ಟಿಗೆ ಹೋದದ್ದು ಈ ಮಾರ್ಗವಾಗಿಯೇ. ನಾನು ಥಾಮಿಯನ್ನು (ಹಳ್ಳಿ) ಸೇರುವ ವೇಳೆಗೆ ಮನೆಬಿಟ್ಟು ಆರುವಾರಗಳಾಗಿತ್ತು. ನಾನು ಹಿಂದಿರುಗಿ ಬಂದಿದ್ದನ್ನು ಕಂಡು ತಂದೆತಾಯಿಗಳಿಗೆ ಆತ್ಮಾನಂದವಾಗಿ ನನ್ನನ್ನು ಎದೆಗವಚಿಕೊಂಡರು.

ಮುದ್ದಾಟ ಮುಗಿದ ಮೇಲೆ ಪೃಷ್ಠದ ಮೇಲೆ ಲಾತು ಕೊಟ್ಟರು.

(-'ಎವರೆಸ್ಟ್‌ವೀರ' - ಪು.೪೮-೪೯)

ಈ ಸಾಲುಗಳನ್ನು ಓದುತ್ತಿದ್ದರೆ ಇದೊಂದು ಅನುವಾದ ಕೃತಿ ಅಂತನ್ನಿಸುವುದೇ ಇಲ್ಲ. ಮೂಲ ಕೃತಿಯೇನೊ ಎಂಬ ಭಾವನೆ ಬರುತ್ತದೆ.

ಆದರೆ ಚಿದಂಬರಂ ಅವರು ಒಬ್ಬ ಶ್ರೇಷ್ಠ ಗದ್ಯ ಬರಹಗಾರರಾಗಿದ್ದರೂ ಕಾರ್ಯಾಲಯದ ಕೆಲಸದ ಒತ್ತಡದಿಂದಾಗಿ ಆ ಕಡೆ ಹೆಚ್ಚು ಕಾಲ ವಿನಿಯೋಗಿಸ ಲಾಗಲಿಲ್ಲ. ಅಷ್ಟರಮಟ್ಟಿಗೆ ಅವರಿಗೂ ನಷ್ಟ ಕನ್ನಡ ಸಾಹಿತ್ಯ ಪ್ರಿಯರಿಗೂ ನಷ್ಟ ಈ ಸಂದರ್ಭದಲ್ಲಿ ಡಿವಿಜಿಯವರು ಒಮ್ಮೆ ಹೇಳಿದ 'ಚಿದಂಬರಂ ಅವರು ಬರವಣಿಗೆ ಯನ್ನು ಪ್ರಮುಖವಾಗಿ ತೆಗೆದುಕೊಂಡಿದ್ದರೆ ನಾನಾಗಲಿ, ಇತರ ಬರಹಗಾರರಾಗಲಿ ಇರುತ್ತಿರಲಿಲ್ಲ. ಅವರೊಬ್ಬ ದೊಡ್ಡ ಗ್ರಂಥಕರ್ತೃವಾಗಿರುತ್ತಿದ್ದರು' ಎಂಬ ಮಾತು ಅವರ ಬರವಣಿಗೆಯ ಸತ್ವವನ್ನು ಹೇಳುತ್ತದೆ ಅನ್ನಬಹುದು.

■

# ಪುಸ್ತಕ ಮಾರಾಟ

ಪುಸ್ತಕಗಳನ್ನು ಕೊಂಡು ಓದುವ ಪರಿಪಾಠ ಕನ್ನಡದಲ್ಲಿ ಮೊದಲಿನಿಂದಲೂ ಅಷ್ಟಾಗಿ ಇರಲಿಲ್ಲ. (ಈಗಲೂ ಆ ಪರಿಸ್ಥಿತಿ ಉತ್ತಮವಾಗಿದೆಯೆಂದು ಅನ್ನಿಸುವುದಿಲ್ಲ) ಇದಕ್ಕೆ ಕಾರಣವಿಲ್ಲದೆಯೂ ಇಲ್ಲ. ಕನ್ನಡ ನಾಡಿನ ಭಾಷೆಯಾಗಿದ್ದರೂ ಓದಿ, ಬರೆಯಲು ಬರುವವರ ಸಂಖ್ಯೆ ಹಿಂದೆ ತೀರ ಕಮ್ಮಿಯಿತ್ತು. ಅಕ್ಷರ ಜ್ಞಾನದ ಅಭಾವ ಎದ್ದು ಕಾಣುತ್ತಿತ್ತು. ಗ್ರಾಮೀಣ ಭಾಗಗಳಲ್ಲಿ ಮೌಖಿಕ ಸಾಹಿತ್ಯವೇ ಅಲ್ಲಿನ ಜನರ ಹೃದಯವಾಣಿಯಾಗಿತ್ತು.

ಬಹುಸಂಖ್ಯಾತರಿಗೆ ಅಕ್ಷರ ಕಲಿಕೆ ಮತ್ತು ಓದು ಸಾಧ್ಯವಾದುದು ಆಧುನಿಕ ವಾದ ನಾಡಿನ ವಿದ್ಯಾಭ್ಯಾಸದಿಂದಲೇ ಹೊರತು ಪರಂಪರಾಗತ ವಿದ್ಯಾಭ್ಯಾಸ ಕ್ರಮದಿಂದಲ್ಲ. ಅದು ಅವರಿಗೆ ಅತಿದೂರದಲ್ಲಿತ್ತು ಮತ್ತು ಅಗ್ರಾಹ್ಯವಾಗಿತ್ತು. ಆಧುನಿಕ ಶಿಕ್ಷಣ ಪದ್ಧತಿಯ ಬೆಂಬಲದಿಂದ ವಿದ್ಯೆ ಕಲಿಯತೊಡಗಿದರೂ ಅದು ಅಷ್ಟೇನು ವ್ಯಾಪಕವಾಗಿರಲಿಲ್ಲ. ಈ ಹೊತ್ತಿನಲ್ಲೇ ಮುದ್ರಣ ಯಂತ್ರದ ಪ್ರವೇಶವಾಗಿ ದೇಶದಲ್ಲಿ ಪುಸ್ತಕಗಳು ಪ್ರಕಟಗೊಳ್ಳತೊಡಗಿದವು. ಹಾಗಾಗಿ, ಪುಸ್ತಕ ಮಾಧ್ಯಮ ಕ್ರಮೇಣ ಜನಮನಸ್ಸನ್ನಾವರಿಸತೊಡಗಿದವು. ಆದರೂ ಪುಸ್ತಕಕೊಳ್ಳುವವರು ಸಂಖ್ಯೆಯೇನೂ ಗಣನೀಯವಾಗಿರಲಿಲ್ಲ. ಓದಲು, ಬರೆಯಲು ಸ್ಪಷ್ಟವಾಗಿ ಬರೆದವರು ಪುಸ್ತಕ ಕೊಂಡು ಮಾಡುವುದಾದರೂ ಏನು? ಜನಾಮಾನಸದಲ್ಲಿ ಗ್ರಂಥಗಳು ಸರಸ್ವತಿಯ ಆರಾಧನೆ ಆಗಿತ್ತೇ ಹೊರತು ಬದುಕಿನ ಅಂಗ ಆಗಿರಲಿಲ್ಲ.

ಇಂಥ ಸಂದರ್ಭದಲ್ಲಿ ಕನ್ನಡ ಪುಸ್ತಕವೊಂದರ ೧೦೦೦ ಪ್ರತಿಗಳು ಮಾರಾಟ ವಾಗಲು ಸುಮಾರು ೧೦ರಿಂದ ೧೨ ವರ್ಷಗಳೇ ಬೇಕಾಗುತ್ತಿತ್ತು. ಅಂಥ ಪರಿಸ್ಥಿತಿ ಯಲ್ಲಿ ಕೂಡಲಿ ಚಿದಂಬರಂ ಅವರು ಕನ್ನಡ ಪುಸ್ತಕ ಪ್ರಕಟಿಸಲು ಕೈ ಹಾಕಿದುದು ಒಂದು ಸಾಹಸಮಯ ಚೋದ್ಯವೇ ಸೈ. ಕನ್ನಡ ಸಾಹಿತ್ಯವನ್ನು ಪ್ರಸಾರಗೊಳಿಸಬೇಕೆಂಬ ಒಳಉತ್ಸಾಹ ಅವರಿಗೆ ಯಾವಾಗಲೂ ಇದ್ದದ್ದೇ. ಆ ದೃಷ್ಟಿಯಿಂದ ಪುಸ್ತಕ ಪ್ರಕಾಶನಕ್ಕೆ ಅವರ ಪ್ರವೇಶ ಪರಮೋಹತ್ಸಾಹದಿಂದಲೇ ನಡೆಯಿತು. ಅವರ ಈ ಉತ್ಸಾಹ ನಡುದಾರಿಯಲ್ಲಿ ಬತ್ತದೆ, ಅವರಿಗೂ ಅವರ ಕಾರ್ಯಕ್ಕೂ ಅಂತರ್ಗತವಾಗಿ ಕೊನೆಯವರೆಗೂ ಬೆಂಬಲವಾಗಿ ನಿಂತಿತು.

ಪುಸ್ತಕ ಮಾರಾಟದ ವಿಷಯ ಬಂದಾಗ ಇನ್ನೊಂದು ಸಂಗತಿಯನ್ನೂ ಪ್ರಸ್ತಾಪಿಸಬೇಕಾಗುತ್ತದೆ. ಚಿದಂಬರಂ ಅವರು ಪ್ರಕಟಿಸುತ್ತಿದ್ದುದು ಸಾಹಿತ್ಯಿಕ ಮೌಲ್ಯವುಳ್ಳ ಕೃತಿಗಳನ್ನು. ಅದು ಅವರ ಅಭಿರುಚಿಯ ಪ್ರತೀಕವೇ ಆಗಿತ್ತು. ಅಂದಿನ ಜನಪ್ರಿಯ ಪ್ರಕಾರವಾದ ಕಾದಂಬರಿಯನಲ್ಲ; ಜನಪ್ರಿಯ ಕಾದಂಬರಿಗಳನ್ನಂತು ಅಲ್ಲವೇ ಅಲ್ಲ, ಗುಣಗ್ರಾಹಿ ಪುಸ್ತಕಗಳನ್ನು ಪ್ರಕಟಿಸತೊಡಗಿದ ಅವರು ಪರೋಕ್ಷವಾಗಿ ಗುಣಗರಾಹಿ ಗ್ರಾಹಕರನ್ನೇ ಹುಡುಕಬೇಕಾಗಿಬಂತು. ಶಿವಮೊಗ್ಗ-ತೀರ್ಥಹಳ್ಳಿಗಳಲ್ಲಿದ್ದಾಗ ಅಂಥ ಗ್ರಾಹಕರನ್ನು ಹುಡುಕಲು ತಕ್ಕಮಟ್ಟಿಗಾದರೂ ಸಾಧ್ಯವಾಯಿತೆಂದು ನಾವಾದರೂ ಊಹಿಸಬಹುದು.

ತೀರ್ಥಹಳ್ಳಿಯಲ್ಲಿ ಸಹಕಾರಿ ಬ್ಯಾಂಕೊಂದರ ಉದ್ಯೋಗಿಯಾಗಿದ್ದುಕೊಂಡು 'ವಿಚಾರ ವಾಹಿನಿ' ಎಂಬ ಸಾಹಿತ್ಯ ಮಾಸಿಕವನ್ನು ಸಂಪಾದಿಸಿ ಪ್ರಕಟಿಸುತ್ತಿದ್ದುದು ಸರಿಯಷ್ಟೇ ಆ ಪತ್ರಿಕೆಯ ಮೂಲಕ ಕಾವ್ಯಾಲಯದ ಪುಸ್ತಕಗಳ ಬಗ್ಗೆ ಪ್ರಚಾರ ನೀಡುತ್ತಿದ್ದರು. ಪುಸ್ತಕಗಳ ವಸ್ತು, ಅದರ ಮಹತ್ವ , ಬೆಲೆ ಮುಂತಾದವುಗಳನ್ನು ಅಂದಿನ ಜಾಹಿರಾತುಗಳಲ್ಲಿ ನೀಡಿ, ಓದುಗರಿಗೆ ಮಾಹಿತಿ ನೀಡಿ, ಅವರ ಗಮನವನ್ನು ಸೆಳೆಯುತ್ತಿದ್ದರು. ಇದು ಒಂದು ಬಗೆಯದಾದರೆ ತಮ್ಮ ಸಂಸ್ಥೆಯ "ಪ್ರತಿಯೊಂದು ಪ್ರಕಟಣೆಯ ಕೊನೆಯ ಭಾಗದಲ್ಲಿ ಕಾವ್ಯಾಲಯ ಪ್ರಕಟಣೆಗಳ ವಿವರಗಳು, ಆ ಕೃತಿಗಳ ಬಗೆಗೆ ಪತ್ರಿಕೆಗಳಲ್ಲಿ ಪ್ರಕಟವಾದ ಅನಿಸಿಕೆ, ಮೆಚ್ಚುಗೆಗಳನ್ನು ಮುದ್ರಿಸುತ್ತಿದ್ದರು. ಹಾಗೆಯೇ ಕಾವ್ಯಾಲಯ ಪ್ರಕಟಣೆಗಳನ್ನು ತಪ್ಪದೇ ಪತ್ರಿಕೆಗಳಿಗೆ ಕಳುಹಿಸಿ ಜನರ ಗಮನಕ್ಕೆ ತರುತ್ತಿದ್ದರು.

ತಮ್ಮ ಸಂಸ್ಥೆಯಲ್ಲಿ ಪ್ರಕಟಿತವಾದ ಕೃತಿಗಳ ಸಂಖ್ಯೆ ಅಧಿಕವಾಗುತ್ತಿದ್ದಂತೆ, 'ಪುಸ್ತಕ ಪಟ್ಟಿ'ಯನ್ನು ಮುದ್ರಿಸಿ, ಪುಸ್ತಕಗಳ ಮಾರಾಟಗಾರರು, ಓದುಗರ ಗಮನಕ್ಕೆ ತರುತ್ತಿದ್ದರು. ಈ ಪ್ರಕ್ರಿಯೆಯನ್ನು ಕಾವ್ಯಾಲಯ ಈಗಲೂ ಮುಂದುವರಿಸಿಕೊಂಡು ಹೋಗುತ್ತಿದೆ. ಹೀಗೆ ಕನ್ನಡ ಪ್ರಕಾಶನೋದ್ಯಮಕ್ಕೆ ಪ್ರತೀಕರಾದರು"೧.

ಕಾವ್ಯಾಲಯ ಶಿವಮೊಗ್ಗದಲ್ಲಿ ಪ್ರಾರಂಭವಾದಾಗ ಅದು ಹವ್ಯಾಸಿ ರೂಪದಲ್ಲಿತ್ತೇ ಹೊರತು ವೃತ್ತಿಪರತೆಯಿಂದ ಕೂಡಿರಲಿಲ್ಲ, ಆದರೂ ಚಿದಂಬರಂ ಪುಸ್ತಕ ಮಾರಾಟದ ಬಗ್ಗೆ ಹಿಂದೇಟು ಬೀಳಲಿಲ್ಲ. ಅವರೇ ಪುಸ್ತಕಗಳನ್ನು ಹೊತ್ತುಕೊಂಡು ಸಾಹಿತ್ಯಾಸಕ್ತರಿಗೆ ಮಾರಾಟ ಮಾಡಿದರು. (ಗಳಗನಾಥರು, ಶಿವರಾಮ ಕಾರಂತರು ಈ ಮೊದಲಾದ ಕೆಲವು ಸಾಹಸಿ ಸಾಹಿತಿಗಳು ಇದೇ ಬಗೆಯ ಕೆಲಸವನ್ನು ಮಾಡುತ್ತಿದ್ದರು). ಅಲ್ಲದೆ, ಬೇರೆ ಊರುಗಳ ಪುಸ್ತಕ ಮಾರಾಟಗಾರರಿಗೂ ಮಾರಾಟಕ್ಕೆ ಪುಸ್ತಕಗಳನ್ನು ಕಳಿಸಿಕೊಡುತ್ತಿದ್ದರು. ಪುಸ್ತಕ ಮಾರಾಟ ಅವುಗಳ ಗುಣಮಟ್ಟದಿಂದಲೇ ಹೊರತು ಅನ್ಯತ್ರ ಅಲ್ಲ, ಅದನ್ನು ಹಾಗೆಯೇ ಪೂರೈಸಿದರು.

---

೧. ಶ್ರೀ ಕೂಡಲಿ ಚಿದಂಬರಂ - ಲೇ. ಶಿವಾರೆಡ್ಡಿ

ಪುಸ್ತಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮೈಸೂರಿನಲ್ಲಿ ಮುದ್ರಿಸುವುದಕ್ಕೆ ಪ್ರಾರಂಭವಾದ ಮೇಲೆ ಅವರು ಮಾರಾಟಕ್ಕೆ ಅನುಸರಿಸಿದ ಕೆಲವೊಂದು ವಿಧಾನಗಳು ಹೀಗಿವೆ :

★ ಪ್ರಕಟಿತ ಪುಸ್ತಕಗಳ ಮೇಲುಹೊದಿಕೆಗಳನ್ನು (Cover Pages) ಅಂಚೆಯ ಮೂಲಕ ಪುಸ್ತಕ ಮಾರಾಟಗಾರರಿಗೆ ಕಳಿಸುತ್ತಿದ್ದರು. ಅವುಗಳಿಗೆ ಬಂದ ಬೇಡಿಕೆಗಳಿಗನುಸಾರವಾಗಿ ಪುಸ್ತಕಗಳನ್ನು ಕಳುಹಿಸುತ್ತಿದ್ದರು.

★ ವಿ.ಪಿ.ಪಿ. ಮೂಲಕವೂ ಪುಸ್ತಕಗಳನ್ನು ಕಳುಹಿಸುತ್ತಿದ್ದರು.

★ ಸ್ಥಳೀಯವಾದ ಅಥವಾ ಹತ್ತಿರದ ಪುಸ್ತಕ ಮಾರಾಟಗಾರರಿಗೆ ತಾವೇ ಖುದ್ದು ಹೊತ್ತುಕೊಂಡು ಹೋಗಿ ಪುಸ್ತಕಗಳನ್ನು ತಲುಪಿಸುತ್ತಿದ್ದರು. ಮೈಸೂರಿನ ಕೃಷ್ಣ ಬುಕ್ ಡಿಪೊ (೧೦೦ ಅಡಿರಸ್ತೆ), ನ್ಯೂಸ್ ಪೇಪರ್ ಹೌಸ್, ನಾನುಮನ್ ಅಂಡ್ ಸನ್ಸ್, ಪ್ರೊಗ್ರೆಸ್ ಬುಕ್ ಸ್ಟಾಲ್ (ಸುಬ್ಬರಾಯನ ಕೆರೆ ಬಳಿ), ಉಷಾ ಸಾಹಿತ್ಯಮಾಲೆ, ಗೀತಾಬುಕ್ ಹೌಸ್ ಈ ಮುಂತಾದ ಪುಸ್ತಕ ಮಾರಾಟ ಮಳಿಗೆಗಳು (ಕೆಲವು ಪ್ರಕಾಶನ ಸಂಸ್ಥೆಗಳೂ ಹೌದು), ಮಂಗಳೂರಿನ ಕಾಲೇಜು ಬುಕ್ ಹೌಸ್, ಧಾರವಾಡದ ಮನೋಹರ ಗ್ರಂಥಾಲಯ, ಹುಬ್ಬಳ್ಳಿಯ ಸಾಹಿತ್ಯ ಭಂಡಾರ, ಜಮಖಂಡಿ (ಬಸ್ ನಿಲ್ದಾಣದ ಅಂಗಡಿ), ಬೆಂಗಳೂರಿನ ಸತ್ಯಶೋಧನ ಪುಸ್ತಕಾಲಯ (ದಿವಂಗತ ನಿಟ್ಟೂರು ಶ್ರೀನಿವಾಸ ರಾವ್ ಒಡೆತನದ್ದು, ಕೋಟೆ ಏರಿಯ, ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡದಲ್ಲಿ ಅದರ ಒಂದು ಶಾಖೆ ಇತ್ತು) ಮೆಜೆಸ್ಟಿಕ್ ಬುಕ್ ಡಿಪೊ ಅಲ್ಲದೆ ಅವೆನ್ಯೂ ರಸ್ತೆಯ ವಿವಿಧ ಪುಸ್ತಕ ಮಾರಾಟದ ಅಂಗಡಿಗಳು - ಈ ಮುಂತಾದ ಪುಸ್ತಕ ಮಳಿಗೆಗಳು ಕಾವ್ಯಾಲಯದ ಪ್ರಕಟಣೆಗಳನ್ನು ಮಾರಾಟ ಮಾಡುತ್ತಿದ್ದವು.

★ ಪುಸ್ತಕದ ಬೆಲೆಯ ಮೇಲೆ ೨೫%ರಷ್ಟು ರಿಯಾಯಿತಿ (ಕಮಿಷನ್) ನೀಡುತ್ತಿದ್ದರು.

★ ಗ್ರಂಥ ಪ್ರಕಾಶನ ಹಾಗೂ ಮಾರಾಟದ ಕೆಲಸ ತೀರ ಕಷ್ಟದ ಕೆಲಸ ಎಂದು ಗೊತ್ತಿದ್ದರೂ ನಮ್ಮ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಜನತೆಯಲ್ಲಿ ಸದಭಿರುಚಿಯನ್ನು ಹುಟ್ಟು ಹಾಕಬೇಕೆಂಬುದು ಅವರ ಇಚ್ಛೆಯಾಗಿತ್ತು. ಆದುದರಿಂದಲೇ ಅವರು ಪುಸ್ತಕಗಳನ್ನು ಜನರಿರುವಲ್ಲಿಗೇ ತಲುಪಿಸಬೇಕೆಂಬ ಮಹದಾಶೆಯನ್ನು ಹೊತ್ತರು. ಅಂದಿನ ಮೈಸೂರು ರಾಜ್ಯದ (೧೯೫೦ರ ದಶಕದಲ್ಲಿ) ಹಳ್ಳಿ ಹಾಗೂ ಪಟ್ಟಣಗಳಲ್ಲಿ ಪುಸ್ತಕಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಕಾರೊಂದನ್ನು ಕೊಂಡುಕೊಳ್ಳುವ ಆಸೆ ಹೊತ್ತರು. ಡಿ.ವಿ.ಜಿ. ಈ ಬಗ್ಗೆ ಎಚ್ಚರಿಕೆ ನೀಡಿದರು. ಆದರೂ ಚಿದಂಬರಂ ಅವರು ತಮ್ಮ ಇಚ್ಛೆಗನುಸಾರವಾಗಿ ಕೆಲವಾರು ಹಳ್ಳಿ , ಪಟ್ಟಣಗಳಲ್ಲಿ ಕನ್ನಡ ಪುಸ್ತಕ

ಮಾರಾಟ ಮಾಡಲು ಮುಂದಾದರು. ಆದರೆ, ಅವರು ನಿರೀಕ್ಷಿಸಿದಂತೆ ಪುಸ್ತಕ ವ್ಯಾಪಾರ ಆಗದೆ, ಕೊನೆಗೆ ಕಾರನ್ನು ಮಾರಾಟ ಮಾಡಬೇಕಾಯಿತು.

★ ಕಾವ್ಯಾಲಯದ ಗ್ರಂಥಗಳನ್ನು ಮಾರಾಟ ಮಾಡಲು ಅವರು ಸತತವಾಗಿ ಪ್ರಯತ್ನಗಳನ್ನು ನಡೆಸಿಯೇ ನಡೆಸಿದರು. ಪ್ರಕಟಿತಗೊಂಡ ಪುಸ್ತಕಗಳನ್ನು ಮಾರಾಟ ಮಾಡಲು ಮೈಸೂರಿನಲ್ಲಿ ಶಾಶ್ವತವಾಗಿ ಪುಸ್ತಕ ಮಾರಾಟ ಮಳಿಗೆಯೊಂದನ್ನು ತೆರೆದರೆ ಹೇಗೆಂಬ ಯೋಚನೆ ಬಂದದ್ದೇ ಚಿದಂಬರಂ ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾದರು. ಮೈಸೂರಿನ ೧೦೦ ಅಡಿ ರಸ್ತೆ (ಚಾಮರಾಜ ಜೋಡಿ ರಸ್ತೆ)ಯಲ್ಲಿ ನಗರ ಸಭೆ ಮಳಿಗೆಗಳು ಆ ಹೊತ್ತಿನಲ್ಲಿ ಹರಾಜಿಗೆ ಬಂದಿದ್ದವು. ಚಿದಂಬರಂ ಅವರು ಹರಾಜಿನಲ್ಲಿ ಭಾಗವಹಿಸಿ ೧೨' x ೨೦' ವಿಸ್ತೀರ್ಣದ ಒಂದು ಮಳಿಗೆಯನ್ನು ಪಡೆದರು. ಸ್ವತಃ ಅವರೇ ಮಳಿಗೆಯನ್ನು ನೋಡಿಕೊಳ್ಳುತ್ತಿದ್ದರಲ್ಲದೆ ಅವರ ಮಕ್ಕಳೂ ಸಹಾಯಕ್ಕೆ ನಿಂತರು. ಪ್ರತಿದಿನ ಬೆಳಿಗ್ಗೆ೯ ರಿಂದ ೧೨ ಹಾಗೂ ಸಂಜೆ ೫ರಿಂದ ರಾತ್ರಿ ೮.೧೫ರವರೆಗೆ ಮಳಿಗೆ ತೆರೆದಿರುತ್ತಿತ್ತು. ಪುಸ್ತಕ ವ್ಯಾಪಾರ ಸಾಧಾರಣವಾಗಿತ್ತು. ಆದರೆ, ದೈಹಿಕ ಶ್ರಮ ಹೆಚ್ಚಾಯಿತು. ಕೆಲಕಾಲನಂತರ ಅದನ್ನು ಮುಚ್ಚಿದರು.

★ ೧೯೫೦ರಲ್ಲಿ ನಡೆದ ದಸರಾ ವಸ್ತುಪ್ರದರ್ಶನದಲ್ಲಿ ಪುಸ್ತಕ ಮಳಿಗೆಯೊಂದನ್ನು ತೆರೆದು ೧೫ ದಿನಗಳ ಕಾಲ ನಡೆಸಿದರು. (ಬೆಳಿಗ್ಗೆ೮ರಿಂದ ರಾತ್ರಿ ೧೦) (ಆ ಸಂದರ್ಭದಲ್ಲಿ ಅವರ ಮಕ್ಕಳು ಕಾವ್ಯಾಲಯ 'ಪುಸ್ತಕ ಪಟ್ಟಿ'(Book list)ಯನ್ನೂ ತಿಳಿಯದೆ ಮಾರಾಟ ಮಾಡಿದರು. ಈ ವಿಷಯವನ್ನು ತಿಳಿದ ಚಿದಂಬರಂ ಅವರು ನಕ್ಕು 'ಅವು ಮಾರುವುದಕ್ಕಲ್ಲ, ಜನಗಳಿಗೆ ಉಚಿತವಾಗಿ ಕೊಡುವುದಕ್ಕೆ' ಎಂದು ತಿಳಿಸಿದರು - ಸಿ.ಕೆ. ಕೃಷ್ಣಮೂರ್ತಿ ಹೇಳಿದ್ದು).

★ ಚಿದಂಬರಂರವರು ಪುಸ್ತಕ ಮಾರಾಟಕ್ಕಾಗಿ ಕೆಲವೊಂದು ಸಾಹಿತ್ಯ ಸಮ್ಮೇಳನ ಗಳಿಗೂ ಹೋಗಿ ಬಂದರು. ಅಂಥ ಒಂದು ಸಂದರ್ಭ, ೧೯೪೭ರಲ್ಲಿ ಕಾಸರಗೋಡಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ. ಅಲ್ಲಿ ನಾಲ್ಕು ದಿನಗಳ ಕಾಲ ಪುಸ್ತಕ ವ್ಯಾಪಾರ ಮಾಡಿದರು.

★ ಶಾಲಾ ಕಾಲೇಜುಗಳಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುವಂತೆ ವಿದ್ಯಾ ಇಲಾಖೆಗೆ ಮನವಿ ಸಲ್ಲಿಸಿ, ಆ ಮೂಲಕವೂ ನ್ಯಾಯಯುತವಾಗಿ ಪುಸ್ತಕ ಮಾರಾಟ ಮಾಡಿದರು.

ಪುಸ್ತಕ ಮಾರಾಟ ಚಿದಂಬರಂ ಅವರಿಗೆ ವಿವಿಧ ಅನುಭವಗಳನ್ನು ತಂದುಕೊಟ್ಟವು. ಲಾಭವೂ

ಬಂದಿತು. ಪುಸ್ತಕ ಮಾರಾಟ ಮಾಡಲು ಸಾಲ ಪಡೆದವರ ಪೈಕಿ ಪ್ರಾಮಾಣಿಕವಾಗಿ ಹಣ ನೀಡಿದವರೂ ಉಂಟು. ಹಾಗೆಯೇ, ಕೈ ಎತ್ತಿದವರೂ ಉಂಟು. 'ಕಷ್ಟದಿಂದಲೇ ವ್ಯಾಪಾರ ಬೆಳೆಯಿತು. ಲಕ್ಷಾಂತರ ರೂಪಾಯಿ ನಷ್ಟವೂ ಆಯಿತು' ಎನ್ನುತ್ತಾರೆ. ಸಿ.ಕೆ. ಶೇಷಾದ್ರಿ ಅವರು. ಆದರೆ, ಎಲ್ಲವನ್ನೂ ಸಮಚಿತ್ತ ಭಾವದಿಂದಲೇ ಸ್ವೀಕರಿಸಿದರು ಚಿದಂಬರಂ.

■

# ಸಂಭಾವನೆ

ವೈಯಕ್ತಿಕ ಜೀವನದಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ಪಾಲಿಸುತ್ತಿದ್ದ ಕೂಡಲಿ ಚಿದಂಬರಂ ಅವರು ಅದೇ ಮನಸ್ಥಿತಿಯಲ್ಲಿ ಕಾರ್ಯಾಲಯದ ವ್ಯವಹಾರವನ್ನೂ ನೋಡಿಕೊಳ್ಳುತ್ತಿದ್ದರು. ಲೇಖಕರಿಗೆ ಗೌರವ ಸಂಭಾವನೆಯನ್ನು ಕೊಡುವುದು ಪ್ರಕಾಶಕರ ಕರ್ತವ್ಯವೆಂದು ತಿಳಿದಿದ್ದ ಅವರು ಅದನ್ನು ಕಟ್ಟುನಿಟ್ಟಾಗಿ ಪಾಲಿಸಿದರು.

ಲೇಖಕರ ಸಂಭಾವನೆಗಾಗಿಯೇ ಒಂದು ಲೆಡ್ಜರ್ ಅನ್ನು ಇಟ್ಟು ಲೇಖಕರ ಪ್ರಕಟವಾದ ಪುಸ್ತಕ, ಖರ್ಚಾದ ಪ್ರತಿಗಳು, ಲೇಖಕರಿಗೆ ಕೊಟ್ಟ ಸಂಭಾವನೆ ಇತ್ಯಾದಿ ವಿವರಗಳು ಅದರಲ್ಲಿ ಕ್ರಮಬದ್ಧವಾಗಿ ಇರುತ್ತಿತ್ತು. ಮೊದಮೊದಲು ಒಂದೇ ಗಂಟಿನಲ್ಲಿ ಲೇಖಕರಿಗೆ ಸಂಭಾವನೆ ನೀಡುತ್ತಿದ್ದರು. ಆದರೆ, ಕ್ರಮೇಣ ಅದು ಸಾಧ್ಯವಾಗಲಿಲ್ಲ. ಆಮೇಲೆ, ಮಾರಾಟವಾದ (ಒಂದು ವರ್ಷದ ಅವಧಿಯಲ್ಲಿ) ಪ್ರತಿಗಳಿಗನುಸಾರವಾಗಿ ಸಂಭಾವನೆಯನ್ನು ನೀಡುತ್ತಿದ್ದರು. ಮಾರಾಟವಾದ ಒಂದು ಪ್ರತಿಗೂ ಸಂಭಾವನೆ ಯನ್ನು ಕಳಿಸಿಕೊಡುತ್ತಿದ್ದರು! ರೂ. ೦.೭೫, ರೂ. ೨.೨೫ ಸಂಭಾವನೆಯನ್ನೂ ಕಳಿಸಿ ಕೊಡುತ್ತಿದ್ದರು. ತೀರ ಕಡಿಮೆ ಆದಾಗ ಸಂಭಾವನೆಯ ಮೊತ್ತದ ರಶೀತಿ ಸ್ಟ್ಯಾಂಪ್ ಅನ್ನು ಸಂಭಾವನೆಯ ರೂಪದಲ್ಲಿ ಕಳಿಸಿಕೊಡುತ್ತಿದ್ದರು! ಈ ನಿದರ್ಶನಗಳು ಹಣಕಾಸಿನ ವಿಚಾರದಲ್ಲಿ (ಅಂದರೆ ಲೇಖಕರಿಗೆ ಸಂಭಾವನೆ ಕೊಡುವ ವಿಚಾರದಲ್ಲಿ) ಅವರೆಷ್ಟು ಚೊಕ್ಕಟವಾಗಿದ್ದರು ಎಂಬುದನ್ನು ತಿಳಿಸುತ್ತವೆ. ನೆಹರೂ ಅವರ Discovery of India ಕನ್ನಡದಲ್ಲಿ ಪ್ರಕಟವಾದಾಗ ಅವರ ಕುಟುಂಬದವರು ಸಂಭಾವನೆ ಕಳಿಸುವುದು ಬೇಡ ಎಂದು ತಿಳಿಸಿದ್ದರು. ದೂರದ ಊರುಗಳಲ್ಲಿದ್ದ ಲೇಖಕರಿಗೆ ಸಂಭಾವನೆಯನ್ನು ಕಳಿಸುವುದಕ್ಕಾಗಿಯೇ ಮನೆಯಲ್ಲಿ ಒಂದಷ್ಟು ಮನಿಯಾರ್ಡರ್ ಫಾರಂಗಳನ್ನು ತಂದಿರಿಸಿಕೊಂಡಿದ್ದರು.

ಸಂಭಾವನೆ ವಿಷಯ ಬಂದಾಗ ಎ.ಎನ್. ಮೂರ್ತಿರಾವ್ ಅವರು ತಿಳಿಸುವ ಒಂದು ಸಂದರ್ಭವನ್ನು ಇಲ್ಲಿ ದಾಖಲಿಸಬೇಕು. ಅವರು ಹೇಳುತ್ತಾರೆ :

"ಲೇಖಕರಿಗೆ ಗೌರವಧನ ಶೇಕಡಾ ಇಷ್ಟರಂತೆ ಇಷ್ಟು, ಇದನ್ನೆಲ್ಲ ಕಳಿಸಿ ಜೊತೆಗೆ ಆ ಹಣಕ್ಕೆ ಒಂದು ಚೆಕ್ಕು. ಈ ಬಗೆಯ ಲಕೋಟೆಯಲ್ಲಿ ಅವರು ಯೋಗಕ್ಷೇಮಕ್ಕೆ ಸಂಬಂಧಪಟ್ಟ ಮಾತೇನನ್ನೂ ಸೇರಿಸುತ್ತಿರಲಿಲ್ಲ. ಒಂದು ಸಾರಿ ೧೯೫೦-೫೧ರ ಸುಮಾರಿನಲ್ಲಿ ನನ್ನ 'ಹವಳದ

ದ್ವೀಪ್ ಎಂಬ ಕೃತಿ ಪಠ್ಯಪುಸ್ತಕವಾಯಿತು; ಆಗುತ್ತದೆಂಬ ನಿರೀಕ್ಷೆ ನನಗಾಗಲಿ ಚಿದಂಬರಂರವರಿಗಾಗಲಿ ಇರಲಿಲ್ಲ. ಈ ಸಂದರ್ಭದಲ್ಲಾಗಲಿ ಮತ್ತಾವ ಸಂದರ್ಭದಲ್ಲಾಗಲಿ ನನ್ನ ಅವರ ನಡುವೆ ಕರಾರು ಪತ್ರಗಳೇನೂ ಆಗಿರಲಿಲ್ಲ. ಪುಸ್ತಕದ ಮರುಮುದ್ರಣವಾಯಿತು. ಪ್ರತಿಗಳೆಲ್ಲ ಮಾರಾಟವಾದವು. ಆಗ ಚಿದಂಬರಂ ನನ್ನನ್ನು ಕೇಳಿದರು :

'ಹೇಗೆ ಸೆಟ್ಲ್ ಮಾಡಿಕೊಳ್ಳೋಣ?'

'ಹೇಗಾದರೂ ಸರಿಯೇ. ಇಂಥ ಸಂದರ್ಭ ಅಪರೂಪ. ಇದರ ಪ್ರಯೋಜನ ನಿಮಗೂ ಆಗಬೇಕು. ನೀವೇ ಹೇಳಿ'.

'ಶೇಕಡ ೩.೫ ಆಗಬಹುದೆ?'

'ಧಾರಾಳವಾಗಿ. ನಾನು ಅಷ್ಟೊಂದು ನಿರೀಕ್ಷಿಸಿರಲಿಲ್ಲ. ಅಷ್ಟು ಕೊಟ್ಟರೆ ನಿಮ್ಮ ಲಾಭ ಕಡಿಮೆಯಾಗುತ್ತದೆ, ಅಲ್ಲವೆ?'

'ನೋಡಿ, ಇದು ನಮ್ಮಿಬ್ಬರಿಗೂ ಅನಿರೀಕ್ಷಿತ. ಅಂದಮೇಲೆ ಎಷ್ಟು ಬಂದರೂ ಅದು ಬೋನಸ್' ಎಂದು ನಗುತ್ತಾ ೯೫೦೦/- ರೂಪಾಯಿಗೆ ಚೆಕ್ಕ್ ಬರೆದುಕೊಟ್ಟರು. ಕಾಗದ ಪತ್ರಗಳೇನೂ ಇಲ್ಲದೆ ಹೀಗೆ ವ್ಯವಹರಿಸಬೇಕಾದರೆ ಚಿದಂಬರವರೊಡನೆ ಮಾತ್ರ ಸಾಧ್ಯ. ಅಂಥವರು ಪ್ರಪಂಚದಲ್ಲಿ ವಿರಳ. ಅವರೊಡನೆ ವ್ಯವಹರಿಸಿದವರೆಲ್ಲರ ಅನುಭವವೂ ನಾನು ಮೇಲೆ ಹೇಳಿರುವಂಥದೇ''[1]

ಹಿರಿಯ ಸಾಹಿತಿಗಳಾಗಿದ್ದ ಎ.ಎನ್. ಮೂರ್ತಿರಾವ್ ತಿಳಿಸುವ ಈ ಘಟನೆಯಿಂದ ಸ್ಪಷ್ಟವಾಗುವುದೆಂದರೆ – ಚಿದಂಬರಂ ಅವರ ಪ್ರಾಮಾಣಿಕ ವ್ಯಕ್ತಿತ್ವ; ಹಣಕ್ಕಾಗಿ ಹಲುಬದಿರುವ ಅವರ ಮನಸ್ಸು.

ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಗಿದ್ದರೂ ಹಣಕಾಸಿನ ಮುಗ್ಗಟ್ಟು ಎದುರಿಸುತ್ತಿದ್ದ ಕವಿ ಕೆ.ಎಸ್. ನರಸಿಂಹಸ್ವಾಮಿ, ಡಿ.ವಿ.ಜಿ.ಯಂಥವರಿಗೆ ಬೆಂಬಲವಾಗಿ ನಿಂತಿದ್ದು ಅವರ ಔದಾರ್ಯವೇ ಅಹುದೆನ್ನಬಹುದು. ಕೆಲವೊಮ್ಮೆ ಲೇಖಕರು ಹಣದ ಮುಗ್ಗಟ್ಟಿನಿಂದ ಅವರ ಬಳಿ ಬಂದಾಗ, ಅವರ ಅವಶ್ಯಕತೆಯನ್ನು ಸಾಧ್ಯವಾದಷ್ಟು ಪೂರೈಸಿ, ಅದಕ್ಕೆ ಪ್ರತಿಯಾಗಿ ಅವರಿಂದ ಬರೆಸಿ, ಹಸ್ತಪ್ರತಿ ಪಡೆದು ಅಚ್ಚಿಸುತ್ತಿದ್ದುದು – ಚಿದಂಬರಂ ಅವರ ಸಾಹಿತ್ಯಿಕ ಮಾನವೀಯತೆ ಅನ್ನಬಹುದೇನೊ?

---

೧. ಕಾವ್ಯಾಲಯ ಪ್ರಕಾಶಕರು : ಸಂ. ಹೊರೆಯಾಲ ದೊರೆಸ್ವಾಮಿ, ಪ್ರ. ಅಭಿನವ, ಬೆಂಗಳೂರು ೨೦೦೮, ಪು. ೧೧.

# ಲೇಖಕರೊಂದಿಗೆ ಸ್ನೇಹಸಂಬಂಧ

ಮೃದು ಭಾಷಿ, ಸಂಕೋಚದ ವ್ಯಕ್ತಿತ್ವದ ಚಿದಂಬರಂ ಅವರು ಒಬ್ಬ ಅಪ್ಪಟ ಸ್ನೇಹಜೀವಿ. ಆದುದರಿಂದಲೇ ಹತ್ತು ಹಲವಾರು ಲೇಖಕರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಕನ್ನಡದ ಶ್ರೇಷ್ಠ ಕೃತಿಗಳನ್ನು ಪ್ರಕಟಿಸಲು ಸಾಧ್ಯವಾಯಿತು. ಸದಾಕಾಲ ಕ್ರಿಯಾಶೀಲರಾಗಿದ್ದ ಅವರು ಬಾಲ್ಯದಿನಗಳಿಂದಲೂ ಕನ್ನಡ ಸಾಹಿತ್ಯ-ಸಂಸ್ಕೃತಿಯತ್ತ ಅತೀವ ಆಸಕ್ತಿಯನ್ನು ಹೊಂದಿದ್ದೂ ಒಂದು ಕಾರಣವಾಗಿ ಅವರ ಸ್ನೇಹತ್ವದ ವಲಯ ಕ್ರಮೇಣ ವಿಸ್ತರಿಸುತ್ತ ಹೋಯಿತು.

ಶಿವಮೊಗ್ಗದಲ್ಲಿದ್ದಾಗ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಸಹಪಾಠಿ (ತೀರ್ಥಹಳ್ಳಿಯಲ್ಲಿ) ಕೆ.ವಿ. ಪುಟ್ಟಪ್ಪನವರ ಗೆಳೆತನ ಕೊನೆಯವರೆಗೂ ಹರಿದುಬಂದಿತು. ಅದೇ ರೀತಿ ಸ್ವಾತಂತ್ರ್ಯ ಹೋರಾಟಗಾರ ದೇವಂಗಿ ಮಾನಪ್ಪನವರ ಗೆಳೆತನ. ತೀರ್ಥಹಳ್ಳಿಯಲ್ಲಿದ್ದಾಗ. ಆಗಾಗ ದೇವಂಗಿಗೆ ಚಿದಂಬರಂ ಹೋಗಿಬರುತ್ತಿದ್ದರು. ಹಾಗೆ ಹೋದಾಗ (ಮಕ್ಕಳೊಂದಿಗೆ) ದೇವಂಗಿ ಮಾನಪ್ಪನವರು ಹಾಲು, ಹಣ್ಣು ಕೊಟ್ಟು ಉಪಚರಿಸುತ್ತಿದ್ದುದನ್ನು ಅವರ ಮಕ್ಕಳು ಈಗಲೂ ನೆನಸಿಕೊಳ್ಳುತ್ತಾರೆ. ಚಿದಂಬರಂ ನೇತೃತ್ವದಲ್ಲಿ ಕಾವ್ಯಾಲಯ ಪ್ರಾರಂಭವಾದಾಗ ಅವರಿಗೆ ಬೆನ್ನೆಲಬಾಗಿದ್ದವರು ಕೆ.ವಿ. ಪುಟ್ಟಪ್ಪ ಮತ್ತು ದೇವಂಗಿ ಮಾನಪ್ಪ. ದೇವಂಗಿ ಮಾನಪ್ಪನವರು ಗ್ರಂಥ ಪ್ರಕಾಶನದ ಕಾರ್ಯಕ್ಕೆ ಹಣಕಾಸು ನೆರವು ನೀಡಿದ್ದೂ ಉಂಟು. ಅಲ್ಲದೆ, ಶಿವಮೊಗ್ಗದಲ್ಲಿ ಎಸ್.ವಿ. ಕೃಷ್ಣಮೂರ್ತಿ ರಾವ್ (ಮುಂದೆ ಲೋಕಸಭಾ ಸ್ಪೀಕರ್ ಆದರು) ಎಸ್.ವಿ. ಶ್ರೀನಿವಾಸ ರಾವ್, ಭೂಪಾಳಂ ಪುಟ್ಟನಂಜಪ್ಪ, ಎ. ಸೀತಾರಾಂ, ಭೂಪಾಳಂ ಚಂದ್ರಶೇಖರಯ್ಯ ಈ ಮುಂತಾದವರ ಗೆಳೆತನದ ನಡುವಿನಲ್ಲಿ ಅವರು ಬೆಳೆದುಬಂದಿದ್ದರು.

ಹಾಗೆ ನೋಡಿದರೆ ಶಿವಮೊಗ್ಗದ ಸ್ನೇಹಶೀಲ ವಾತಾವರಣವೇ ಚಿದಂಬರಂ ಅವರ ವ್ಯಕ್ತಿತ್ವ ಅರಳಲು ಬಹುಮಟ್ಟಿಗೆ ಕಾರಣವಾಯಿತು. ಆ ಕಾರಣದಿಂದಲೆ ಶಿವಮೊಗ್ಗ ಕರ್ನಾಟಕ ಸಂಘ ಕಟ್ಟುವುದರಲ್ಲಿ ಅವರ ಕೊಡುಗೆ ಸ್ಮರಣೀಯವಾದುದೇ ಆಗಿದೆ. 'ವಿಚಾರ ವಾಹಿನಿ' ತಿಂಗಳಿನ ಪತ್ರಿಕೆಯನ್ನು ತರಲು (ಕೆಲವು ತಿಂಗಳುಗಳ ಮಟ್ಟಿಗಾದರೂ) ಅವರಿಗೆ ಸಾಧ್ಯವಾದುದು ಅದೇ ಸ್ನೇಹವಲಯವೇ. ಕಾವ್ಯಾಲಯ ಪ್ರಕಾಶನ ಕಟ್ಟುವಾಗ

ಶಿವಮೊಗ್ಗದಲ್ಲಾಗಲಿ, ಮೈಸೂರಿನಲ್ಲಾಗಲಿ ಅವರಿಗೆ ಬಹುದೊಡ್ಡ ಸಂಪನ್ಮೂಲವೇನೂ ಇರಲಿಲ್ಲ. ಇದ್ದದ್ದು ಸ್ನೇಹಸ್ನಿಗ್ಧ ಮನಸ್ಸು, ಶ್ರದ್ಧೆ ಮತ್ತು ಪ್ರಾಮಾಣಿಕತೆಗಳು.

ಶಿವಮೊಗ್ಗದಲ್ಲಿ ವಕೀಲಿ ವೃತ್ತಿಯನ್ನು ಬಿಟ್ಟಾಗ ಅವರಿಗೆ ತೀರ್ಥಹಳ್ಳಿಯ ಸಹಕಾರಿ ಬ್ಯಾಂಕೊಂದರಲ್ಲಿ ಕೆಲಸ ಸಿಕ್ಕಿದುದು ಹಿತೈಷಿಗಳ ನೆರವಿನಿಂದಲೇ. ಕುಟುಂಬದೊಂದಿಗೆ ಅಪರಿಚಿತ ಮೈಸೂರಿಗೆ ಬಂದಾಗ ಅವರಿಗೆ ನೆರವಿಗೆ ಬಂದವರು ಯಥಾಪ್ರಕಾರ ಸ್ನೇಹಿತರು ಮತ್ತು ಹಿತೈಷಿಗಳು. ಮೈಸೂರಿನಲ್ಲಿ ನೆಲೆ ನಿಲ್ಲಲು ಬಂದಾಗ, ಅವರನ್ನು ಒಂದು ವಾರಕಾಲ ತಮ್ಮ ಮನೆಯಲ್ಲಿ ಬಿಡಾರ ಹೂಡಲು ವ್ಯವಸ್ಥೆ ಮಾಡಿ ಕೊಟ್ಟವರು ಎಸ್.ವಿ. ಕೃಷ್ಣಮೂರ್ತಿ ಎಂಬ ಪರಿಚಯದವರ. ಆಮೇಲೆ, ಬಾಡಿಗೆ ಮನೆ ಯೊಂದನ್ನು ಹಿಡಿದು, ಜೀವನೋಪಾಯಕ್ಕಾಗಿ ಪರದಾಡುವಾಗ ಮೈಸೂರಿನ ಚಾಮರಾಜಪುರಂ ಕೋ-ಆಪರೇಟಿವ್ ಸೊಸೈಟಿಯಲ್ಲಿ ಮ್ಯಾನೇಜರ್ ಕೆಲಸ ಕೊಡಿಸಿ ದವರು ಪ್ರೊ. ಸಿ.ಆರ್. ನರಸಿಂಹಾ ಶಾಸ್ತ್ರಿಗಳು ಎಂಬ ಹಿತೈಷಿಗಳು. ಹೀಗೆ ಜೀವನದು ದ್ದಕ್ಕೂ ಸ್ನೇಹತ್ವವನ್ನೇ ಆಧರಿಸಿಕೊಂಡು ಜೀವನ ನಿರ್ವಹಿಸುತ್ತ ಬಂದ ಚಿದಂಬರಂ ಒಬ್ಬ ಅಪ್ಪಟ ಸ್ನೇಹಜೀವಿಯಾಗಿದ್ದರೆಂಬುದನ್ನು ನಾವು ಮರೆಯಲಾಗುವುದಿಲ್ಲ.

ವಿಚಿತ್ರ, ಆದರೂ ಸತ್ಯನೋಡಿ, ಅಪರಿಚಿತವಾದ ಮೈಸೂರಿಗೆ ಬಂದು ಅಲ್ಲಿ ಕಾವ್ಯಾಲಯವನ್ನು ಬೆಳೆಸಲು ಅವರು ಮನಸ್ಸು ಮಾಡಿದರು. ಜೇಬು ಖಾಲಿ. ಆದರೆ, ಹೃದಯದಲ್ಲಿ ತುಂಬಿದ್ದುದು ಆತ್ಮವಿಶ್ವಾಸ ಮತ್ತು ಪ್ರಾಮಾಣಿಕತೆ. ಇವುಗಳ ಆಧಾರದ ಮೇಲೆಯೇ ಪೇಪರ್ ಅಂಗಡಿಗಳಿಂದ ಮುದ್ರಣದ ಕಾಗದವನ್ನು ಸಾಲ ತಂದರು. ವೆಸ್ಲಿ ಮತ್ತು ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಪ್ರೆಸ್ಸುಗಳಲ್ಲಿ ಸಾಲದ ಆಧಾರದ ಮೇಲೆ ಪುಸ್ತಕ ಮುದ್ರಿಸಿ, ಆ ಮೂಲಕ ಪ್ರತಿಷ್ಠಿತ ಪ್ರಕಾಶನ ಸಂಸ್ಥೆ ಕಟ್ಟಿದರು. ಇದು ಸೋಜಿಗವಾದರೂ ವಾಸ್ತವವೇ ಹೌದು. ಕಾವ್ಯಾಲಯ ಒಂದು ಸಾಧಾರಣ ಸಂಸ್ಥೆಯಾಗಿರದೆ ತನ್ನ ಶ್ರೇಷ್ಠತೆಯಿಂದಾಗಿ ಅಪೂರ್ವವಾದ ಹೆಸರನ್ನು ಗಳಿಸಿತು. ಚಿದಂಬರಂ ಅವರ ಆಪ್ತ ವಲಯದಲ್ಲಿ ಒಬ್ಬರಾಗಿದ್ದ ಪ್ರೊ. ಎನ್. ಬಾಲಸುಬ್ರಹ್ಮಣ್ಯಂ ಅವರು ''...... ಉನ್ನತ ಧ್ಯೇಯ ಹೊಂದಿರುವ ಸಹೃದಯ ವಿದ್ಯಾವಂತರೊಬ್ಬರು ಗ್ರಂಥ ಪ್ರಕಾಶನವನ್ನು ಕೈಗೊಂಡರೆ ಅದು ಸಾಹಿತ್ಯ ಮತ್ತು ಅಭಿರುಚಿ ಬೆಳೆಸಲು ಹೇಗೆ ಸಹಾಯಕವಾಗುತ್ತದೆ ಎನ್ನುವುದಕ್ಕೆ ನಿದರ್ಶನ ಅವರು ಸ್ಥಾಪಿಸಿದ ಕಾವ್ಯಾಲಯ. ಸ್ಥಾಪಿತವಾದ ಕೆಲವೇ ವರ್ಷಗಳಲ್ಲಿ ಅದು ಪ್ರಕಾಶನ ರೀತಿ ಮತ್ತು ಪ್ರಕಟಿತ ಗ್ರಂಥಗಳ ಗುಣಗಳ ದೃಷ್ಟಿಯಿಂದ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿಗೆ ಸಮವೆಂದು ಖ್ಯಾತಿಗಳಿಸಿತು. ಅದರ ಗ್ರಂಥಕಾರರ ಪಟ್ಟಿಯಲ್ಲಿ ಸೇರಿರುವುದೇ ಅನೇಕ ಲೇಖಕರಿಗೆ ಹೆಮ್ಮೆಯ ವಿಷಯವಾಗಿತ್ತು. ಇದಕ್ಕೆ ಕಾರಣ ಚಿದಂಬರಂ ಅವರ ಸುಸಂಸ್ಕೃತ ವ್ಯಕ್ತಿತ್ವ , ವಿದ್ಯಾಭ್ಯಾಸದ ಕಾಲದಲ್ಲಿ ಬಿ.ಎಂ.ಶ್ರೀ ಮತ್ತು ಹಿರಿಯಣ್ಣನವರ ಪ್ರಭಾವ ಮತ್ತು

ತೀ.ನಂ.ಶ್ರೀ.ಯವರಂಥವರ ಸಹವಾಸ. ನಂತರದ ಮತ್ತೊಂದು ಪ್ರಭಾವ ಡಿ.ವಿ.ಜಿ.ಯವರದು. ತಮ್ಮ ಬರವಣಿಗೆಯನ್ನೇ ಆಗಲಿ, ಇತರರದನ್ನೇ ಆಗಲಿ ತೂಗಿ ನೋಡಲು ಅವರು ಬಳಸುತ್ತಿದ್ದ ಮಾನದಂಡಗಳು ಇವರಿಂದ ರೂಪಿತ ವಾದವೇ. ಪ್ರಕಟಣೆಯ ವಿಷಯದಲ್ಲಿ ಲಾಭಕ್ಕಿಂತಲೂ, ಕೃತಿಯ ಗುಣದ ಕಡೆಗೆ ಒಲವು, ಹಣಕಾಸಿನ ವಿಷಯದಲ್ಲಿ ನಿಷ್ಠುರವಾದ ಪ್ರಾಮಾಣಿಕತೆ, ವ್ಯವಹಾರದಲ್ಲಿ ಎಡೆಬಿಡದ ಸೌಜನ್ಯ, ಸಭ್ಯತೆ, ಹೆಚ್ಚು ಪರಿಚಯವಿಲ್ಲದವರೊಡನೆ ಹೆಚ್ಚು ಮಾತಿಲ್ಲ...'' ಎಂದು ಹೇಳಿರುವ ಮಾತುಗಳು ಚಿದಂಬರಂ ಅವರ ವ್ಯಕ್ತಿತ್ವವನ್ನೂ, ಕಾವ್ಯಾಲಯದ ಮಹತ್ವವನ್ನೂ ನಿಸ್ಸಂಶಯವಾಗಿ ತಿಳಿಸುತ್ತವೆ.

ಚಿದಂಬರಂ ಅವರು ಹತ್ತು ಹಲವು ಲೇಖಕರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಅವರ ಮನೆಗೆ ಬಂದುಹೋಗುವವರ ಸಂಖ್ಯೆಯೂ ಕಮ್ಮಿ ಏನಿರಲಿಲ್ಲ. ಕನ್ನಡದ ಪ್ರಸಿದ್ಧ ಹಾಡುಗವಿ ಕೆ.ಎಸ್. ನರಸಿಂಹಸ್ವಾಮಿಗಳಿಗೂ ಚಿದಂಬರಂ ಅವರಿಗೂ ನಿಕಟಸ್ನೇಹ. ಅವರ 'ಮೈಸೂರು ಮಲ್ಲಿಗೆ'ಯನ್ನು ಹೊರತುಪಡಿಸಿ ಉಳಿದೆಲ್ಲ ಕೃತಿಗಳನ್ನೂ ಕಾವ್ಯಾಲಯದ ಮೂಲಕ ಚಿದಂಬರಂ ಪ್ರಕಟಿಸಿದರು. ಕೆ.ಎಸ್. ನರಸಿಂಹಸ್ವಾಮಿ ವಾಸವಿದ್ದುದು ಮೈಸೂರಿನ ಜಯನಗರದ ಕಾವ್ಯಾಲಯದ ಎದುರು ಮನೆಯಲ್ಲಿ. ಹಾಗಾಗಿ, ಈ ಲೇಖಕ - ಪ್ರಕಾಶಕರ ಸನಿಹ, ಗೆಳೆತನ ಇನ್ನಷ್ಟು ನಿಕಟವಾದವು. ಪ್ರತಿದಿನವೂ ತಪ್ಪದೆ ಕೆ.ಎಸ್. ನರಸಿಂಹಸ್ವಾಮಿಯವರ ಹಾಜರಿ ಕಾವ್ಯಾಲಯದಲ್ಲಿತ್ತು. ಆ ದಿನಗಳಲ್ಲು (೧೯೫೦ರ ದಶಕ) ದುಡ್ಡಿನ ಕೊರತೆಯಿಂದಾಗಿ ಹಾಡುಗವಿ ಬಳಲುತ್ತಿದ್ದಾಗ ನೆರವಿಗೆ ಬರುತ್ತಿದ್ದವರು ಚಿದಂಬರಂ. ಅದು ವ್ಯವಹಾರಕ್ಕಿಂತ ಮಿಗಿಲಾಗಿ ಸ್ನೇಹದ ಪ್ರತೀಕವೇ ಆಗಿರುತ್ತಿತ್ತು.

ಚಿದಂಬರಂ ಅವರ ಸ್ನೇಹವಲಯದಲ್ಲಿ ಇನ್ನೊಂದು ಮುಖ್ಯವಾದ ಹೆಸರು ಡಿ.ವಿ. ಗುಂಡಪ್ಪನವರದು. ಭಾರತೀಯ ಸಂಸ್ಕೃತಿಯ ಚಿಂತಕರಾಗಿ, ಕವಿಯಾಗಿ ಹೆಸರಾಗಿದ್ದ ಗುಂಡಪ್ಪನವರು ಮೊದಮೊದಲು ಪರಿಚಯವಾಗಿದ್ದುದು ಕೇವಲ ಒಬ್ಬ ಲೇಖಕರಾಗಿ. ತಮ್ಮ ಕೆಲಸಕಾರ್ಯಗಳಲ್ಲಿ ಖಚಿತತೆ ಮತ್ತು ಖಂಡಿತತ್ವವನ್ನು ರೂಢಿಸಿ ಕೊಂಡಿದ್ದ ಗುಂಡಪ್ಪನವರ ಕೃತಿಗಳ ಮುದ್ರಣ ಬೆಂಗಳೂರಿನಲ್ಲಿ ಸಮರ್ಪಕವಾಗಿ ಆಗದಿದ್ದಾಗ, ಅವರು ಮೈಸೂರಿನ ಕಾವ್ಯಾಲಯದತ್ತ ಹೊರಳಿದರು. ಕಾವ್ಯಾಲಯ ದಿಂದ ಅವರ ಕೃತಿಗಳು ಒಂದೊಂದಾಗಿ ಹೊರಬರಲು ಪ್ರಾರಂಭವಾದವು. ತಪ್ಪಿಲ್ಲದ ಮುದ್ರಣ, ಅಂದವಾದ ವಿನ್ಯಾಸ ಮತ್ತು ಅದಕ್ಕಿಂತ ಮಿಗಿಲಾಗಿ ಚಿದಂಬರಂ ಅವರ ಸ್ನೇಹಶೀಲ ವ್ಯಕ್ತಿತ್ವ ಅವರನ್ನು ಇನ್ನಷ್ಟು ಹತ್ತಿರಕ್ಕೆ ತಂದಿತು. ಅವರಿಬ್ಬರ ಭೇಟಿ ಹೆಚ್ಚಾದಂತೆ ಸಮಾನ ಆಸ್ಥೆ ಮತ್ತು ಗುಣವಿಶೇಷಗಳು ಇಬ್ಬರೂ ಇನ್ನಷ್ಟು ಹತ್ತಿರಕ್ಕೆ ಬರಲು ಸಹಾಯ ವಾಯಿತು. ಡಿ.ವಿ. ಗುಂಡಪ್ಪನವರು ಚಿದಂಬರಂ ಅವರ

ಕುಟುಂಬದ ಗೆಳೆಯ ರಾದರು (Family friend). ಚಿದಂಬರಂ ಅವರ ಮನೆಯ ಶುಭಕಾರ್ಯಗಳಿಗೂ ಬಂದು ಹೋಗುತ್ತಿದ್ದರು. ಮಾತ್ರವಲ್ಲ, ಒಂದೆರಡು ಬಾರಿ ಮೈಸೂರಿನ ಮನೆಗೂ ಬಂದು ಹೋದರು. ಅಪೂರ್ವ ಗುಣವಿಶೇಷಗಳ ಆ ಇಬ್ಬರು ಕೊನೆಯವರೆಗೂ ದೇಹವೆರಡು ಮನವೊಂದೆಂಬಂತೆ ಬಾಳಿದರು. ಈ ಸ್ನೇಹಸಂಪತ್ತಿಗೆ ಅವರಿಬ್ಬರ ವಯಸ್ಸಿನ ಅಂತರವೇನೂ ಅಡ್ಡಿ ಬರಲಿಲ್ಲ.

ನಾದ ಗಾರುಡಿಗ ದ.ರಾ. ಬೇಂದ್ರೆಯವರು ಬಂದರಂತೂ ಮನೆ ಹಾಡಿನಿಂದ ಗುಂಯ್‌ಗುಡುತ್ತಿತ್ತು. ಹಾಗೆಯೇ ಮಾತು ಕೂಡ ತುಂಬಿಹೋಗುತ್ತಿತ್ತು. ಬೇಂದ್ರೆಯವರ 'ನಾಕು ತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಬಂದಾಗ, ಅವರಿಗೆ ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ಒಂದು ಸನ್ಮಾನವನ್ನು ಏರ್ಪಡಿಸಲಾಗಿತ್ತು. ಸಮಾರಂಭ ಮುಂಗಿದ ಮೇಲೆ ಅವರು ಮನೆಗೆ ಬಂದು ಹೋಗಿದ್ದರು. ಯಾವುದೇ ಲೇಖಕನೊಂದಿಗೆ ಒಮ್ಮೆ ಸ್ನೇಹ ಕುದುರಿದರೆ ಅಷ್ಟು ಸುಲಭವಾಗಿ ಬಿಟ್ಟುಕೊಡುವ ಸ್ವಭಾವ ಚಿದಂಬರಂ ಅವರದಾಗಿರಲಿಲ್ಲ. ಅವರನ್ನು ಚೆನ್ನಾಗಿ ಬಲ್ಲ ಎ.ಎನ್. ಮೂರ್ತಿರಾವ್ ಅವರು ಹೀಗೆ ತಿಳಿಸುತ್ತಾರೆ : "....ಅವರು ವಾಚಾಳಿಯಲ್ಲದಿದ್ದರೂ ಸಂಘಜೀವಿ. ತೀ.ನಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಚಾರ್, ಶಿವರಾಮಶಾಸ್ತ್ರಿ, ಬಿ.ಎಸ್. ಕೇಶವನ್, (೧೯೩೦ರ ನಂತರ) ನಾವು ಹೆಚ್ಚು ಕಡಿಮೆ ಪ್ರತಿದಿನವೂ ಸೇರುತ್ತಿದ್ದುದುಂಟು. ಕುವೆಂಪುರವರಂತೂ ಚಿದಂಬರಂ ಅವರಿಗೆ ಹಳೆಯ ಸ್ನೇಹಿತರು. ಆರನೆಯ ದಶಕದಲ್ಲಿ ಮತ್ತು ಅಲ್ಲಿಂದಾಚೆಗೆ, ಆ ವೇಳೆಗೆ ನಮ್ಮ ಕಾಮನ್‌ರೂಮ್ ಗುಂಪು ಚೆದುರಿಹೋಗಿತ್ತು. ಚಿದಂಬರಂರವರನ್ನು ಕಂಡವರಿಗೆ 'ಅವರು ಸಂಘಜೀವಿ, ಹಾಸ್ಯಪ್ರಿಯರು' ಎಂದರೆ ಆಶ್ಚರ್ಯವಾಗ ಬಹುದೇನೋ. ಆದರೂ ಅದು ನಿಜ. ನಮ್ಮ ಕಾಮನ್‌ರೂಮ್ ಗುಂಪಿನ ಹುಚ್ಚು ಹಾಸ್ಯದಲ್ಲೆಲ್ಲಾ ಅವರೂ ಅನೇಕ ವೇಳೆ ಭಾಗಿಗಳು. ಅನಿರೀಕ್ಷಿತವಾಗಿ ಆಗಾ ಮೆಲ್ಲಗೆ ಅವರ ಚಟಾಕಿಯೂ ಕೇಳಿಬರುತ್ತಿತ್ತು. ಆದರೆ ಬಹುಮಟ್ಟಿಗೆ ಅವರ ಪಾತ್ರ ಹಾಸ್ಯಕ್ಕೆ ಪುಷ್ಟಿಕೊಡುವುದು ಮತ್ತು ರಸಿಕ ಸಹಜವಾದ ಆಸ್ವಾದನೆ."

ಚಿದಂಬರಂ ಅವರ ವ್ಯವಹಾರದಲ್ಲಿ ಹಣ ಬಳಕೆಯಾಗುತ್ತಿತ್ತು, ನಿಜ. ಆದರೆ, ಅದು ಕೇವಲ ಹಣಗಳಿಕೆಗಾಗಿ ಅಲ್ಲ, ಬದಲಾಗಿ, ಜನತೆಯಲ್ಲಿ ಸದಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಮತ್ತು ಸ್ನೇಹಶೀಲ ವಾತಾವರಣವೊಂದನ್ನು ಹುಟ್ಟುಹಾಕುವುದಕ್ಕಾಗಿ ಮಾತ್ರ.

■

# ಶಿಸ್ತು

ಕೂಡಲಿ ಚಿದಂಬರಂ ಅಂದರೆ ಶಿಸ್ತು. ಶಿಸ್ತು ಅಂದರೆ ಕೂಡಲಿ ಚಿದಂಬರಂ ಎರಡೂ ಅಭಿನ್ನ. ಈ ಬಗೆಯಲ್ಲಿ ಚಿಕ್ಕಂದಿನಿಂದಲೂ ಬದುಕನ್ನು ರೂಢಿಸಿಕೊಂಡಿದ್ದ- ಹಲವೊಮ್ಮೆ ಮಧ್ಯರಾತ್ರಿಯವರೆಗೂ ನಡೆಯುತ್ತಿತ್ತು ನಿಧಾನವಾಗಿ ಮೂಲ ಹಸ್ತಪ್ರತಿಯೊಡನೆ ತಾಳೆ ನೋಡಿ, ಅಕ್ಷರ ಅಕ್ಷರವನ್ನೂ ಎಚ್ಚರದಿಂದ ಗಮನಿಸಿ, ಕರಡು ತಿದ್ದುವುವುದರಿಂದಲೇ ಅವರು ತಮ್ಮ ಪುಸ್ತಕ ಪ್ರಕಾಶನ ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಯಿತು. ಚಿದಂಬರಂ ಅವರ ಶಿಸ್ತು ಹೊರಗಿನ ಪ್ರಭಾವದಿಂದ ಬಂದದ್ದಲ್ಲ; ಅದು ಒಳಗಿನ ಒತ್ತಡದಿಂದ ಮೂಡಿಬಂದದ್ದು.

ಪ್ರೌಢಶಾಲೆಯಲ್ಲಿ ಓದುವ ದಿನಗಳಿಂದಲೂ (ಬಹುಶಃ ಅದಕ್ಕೂ ಹಿಂದಿನಿಂದಲೂ) ನಿಯತವಾಗಿ ತಮ್ಮ ಪಾಲಿನ ಕೆಲಸಗಳನ್ನು ಮಾಡಿಕೊಂಡು ಬಂದ ಅವರು, ಮುಂದಿನ ದಿನಗಳಲ್ಲಿ ಅದನ್ನೇ ಬಾಳಿಬದುಕಿದರು. ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ಗೌ|| ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುವಲ್ಲಾಗಲಿ, ಕಾವ್ಯಾಲಯವನ್ನು ಗೆಳೆಯರೊಂದಿಗೆ ಹುಟ್ಟುಹಾಕಿ ಬೆಳೆಸಿದ ಸಂದರ್ಭದಲ್ಲಾಗಲಿ ಅವರು ಹೇಗೆ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂಬುದನ್ನು ಅವುಗಳ ಅವಲೋಕನದಿಂದ ನಾವು ಅರ್ಥಮಾಡಿಕೊಳ್ಳಬಹುದಾಗಿದೆ.

ಮತ್ತೆ ಮೈಸೂರಿನಲ್ಲಿ ಕಾವ್ಯಾಲಯವನ್ನು ಪ್ರತಿಷ್ಠಾಪಿಸ ಹೊರಟಾಗಲು ಅವರಿಗೆ ನೆರವಿಗೆ ಬಂದುದು ಶಿಸ್ತು, ಶ್ರದ್ಧೆ ಮತ್ತು ಪ್ರಾಮಾಣಿಕತೆಗಳೇ ಅವುಗಳ ಬೆಂಬಲದಿಂದಲೇ ಕಾವ್ಯಾಲಯದ ವ್ಯವಹಾರಕ್ಕೆ ಅಗತ್ಯವಾದ ಸಂಪನ್ಮೂಲವನ್ನು ಕ್ರೋಡೀಕರಿಸಿಕೊಳ್ಳಲು ಸಾಧ್ಯವಾಯಿತು ಹೇಗೆ ಎಂಬುದನ್ನು ಈ ಹಿಂದೆ ತಿಳಿಸಲಾಗಿದೆ.

'ಸರಳ ಜೀವನ ಮತ್ತು ಅತ್ಯುನ್ನತ ಧ್ಯೇಯ' - ಇವು ಅವರ ಜೀವನದ ಪ್ರಧಾನ ಲಕ್ಷಣಗಳಾಗಿದ್ದವು. ಅವುಗಳಿಗೆ ಭಂಗ ಬಂದಾಗಲೆಲ್ಲ ಅವರು ತಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆಯನ್ನು ದಾಖಲಿಸಿದ್ದಾರೆ. ವಕೀಲಿ ವೃತ್ತಿ ಮಾಡುವಾಗ ಅನ್ಯದಾರಿ ಹಿಡಿಯಬೇಕಾಗಿ ಬಂದಾಗ ಅದನ್ನು ಒಪ್ಪದೆ ಆ ವೃತ್ತಿಗೆ ವಿದಾಯ ಹೇಳಿದ್ದಾರೆ. ತೀರ್ಥಹಳ್ಳಿಯಲ್ಲಿ ಬ್ಯಾಂಕಿನ ಆಡಳಿತ ವ್ಯವಸ್ಥೆಯಲ್ಲಿ ಅಸಹಜ ಕ್ರಿಯೆಗಳು ನಡೆದಾಗ ಆ ಕೆಲಸಕ್ಕೆ ರಾಜಿನಾಮೆ ನೀಡಿದ್ದಾರೆ.

ಮೈಸೂರಿನ ಸಹಕಾರಿ ಸಂಘದಲ್ಲಿ ಚುನಾಯಿತ ಸದಸ್ಯರ ಒತ್ತಾಸೆಗಳಿಗೆ ಮಣಿಯದೆ ಆ ಕೆಲಸಕ್ಕೆ ರಾಜೀನಾಮೆ ನೀಡಿದ್ದಾರೆ. 'ಹೇಗೊ ಪುಸ್ತಕ ಮುದ್ರಣವಾದರೆ ಸಾಕು' ಎಂಬ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅಧಿಕಾರಿಗಳ ಮಾತಿಗೆ ಸೊಪ್ಪು ಹಾಕದೆ 'ಹೀಗೇ ಮುದ್ರಣ ಆಗಬೇಕು' ಎಂದು ಪಟ್ಟು ಹಿಡಿದು, ಸಾಧ್ಯವಾಗದೇ ಹೋದಾಗ ಅದಕ್ಕೂ ರಾಜೀನಾಮೆ ನೀಡಿ ತಮ್ಮ ಶಿಸ್ತು ಮತ್ತು ಪ್ರಾಮಾಣಿಕತೆಗಳನ್ನು ಮೆರೆದಿದ್ದಾರೆ. ವಾಸ್ತವವಾಗಿ ಅವರು ಆ ದಿನಗಳಲ್ಲಿ ಬಡತನದ ನೆರಳಿನಲ್ಲಿ ಬದುಕನ್ನು ಸಾಗಿಸುತ್ತಿದ್ದರು. ಹಾಗೆಂದು ಅವರು ಎಲ್ಲೂ ರಾಜಿ ಮಾಡಿ ಕೊಳ್ಳಲಿಲ್ಲ, ಸಬೂಬು ಹೇಳಿಕೊಂಡು ಕಾಲಹರಣ ಮಾಡಲಿಲ್ಲ. ಆ ಮೂಲಕ ಶಿಸ್ತು ಮತ್ತು ಪ್ರಾಮಾಣಿಕತೆಗಳನ್ನೊಳಗೊಂಡ ವ್ಯಕ್ತಿಗೆ ಬಡತನ ಒಂದು ನೆಪವಾಗುವುದಿಲ್ಲ ಎಂದು ಸಾಬೀತುಪಡಿಸಿದರು. ಇದೊಂದು ಅಪೂರ್ವವಾದ ಗುಣ ಮತ್ತು ಶಕ್ತಿ ಎಂದೇ ನಾವು ಅರ್ಥಮಾಡಿಕೊಳ್ಳಬೇಕಿದೆ.

ಮೈಸೂರಿನಲ್ಲಿ ಅವರ ದಿನಚರಿ ನಿಗದಿತ ಲಯದಲ್ಲಿ ಸಾಗುತಿತ್ತು. ರಾತ್ರಿ ಕಾರ್‍ಯಾಲಯ ಪ್ರಕಟಣೆಗಳ ಕರಡು ತಿದ್ದುವುದು; ಹಲವೊಮ್ಮೆ ಮಧ್ಯರಾತ್ರಿಯವರೆಗೂ ನಡೆಯುತ್ತಿತ್ತು. ನಿಧಾನವಾಗಿ ಮೂಲ ಹಸ್ತಪ್ರತಿಯೊಡನೆ ತಾಳೆನೋಡಿ, ಅಕ್ಷರ ಅಕ್ಷರವನ್ನೂ ಎಚ್ಚರದಿಂದ ಗಮನಿಸಿ, ಕರಡು ತಿದ್ದುವುದು. ಆಮೇಲೆ ಮಲಗುವುದು. ಬೆಳಿಗ್ಗೆ ಬೇಗನೆ ಎದ್ದು ಅಸಂಬಂಧಿತ ಬಾಕಿ ಕೆಲಸಗಳೇನಾದರೂ ಇದ್ದರೆ ಅವನ್ನು ಪೂರೈಸಿ, ಸ್ನಾನ, ತಿಂಡಿ ಮುಗಿಸಿ, ಆನಂತರ ಪ್ರೆಸ್ಸಿಗೆ ಹೋಗುತ್ತಿದ್ದರು. ಪ್ರಕಾಶನದ ಹೆಚ್ಚಿನ ಪುಸ್ತಕಗಳು ರಾಮರಾವ್ ಪ್ರೆಸ್ಸಿನಲ್ಲಿ (ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್; ಕೆಲವು ವೆಸ್ಲಿ ಪ್ರೆಸ್ಸಿನಲ್ಲಿ) ಅಚ್ಚಾಗುತ್ತಿದ್ದವು. ಪ್ರತಿದಿನ ಬೆಳಿಗಿನ ೭.೩೦ಕ್ಕೆ ಮನೆಯಿಂದ ಹೊರಟು ಪ್ರೆಸ್ ತಲುಪುತ್ತಿದ್ದರು. ಕಾರಣ, ಬೆಳಗಿನ ೧೧ರ ಒಳಗೆ ಕರಡು ತಿದ್ದುಪಡಿ (proof correction) ಆಗಬೇಕಾಗುತ್ತಿತ್ತು. ಈ ನಡುವೆ ಅಂಚೆ ಕಛೇರಿಯ ಕೆಲಸ, ಬ್ಯಾಂಕಿನ ಕೆಲಸಗಳನ್ನು ಮುಗಿಸುತ್ತಿದ್ದರು. (ಪಾರ್ಸೆಲ್ ಕಳಿಸುವುದು, ವಿ.ಪಿ.ಪಿ. ಬ್ಯಾಂಕಿನ ಚೆಕ್ಕು ತುಂಬುವುದು ಇತ್ಯಾದಿ). ಮಧ್ಯಾಹ್ನ ೧.೩೦ರಿಂದ ೨ರವರೆಗೆ ಮನೆಗೆ ಹಿಂದಿರುಗುತ್ತಿದ್ದರು. ಊಟವಾದ ನಂತರ ೩.೩೦ರವರೆಗೆ ವಿಶ್ರಾಂತಿ. ಎದ್ದಾದ ಮೇಲೆ ಒಂದು ಲೋಟ ಕಾಫಿ ಕುಡಿದು, ತಿರುಗಿ ಪ್ರಕಟಣೆಯ ಕೆಲಸಗಳಲ್ಲಿ ತೊಡಗಿಕೊಳ್ಳು ತ್ತಿದ್ದರು. ಹಸ್ತಪ್ರತಿಗಳ ವೀಕ್ಷಣೆ, ಕರಡು ತಿದ್ದುವುದು, ಲೆಕ್ಕ ಪತ್ರಗಳ ತಪಾಸಣೆ, ಪುಸ್ತಕ ಮಾರಾಟ ಇತ್ಯಾದಿಗಳ ಬಗ್ಗೆ ಗಮನ ಹರಿಸುತ್ತಿದ್ದರು. ಬೇಡಿಕೆ ಬಂದ ಪುಸ್ತಕಗಳ ಪಾರ್ಸೆಲ್ ಸಿದ್ಧಪಡಿಸಿ, ಬಿಲ್ಲು ಸಿದ್ಧಪಡಿಸಿ, ವಿ.ಪಿ.ಪಿ. ಫಾರಂ ತುಂಬಿ ಮಾರನೆಯ ದಿನ ಅಂಚೆ ಕಚೇರಿಗೆ ಹೋಗಿ ಕಳಿಸುತ್ತಿದ್ದರು. ಬೇರೆ ಊರುಗಳಿಂದ ಪುಸ್ತಕ ಬೇಡಿಕೆ ಹೆಚ್ಚು ಬಂದಾಗ, ಅವನ್ನು ಗೋಣಿಚೀಲದಲ್ಲಿ ಪ್ಯಾಕ್ ಮಾಡಿ, (ಬಸ್ಸಿನಲ್ಲಿ ಸಾಗಾಣಿಕೆಯಾದರೆ ಪೇಪರ್ ಪ್ಯಾಕಿಂಗ್ ಸಾಕಾಗುತ್ತಿತ್ತು.) ತಾವೇ ಖುದ್ದು ಅವನ್ನು ಹೊತ್ತುಕೊಂಡು, ಹತ್ತಿರದ ಚಾಮರಾಜಪುರಂ ರೇಲ್ವೆ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಕಳಿಸುತ್ತಿದ್ದರು (ಮುಂದೆ ಮಕ್ಕಳು ನೆರವಾದರು).

ಚಿದಂಬರಂ ಅವರ ಬದುಕು ವ್ಯವಸ್ಥಿತವಾಗಿತ್ತು. ಅವರು ಪ್ರಕಾಶನಕ್ಕೆ ಸಂಬಂಧಿಸಿದ ವಸ್ತುಗಳನ್ನು ವ್ಯವಸ್ಥಿತವಾಗಿ ಜೋಡಿಸಿಡುತ್ತಿದ್ದರು. ಪಾರ್ಸಲ್ ಕಟ್ಟುವ ಕಾಗದ, ಗೋಣಿ ತಾಟು, ಗೋಣಿದಾರ (ಸುತ್ತಲಿದಾರ), ಹೊಲಿಯುವ ದಬ್ಬಳ, ದಪ್ಪಸೂಜಿ, ಕತ್ತರಿ, ಗುರುತಿನ ಇಂಕು, ಇಂಚುಪಟ್ಟಿ ಎಲ್ಲವೂ ನಿಗದಿತ ಸ್ಥಳದಲ್ಲೇ ಇರುತ್ತಿದ್ದವು. ಅವುಗಳಿಗಾಗಿ ಹುಡುಕಾಡುವ ಪ್ರಮೇಯವಿರಲಿಲ್ಲ, ಉದಾಹರಣೆಗೆ ಎಂಟು ಅಡಿಗೊಂದರಂತೆ ಗೋಣಿತಾಟನ್ನು ಕತ್ತರಿಸಿ ಒಂದು ಗೊತ್ತಾದ ಮೂಲೆಯಲ್ಲಿ ನೇತು ಹಾಕುತ್ತಿದ್ದರು. ಪುಸ್ತಕ ಪಾರ್ಸೆಲ್‌ಗೆ ಬೇಕೆಂದಾಗ ಅವು ಸುಲಭವಾಗಿ ಕೈಗೆಟುಕುತ್ತಿದ್ದವು.

ಚಿದಂಬರಂ ಅವರು ಆಯಾದಿನದ ಕೆಲಸವನ್ನು ಆಯಾದಿನವೇ ಮಾಡಿ ಮುಗಿಸುತ್ತಿದ್ದರು. ಎಲ್ಲವೂ ಶಿಸ್ತುಬದ್ಧವಾಗಿ, ಅಂಚೆಯ ಮೂಲಕ ಬಂದ ಕವರನ್ನು ಒಡೆಯುವಾಗಲೂ ಒಂದು ನಿಯಮವನ್ನು ಪಾಲಿಸುತ್ತಿದ್ದರು. ಕವರಿನ ಮುಂಭಾಗವನ್ನು (ಬಾಯಿಯನ್ನು) ಎಚ್ಚರಿಕೆಯಿಂದ ಕತ್ತರಿಸಿ, ಆ ಚೂರನ್ನು ನಿರ್ದಿಷ್ಟವಾದ ಕಸದ ಬುಟ್ಟಿಯಲ್ಲಿ ಹಾಕಿ (ಅವರು ಬಳಸುತ್ತಿದ್ದ ಮೇಜಿನ ಕೆಳಗೆ ಇತ್ತು), ಆನಂತರ ಕತ್ತರಿಯನ್ನು ಅದರ ಸ್ಥಾನದಲ್ಲಿರಿಸಿ, ಆಮೇಲೆ ಕವರಿನ ಒಳಗಿನತ್ತ ಗಮನ ಹರಿಸುತ್ತಿದ್ದರು.

ಮನೆಯಲ್ಲೂ ಅಷ್ಟೇ - ಹೆಚ್ಚು ಮಾತುಕತೆ ಇರಲಿಲ್ಲ, ಗೊಣಗುವ ಸ್ವಭಾವ ವಂತು ಇರಲೇಇಲ್ಲ (ಗೊಣಗುವ ಮನುಷ್ಯ ಎಂದೂ ಪರಿಪಕ್ವ ಕೆಲಸಗಾರನಾಗುವುದಿಲ್ಲ ಎಂದು ನಾವಾದರೂ ಪರಿಭಾವಿಸಬಹುದು). ಮನೆಯಲ್ಲಿದ್ದಾಗ ಪಂಚೆ, ಬನಿಯನ್ (ಕೆ.ಆರ್. ಮಿಲ್‌ನದೇ ಆಗಬೇಕು) ಮತ್ತು ಹೊರಗೆ ಹೋಗುವಾಗ ಪ್ಯಾಂಟು ಮತ್ತು ಬುಷ್ ಕೋಟು ಧರಿಸುತ್ತಿದ್ದರು. ಸರಳ ಆಹಾರದಲ್ಲಿ ಸಂತೃಪ್ತಿಪಟ್ಟುಕೊಳ್ಳುತ್ತಿದ್ದರು. ಸಿಗರೇಟಿನ ಅಭ್ಯಾಸ ಇರಲಿಲ್ಲ, ಮಾತ್ರವಲ್ಲ ಯಾವುದೇ ದುರಭ್ಯಾಸವೂ ಇರಲಿಲ್ಲ, ಹೋಟೆಲ್‌ನಲ್ಲಿ ತಿಂಡಿ, ಕಾಫಿ ಕೂಡ ತಿನ್ನುತ್ತಿರಲಿಲ್ಲ, ಆದರೆ, ವೀಳ್ಯೆದೆಲೆ ತಿನ್ನುವ ಅಭ್ಯಾಸವಿತ್ತು.

ಸಾಹಿತ್ಯ ಮತ್ತು ಇಂಡಾಲಜಿಗಳಿಗೆ ಸಂಬಂಧಿಸಿದ ಪುಸ್ತಕಗಳು ಅವರಲ್ಲಿ ಸಾಕಷ್ಟಿದ್ದವು. ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಪುಸ್ತಕ ಸಂಗ್ರಹ; ಪುಸ್ತಕಗಳನ್ನು ಇಡುವುದಕ್ಕೆ ೩ ೨' X ೫ ೨' ಎತ್ತರದ ಮರದ ಕಪಾಟುಗಳಲ್ಲಿ ಅವನ್ನು ನೀಟಾಗಿ ಜೋಡಿಸಿರುತ್ತಿದ್ದರು. ಒಂದು ಮೇಜು, ಒಂದು ಸ್ಟೂಲು, ಬಟ್ಟೆಸ್ಟ್ಯಾಂಡ್ ಇವಿಷ್ಟೇ ಅವರ ಕೊಠಡಿಯಲ್ಲಿದ್ದ ಮರದ ಸಾಮಾನುಗಳು. ಇಷ್ಟರಿಂದಲೇ ಅವರು ಎಷ್ಟು ಸಾಧ್ಯವೊ ಅಷ್ಟನ್ನು ಸಾಧಿಸಿದರು. ನುಡಿದಂತೆ ನಡೆದು ತಮ್ಮ ಪುಸ್ತಕ ಪ್ರಕಟಣೆಯ ಗುರಿಯನ್ನು ಯಶಸ್ವಿಯಾಗಿ ತಲುಪಿದರು. ಸುಮಾರು ೫೦ ವರ್ಷಗಳ ಕಾಲ ಪುಸ್ತಕ ಪ್ರಕಟಣೆಯ ದೀರ್ಘ ಕಾಲದಲ್ಲಿ ಅವರು ಯಶಸ್ಸಿನ ಹೆಜ್ಜೆಗಳನ್ನು ಇಡುತ್ತಲೇ ಹೋದರು.

■

# ಕುಟುಂಬದ ಸಹಕಾರ

ವ್ಯಕ್ತಿಯೊಬ್ಬನ ಜೀವನ ಸಾಧನೆಯಲ್ಲಿ ಅವನ ಕುಟುಂಬದವರ ಪಾತ್ರವು ಬಹು ಮುಖ್ಯವಾಗಿರುತ್ತದೆ ಎಂಬುದು ಸಾಮಾನ್ಯವಾಗಿ ತಿಳಿದಿರುವಂಥ ಸಂಗತಿಯೇ. ವ್ಯಕ್ತಿಯ ವೃತ್ತಿ, ಜವಾಬ್ದಾರಿಗಳನ್ನು ಅರಿತು – ಅರ್ಥೈಸಿಕೊಂಡು ಅವುಗಳಿಗೆ ಪೂರಕವಾಗಿ ಮನೆಯವರು ನಿಂತಾಗ, ಆತ ತನ್ನ ಗುರಿಸಾಧನೆಯನ್ನು ಕಾಣಲು ಸಾಧ್ಯ. ಈ ದೃಷ್ಟಿಯಿಂದ ಕೂಡಲಿ ಚಿದಂಬರಂರವರು ಅದೃಷ್ಟವಂತರೆಂದೇ ಹೇಳಬೇಕು.

ಚಿದಂಬರಂ ಅವರ ಹೆಂಡತಿ ಶೇಷಮ್ಮನವರು ಮತ್ತು ಮಕ್ಕಳು ಸಂಪೂರ್ಣ ವಾಗಿ ಅವರ ಕೆಲಸ ಕಾರ್ಯಗಳಿಗೆ ಬೆಂಬಲವಾಗಿ ನಿಂತರು. ಆ ಕಾರಣದಿಂದಲೆ ಅವರು ಕಾವ್ಯಾಲಯವನ್ನು ಯಶಸ್ವಿಯಾಗಿ ಕಟ್ಟಲು ಸಹಕಾರಿಯಾಯಿತು ಎಂಬ ಬಗ್ಗೆ ಎರಡನೆಯ ಮಾತಿಲ್ಲ.

ಚಿದಂಬರಂ ಅವರ ಮದುವೆ ಶೇಷಮ್ಮನವರೊಂದಿಗೆ ೧೯೩೩ರಲ್ಲಿ ಆಯಿತು. ತುರುವೆಕೆರೆ ತಾಲ್ಲೂಕು ತಂಗಡ ಗ್ರಾಮದ ಶ್ಯಾನುಭೋಗ್ ವೆಂಕಟರಮಣ ಅಯ್ಯರ್ ಮತ್ತು ಪುಟ್ಟಮ್ಮ ಅವರ ಮಗಳಾದ ಶೇಷಮ್ಮ ಅವರು ಪ್ರಾಥಮಿಕ ನಾಲ್ಕೈದು ತರಗತಿಯವರೆಗೆ ಓದಿದವರು. ಚಿದಂಬರಂ ಅವರು ಶಿವಮೊಗ್ಗದಲ್ಲಿ ವಕೀಲಿ ವೃತ್ತಿ ನಡೆಸುತ್ತ, ಅಲ್ಲಿನ ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿಯಾಗಿ, ಹವ್ಯಾಸಿಯಾಗಿ ಕಾವ್ಯಾಲಯವನ್ನು ಕಟ್ಟುತ್ತಿದ್ದ ಕಾಲದಲ್ಲಿ ಅವರ ಮದುವೆಯಾಯಿತು. ಹೆಚ್ಚು ವಿದ್ಯಾವಂತರಲ್ಲದಿದ್ದರೂ, ಒಬ್ಬ ಸದ್ಗೃಹಿಣಿಯಾಗಿ, ಅತ್ಯಂತ ಸಹನೆಯಿಂದ ತಮ್ಮ ಪಾಲಿನ ಕೆಲಸವನ್ನು ನಿರ್ವಹಿಸಿದರು. 'ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ' ಎಂಬ ಗಾದೆ ಅವರಿಗೆ ಅಕ್ಷರಶಃ ಅನ್ವಯವಾಗುವಂಥದೇ.

ಚಿದಂಬರಂ ಅವರ ಮಕ್ಕಳೂ ಹಾಗೆಯೇ, ತಮ್ಮ ತಂದೆಯ ಕೆಲಸಕ್ಕೆ ಕೈಜೋಡಿಸಿ ನಿಂತು, ಪ್ರಕಾಶನ ಸಂಸ್ಥೆಯ ಏಳ್ಗೆಗಾಗಿ ದುಡಿದರು. ಮಕ್ಕಳು ದೊಡ್ಡವರಾದ ಮೇಲೆ ಅಂದರೆ ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ತಕ್ಕಮಟ್ಟಿಗೆ ನಿರ್ವಹಿಸುವ ಸಾಮರ್ಥ್ಯ ಹೊಂದಿದ ಮೇಲೆ ಪ್ರಕಾಶನ ಸಂಸ್ಥೆಯ ಎಷ್ಟೋ ಕೆಲಸಗಳನ್ನು ಮಾಡುವುದರ ಮೂಲಕ ತಂದೆಯ ಬೆಂಬಲಕ್ಕೆ ನಿಂತರು. ಬೇರೆ ಬೇರೆ ಊರುಗಳಿಗೆ ಪುಸ್ತಕಗಳನ್ನು ರೇಲ್ವೆ ಪಾರ್ಸಲ್ ಮೂಲಕ

ಕಳಿಸುವ ಸಂದರ್ಭದಲ್ಲಿ ತಾವು ಹೇಗೆ ಅವರಿಗೆ ನೆರವಾಗುತ್ತಿದ್ದೆವು ಎಂಬುದನ್ನು ಚಿದಂಬರಂ ಅವರ ಹಿರಿಯ ಮಗ ಈಗ ನಿವೃತ್ತ ಇಂಜಿನಿಯರ್ ಆಗಿರುವ ಸಿ.ಕೆ. ನಾಗರಾಜ್ ಹೀಗೆ ನೆನೆಸಿಕೊಳ್ಳುತ್ತಾರೆ : 'ನಾನು ಮತ್ತು ನನ್ನ ತಮ್ಮ ಶೇಷಾದ್ರಿ ಪುಸ್ತಕದ ಬಂಡ್ಲ್‌ಗಳನ್ನು ಮನೆಯಿಂದ ಹೊತ್ತುಕೊಂಡು. ಹೋಗಿ, ಹತ್ತಿರದ ಚಾಮರಾಜಪುರಂ ರೇಲೆ ಸ್ಟೇಷನ್‌ಗೆ ತಲುಪಿಸುತ್ತಿದ್ದೆವು. ಆ ಬಂಡ್ಲ್‌ಗಳು ತುಂಬ ತೂಕ ಇದ್ದುದರಿಂದ ಒಬ್ಬೊಬ್ಬರೇ ಹೊತ್ತುಕೊಂಡು ಹೋಗುಲು ಆಗುತ್ತಿರಲಿಲ್ಲ, ಆದುದರಿಂದ, ನಾವಿಬ್ಬರೂ ಒಂದು ಒಪ್ಪಂದ ಮಾಡಿಕೊಂಡಿದ್ದೆವು. ಮನೆಯಿಂದ ಒಂದು ಟೆಲಿಫೋನ್ ಕಂಬದವರೆಗೆ ಒಬ್ಬ ಹೊತ್ತುಕೊಂಡು ಹೋಗು ವುದು. ಅಲ್ಲಿಂದ ಇನ್ನೊಂದು ಟೆಲಿಫೋನ್ ಕಂಬದವರೆಗೆ ಇನ್ನೊಬ್ಬ ಹೊರುವುದು. ಹೀಗೆ ಸರದಿಯಂತೆ ಹೊತ್ತು ರೇಲ್ವೆ ಸ್ಟೇಷನ್ ತಲುಪಿ, ರೇಲ್ವೆ ಪಾರ್ಸಲ್‌ಗಳನ್ನು ಕಳಿಸುತ್ತಿದ್ದೆವು' ಅಂತ. ಅದೇ ರೀತಿ, ಪುಸ್ತಕದ ಬಂಡ್ಲ್‌ಗಳನ್ನು ಬೆಂಗಳೂರಿಗೆ ಕಳುಹಿಸಿ, ಅನಂತರ ಹಿಂದಿನಿಂದ ಅಲ್ಲಿಗೆ ಹೋಗಿ, ಅವನ್ನು ಬಿಡಿಸಿಕೊಂಡು, ಬಾಡಿಗೆ ಸೈಕಲ್ಲೊಂದನ್ನು ಪಡೆದು, ಅವುಗಳನ್ನು ಅದರ ಮೇಲೆ ಹೇರಿಕೊಂಡು, ಅಲ್ಲಿನ ಪುಸ್ತಕ ಮಾರಾಟದ ಅಂಗಡಿಗಳಿಗೆ ಪುಸ್ತಕ ಮಾರಾಟ ಮಾಡುವುದು; ವಿಲೇವಾರಿ ಮಾಡುವುದು; ಬೇಡಿಕೆ ಇರುವ ಪುಸ್ತಕಗಳ ಪಟ್ಟಿ ತೆಗೆದುಕೊಳ್ಳುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತ, ಮಕ್ಕಳು ಪುಸ್ತಕ ವ್ಯಾಪಾರಕ್ಕೆ ಸಹಕರಿಸಿದುದು ಶ್ಲಾಘನೀಯ ಸಂಗತಿಯೇ ಹೌದು. (೧೯೫೦ರ ದಶಕ)

ಮೈಸೂರಿಗೆ ಬಂದ ಕೆಲವು ವರ್ಷಗಳವರೆಗೂ ಮನೆಯಲ್ಲಿ ಬಡತನ ತುಂಬಿ ತುಳುಕಾಡುತ್ತಿತ್ತು. ಆದರೆ, ಅದನ್ನು ಬಹಿರಂಗಗೊಳಿಸುವ ಜಾಯಮಾನ ಚಿದಂಬರಂ ಅವರದೂ ಅಲ್ಲ, ಉಳಿದವರೂ ಅಲ್ಲ. ಸಹಿಷ್ಣುತೆ ಮನೆಯವರೆಲ್ಲರ ಗುಣವಾಗಿತ್ತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ರೇಷನ್ ಡಿಪೋದಿಂದ ಅಕ್ಕಿ ಕೊಡುತ್ತಿದ್ದರು. ಡಿಪೋದಲ್ಲಿ ಜವೆಗೋಧಿಯನ್ನು ಕೊಡುವ ಪದ್ಧತಿ ಬಂದಿತು. ಮನೆಯವರು ರೇಷನ್ ಅಕ್ಕಿ, ಗೋಧಿಗಳನ್ನು ತರುತ್ತಿದ್ದರಲ್ಲದೆ, ಬೇರೆಯವರ ಕಾರ್ಡಿನ ಗೋಧಿಯನ್ನು ತಾವೇ ಪಡೆದು ಬಳಸುತ್ತಿದ್ದರು. (ಯಾಕೆಂದರೆ ಆಗ ಗೋಧಿ ಬಳಸುವವರ ಸಂಖ್ಯೆ ತೀರ ಕಮ್ಮಿ ಇತ್ತು) ಆ ರೀತಿ ಹಸಿವನ್ನು ಇಂಗಿಸಿಕೊಳ್ಳುತ್ತಿದ್ದರು.

ಮನೆಯಲ್ಲಿ ಬಟ್ಟೆ ಇಸ್ತ್ರಿ ಮಾಡುವುದಕ್ಕೆ ಅನುಕೂಲವಿರಲಿಲ್ಲ. ಹೊರಗಡೆ ಇಸ್ತ್ರಿ ಮಾಡಿಸಿಕೊಳ್ಳುವುದಕ್ಕೆ ಮಕ್ಕಳ ಬಳಿ ಕಾಸಿರಲಿಲ್ಲ. ಆ ದಿನಗಳಲ್ಲಿ ಜಯ ಚಾಮರಾಜೇಂದ್ರ ಸ್ಕೌಟಿನ ಒಂದು ಶಾಖೆ ಕೃಷ್ಣಮೂರ್ತಿಪುರಂ ಬಡಾವಣೆಯ ವನಿತಾ ಸದನದಲ್ಲಿ ಇತ್ತು. ಮಕ್ಕಳು ಅಲ್ಲಿಗೆ ಹೋಗುತ್ತಿದ್ದರು. ಆಗ ಒಂದು ಪಾತ್ರೆಗೆ ಕೆಂಡಹಾಕಿ, ಅದರಿಂದ ಸ್ಕೌಟಿನ ಬಟ್ಟೆಗಳನ್ನು ಇಸ್ತ್ರಿ ಮಾಡಿ ಹಾಕಿಕೊಂಡು ಹೋಗುತ್ತಿದ್ದರು. ಹಾಗೆಯೇ ಜಾರುಬಂಡೆಯ

ಮೇಲೆ ಜಾರಾಟವಾಡುವಾಗ ನಿಕ್ಕರ್ ಹಿಂಭಾಗ ಹರಿದು ಹೋಗುತ್ತಿದ್ದುದು; ಅದನ್ನು ಎಸ್.ಪಿ. ರಾವ್ ಟೇಲರ್ ಎಂಬುವವರಲ್ಲಿ ತೇಪೆ ಹಾಕಿಸುತ್ತಿದ್ದುದು - ಈ ಎಲ್ಲವನ್ನೂ ಭಾವಪೂರ್ವಕವಾಗಿ ನೆನೆಸಿಕೊಳ್ಳುತ್ತಾರೆ ಸಿ.ಕೆ. ನಾಗರಾಜ್ ಮತ್ತಿತರರು. ಅಷ್ಟೊಂದು ಬಡತನ ಮನೆಯಲ್ಲಿತ್ತು. ತಮಗೆ ಹೊಟ್ಟೆಗಿಲ್ಲದಿದ್ದರೂ ದಂಪತಿಗಳು ಮಕ್ಕಳಿಗೆ ಮಾತ್ರ ಇಲ್ಲ ಅನ್ನುತ್ತಿರಲಿಲ್ಲ, ಅತ್ಯಂತ ಸಹನೆಯಿಂದ ಚಿದಂಬರಂ ಅಂದಿನ ದಿನಗಳಲ್ಲಿ ಜೀವಿಸಿದರು. ಮನೆಯವರು, ಮಕ್ಕಳು ಅವರಿಗೆ ಪೂರಕವಾಗಿರುತ್ತಿದ್ದರು.

ಚಿದಂಬರಂ ಅವರು ಹಗಲೂ ರಾತ್ರಿ ಪ್ರಕಾಶನದ ಕೆಲಸಕ್ಕೆ ತೊಡಗಿಕೊಳ್ಳುತ್ತಿದ್ದು ದರಿಂದ ಮಕ್ಕಳ ಕಡೆಗೆ ಅಷ್ಟಾಗಿ ಗಮನ ಹರಿಸಲಿಲ್ಲ ಎಂಬ ಮಾತೂ ಕೇಳಬರುವುದು ನಿಜವಾದರೂ ಅವರನ್ನೇನು ಅಲಕ್ಷಿಸಿರಲಿಲ್ಲ, ಅವರ ಆಗುಹೋಗುಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಎಲ್ಲ ಮಕ್ಕಳನ್ನೂ ಸಮಾನ ಪ್ರೀತಿಯಿಂದ ಕಾಣುತ್ತಿದ್ದರು. ತಪ್ಪು ಕಂಡಾಗ ತಿದ್ದುತ್ತಿದ್ದರು. ಅಂತಹ ಒಂದು ಸಂದರ್ಭ - ಮಕ್ಕಳು ಒಮ್ಮೆ ಸಿಗರೇಟು ಪ್ಯಾಕಿನ ರಟ್ಟುಗಳಲ್ಲಿ ಕಾರ್ಡ್ ಆಟ ಆಡುತ್ತಿದ್ದರು. ಅದನ್ನು ಗಮನಿಸಿ ಚಿದಂಬರಂ ತಡೆದು ಬುದ್ಧಿವಾದ ಹೇಳಿದರು. ಮಕ್ಕಳು ಅಂದಿನಿಂದ ಆ ಆಟ ಆಡುವುದನ್ನು ನಿಲ್ಲಿಸಿದರು.

ಚಿದಂಬರಂ ಅವರ ನಡವಳಿಕೆಯೇ ಮನೆಮಕ್ಕಳಿಗೆಲ್ಲ ಒಂದು ಮಾದರಿಯಾಗಿತ್ತು ಎಂಬುದೂ ನಿಜ. ಸಿ.ಕೆ. ನಾಗರಾಜ್ ಅವರ ಮಾತುಗಳಲ್ಲೇ ಅದನ್ನು ನೋಡುವುದು ಮೇಲು. "ಯಾವತ್ತೂ ಅಣ್ಣ (ಮಕ್ಕಳು ತಂದೆಯನ್ನು ಅಣ್ಣ ಎಂದು ಕರೆಯುತ್ತಿದ್ದರು.) ನಮಗೆ ಪಾಠ ಹೇಳಲಿಲ್ಲ, ಇದು 'ಮಾಡು' 'ಬೇಡ' ಅಂತ ಹೇಳಲಿಲ್ಲ, ನಿಜಕ್ಕೂ ಅದು ಆಶ್ಚರ್ಯ. ಅವರು ಮಾಡುತ್ತಿದ್ದ ಕೆಲಸಗಳನ್ನು ನೋಡಿ ನಾವು ಕಲಿತೆವು. ಅವರು - ವಿಪರೀತವಾಗಿ ತಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅದೇ ನಮಗೆ ಒಂದು ಮಾದರಿ ಆಗಿತ್ತು. ಅವರು ಮಕ್ಕಳಿಗೆ 'ನೀತಿ ಚಿಂತಾಮಣಿ' 'ಸುಮತಿ ಮದನಕುಮಾರ ಚರಿತೆ' 'ಛತ್ರಪತಿ ಶಿವಾಜಿ' 'ಗ್ರಿಮ್ ಸಹೋದರರ ಕಥೆಗಳು' 'ವಚನ ಭಾರತ' 'ಗೋರಾ' ಇತ್ಯಾದಿ ಪುಸ್ತಕಗಳನ್ನು ನಮಗೆ ಓದಲು ಕೊಡುತ್ತಿದ್ದರು. ಆಗಾಗ ಮಕ್ಕಳಿಗೆ ಕಥೆ ಹೇಳುವ ಅಭ್ಯಾಸವಿತ್ತು" ಮಕ್ಕಳನ್ನೆಲ್ಲ ಕನ್ನಡ ಮಾಧ್ಯಮದಲ್ಲೇ ಓದಿಸಿದ ಚಿದಂಬರಂ, ಉನ್ನತ ವ್ಯಾಸಂಗವನ್ನು ಅವರ ಇಚ್ಛೆಗನುಸಾರವಾಗಿ ಅನುವುಮಾಡಿಕೊಟ್ಟರು.

ಆಗೊಮ್ಮೆ ಈಗೊಮ್ಮೆ ಬಿಡುವಾದಾಗ ಮನೆಮಂದಿಯ ಏಕತಾನತೆಯನ್ನು ಹೋಗಲಾಡಿಸಲೂ ಅವರು ಗಮನ ಹರಿಸದೆ ಇರಲಿಲ್ಲ, ಆದರೆ, ಪದೆಪದೆ ಮನೆಯ-ವರೊಂದಿಗೆ ಪ್ರವಾಸ ಹೋಗಲು ಚಿದಂಬರಂರವರಿಗೆ ಹೇಗೆ ಬಿಡವಿರುತ್ತಿರಲಿಲ್ಲವೊ ಹಾಗೆಯೆ ಹಣಕಾಸಿನ ಪರಿಸ್ಥಿತಿಯೂ ಬಿಟ್ಟುಕೊಡುತ್ತಿರಲಿಲ್ಲ, ಎಣಿಸಿದ ಹಾಗೆ ಮೂರ್‍ನಾಲ್ಕು ಬಾರಿ ಹೊರಗೆ ಕರೆದುಕೊಂಡು ವಿರಾಮವಾಗಿ ಒಂದಿಷ್ಟು ಕಾಲ ಕಳೆದು ಬಂದಿದ್ದುಂಟು.

೧೯೪೧ರಲ್ಲಿ ಒಮ್ಮೆ ಕೃಷ್ಣರಾಜ ಅಣೆಕಟ್ಟೆಗೆ ಮನೆಯವರನ್ನೆಲ್ಲ ಕರೆದುಕೊಂಡು ಹೋಗಿದ್ದರು. ಸಿನಿಮಾ ನೋಡುವ ಹವ್ಯಾಸ ಇಲ್ಲದಿದ್ದರೂ ಮನಸ್ಸಿಗೆ ಹಿಡಿಸಿದ ಚಲನಚಿತ್ರಗಳು ಬಂದಾಗ, ಹೆಂಡತಿ ಮಕ್ಕಳೊಂದಿಗೆ ಹೋದರು. ೧೯೪೯ರಲ್ಲಿ 'ರಾಮರಾಜ್ಯ' ಎಂಬ ಚಿತ್ರವನ್ನು ತೋರಿಸಿ, ಮನೆಗೆ ಬರುವ ದಾರಿಯಲ್ಲಿ ಎಲ್ಲರಿಗೂ ಶರಬತ್ತು ಕೊಡಿಸಿದರು. ೧೯೪೯ರಲ್ಲಿ 'ನೇತಾಜಿ ಸುಭಾಷ್‌ಚಂದ್ರಬೋಸ್' ಚಲನಚಿತ್ರಕ್ಕೆ ಕರೆದುಕೊಂಡು ಹೋಗಿ ಬಂದರು. ಇವೆಲ್ಲ ಸಾಮಾನ್ಯ ಸಂಗತಿಯೇ ಆದರೂ ಅಂದಿನ ಸಂದರ್ಭದಲ್ಲಿ ಮನೆಯವರಿಗೆಲ್ಲ ಮುಖ್ಯವಾದ ಸಂಗತಿಯೇ ಆಗಿತ್ತು ಎಂಬುದನ್ನು ನಾವು ನೆನಪಿನಲ್ಲಿದ್ದುಕೊಂಡರೆ ಸಾಕು.

ಯಾವುದೇ ಸಂಪ್ರದಾಯವನ್ನು ವಿಜೃಂಭಿಸುವುದು ಚಿದಂಬರಂ ಅವರಿಗೆ ಒಗ್ಗದ್ದು. ಆ ಹೆಸರಿನಲ್ಲಿ ಅನಗತ್ಯ ವೆಚ್ಚ ಅವರಿಗೆ ಹಿಡಿಸುತ್ತಿರಲಿಲ್ಲ. ಹಾಗಾಗಿಯೇ ಗಂಡುಮಕ್ಕಳ ಚೌಲೋಪನಯನಗಳನ್ನು ಆದಷ್ಟು ಸರಳವಾಗಿಯೇ ಮಾಡಿ, ತಮ್ಮ ಕರ್ತವ್ಯಗಳನ್ನು ಪೂರೈಸಿದರು. ೧೯೫೨ರಲ್ಲಿ ಮೊದಲನೆಯ ಮಗ ಸಿ.ಕೆ. ನಾಗರಾಜ್‌ಗೆ, ೧೯೫೪ರಲ್ಲಿ ಎರಡನೆಯ ಮಗ ಸಿ.ಕೆ. ಶೇಷಾದ್ರಿಗೆ ಹಾಗೂ ೧೯೫೪ರಲ್ಲೇ ಮೂರನೆಯ ಸಿ.ಕೆ. ಕೃಷ್ಣಮೂರ್ತಿಗೆ ತಂಡಗದಲ್ಲಿ ಉಪನಯನವನ್ನು ಮಾಡಿದರು. ಹೆಣ್ಣು ಮಕ್ಕಳಿಗೂ ಮದುವೆ ಕಾರ್ಯ ಮಾಡಿ ಮುಗಿಸಿದರು. (ವಿವರ ಹಿಂದೆಯೇ ಕೊಟ್ಟಿದೆ.)

ಇಡಿಯಾಗಿ ಹೇಳುವುದಾದರೆ ಮನೆಮಂದಿಯ ನಡುವೆ ಒಂದು ಸೌಹಾರ್ದ ವಾತಾವರಣವಿತ್ತು. ಪರಸ್ಪರ ಸಹಕಾರವಿತ್ತು. ಅನ್ಯೋನ್ಯ ಬದುಕಿಗೆ ಅದು ನಾಂದಿ ಹಾಡಿದಂತೆಯೇ ಕಾವ್ಯಾಲಯ ಪ್ರಕಾಶನವನ್ನು ವ್ಯವಸ್ಥಿತವಾಗಿ ಕಟ್ಟುವಲ್ಲಿ ಸಹಕಾರಿ ಯಾಯಿತು.

■

# ವ್ಯಕ್ತಿ ವೈಶಿಷ್ಟ್ಯ

ಕೊಡಲಿ ಚಿದಂಬರಂ ಅವರು ಬದುಕಿನಲ್ಲೊಂದು ಸ್ಪಷ್ಟವಾದ ಧ್ಯೇಯವೊಂದನ್ನು ಹೊಂದಿದ್ದು ಅದರ ಸಾಧನೆಗಾಗಿ ನಿರಂತರ ಶ್ರಮಿಸಿದರು. ಒಂದು ಕೆಲಸಕ್ಕೆ ಕೈಹಾಕಿದಾಗ ಅದರ ಸಾಧಕ-ಬಾಧಕಗಳನ್ನೆಲ್ಲ ಚೆನ್ನಾಗಿ ವಿವೇಚಿಸಿ ಸ್ಪಷ್ಟವಾದ ನಿಲುವು ತೆಗೆದುಕೊಳ್ಳುತ್ತಿದ್ದರು. ಎಷ್ಟೇ ಕಷ್ಟವಾದರೂ ಅದರಿಂದ ಹಿಂದೆ ಸರಿಯುತ್ತಿರಲಿಲ್ಲ. ಮೈಸೂರಿಗೆ ಬಂದು ನೆಲೆಯೂರಿದ ಸಂದರ್ಭವನ್ನೇ ಈ ಮಾತುಗಳಿಗೆ ಪೂರಕವಾಗಿ ತೆಗೆದುಕೊಳ್ಳಬಹುದು. ಮೈಸೂರಿಗೆ ಬಂದು ಪರಿಚಿತರ ಮನೆಯಲ್ಲಿದ್ದುಕೊಂಡು, ಅಲ್ಲಿಂದ ಬಾಡಿಗೆ ಮನೆಗ ಸ್ಥಳಾಂತರಿಸಿ ಜೀವನವನ್ನು ರೂಪಿಸಿಕೊಳ್ಳಲು ಅವರು ಪಟ್ಟ ದೈಹಿಕ, ಮಾನಸಿಕ ಶ್ರಮ ಎಷ್ಟೇ ಅಗಾಧವಾಗಿದ್ದರೂ ಅವರೊಳಗೆ ತುಡಿಯುತ್ತಿದ್ದ ಸಾಹಿತ್ಯಿಕ-ಸಾಂಸ್ಕೃತಿಕ ಮನಸ್ಸು ಮಾತ್ರ ಲವಲೇಶವೂ ಕುಗ್ಗಲಿಲ್ಲವೆನ್ನುವುದು ಅವರ ಆಂತರಿಕ ಗಟ್ಟಿತನವನ್ನು ಹೇಳುತ್ತದಲ್ಲದೆ ಬೇರೇನೂ ಅಲ್ಲ.

ಬೊಂಬಾಯಿನ ಎಂ.ಕೆ. ಗಾಂಧಿ ಎಂಬುವವರು ರಾಷ್ಟ್ರಕವಿ ಗೋವಿಂದ ಪೈ ಅವರ ಅಪ್ರಕಟಿತ ಲೇಖನಗಳನ್ನು ಪ್ರಕಟಿಸುವಂತೆ ೧೯೬೫-೬೬ರಲ್ಲಿ ಬರೆದ ಒಂದು ಕಾಗದವನ್ನು ಗಂಭೀರವಾಗಿ ತೆಗೆದುಕೊಂಡು, ಕೇರಳದ ಮಂಜೇಶ್ವರಕ್ಕೆ ಹೋಗಿ, ಅವುಗಳನ್ನು ಹುಡುಕಿ, ಸಂಗ್ರಹಿಸಿ ಪ್ರಕಟಿಸಿದುದು, ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅವರಿಗಿದ್ದ ಅತೀವ ಆಸಕ್ತಿಯನ್ನು ಸ್ಪಷ್ಟವಾಗಿ ತಿಳಿಸುತ್ತದಲ್ಲದೆ ಪ್ರಕಾಶಕನಾದವನ ಬದ್ಧತೆಯನ್ನು ಪರೋಕ್ಷವಾಗಿ ಅಭಿವ್ಯಕ್ತಿಸುತ್ತದೆ ಎಂದೇ ನಾವು ಅರ್ಥೈಸಬಹುದಾಗಿದೆ. ಸದಭಿರುಚಿಯ ಕೃತಿಗಳನ್ನು ಪ್ರಕಟಿಸಬೇಕಾಗಿ ಬಂದಾಗ, ಅದರ ಲಾಭ-ನಷ್ಟಗಳನ್ನೂ ಪರಿಗಣಿಸದೆ ಅವರು ಮುಂದಾಗುತ್ತಿದ್ದುದನ್ನು, ಪ್ರಖ್ಯಾತ ಭಾರತೀಯ ತತ್ವಶಾಸಜ್ಞರಾದ ಪ್ರೊ. ಎಂ. ಹಿರಿಯಣ್ಣನವರ ಅಪ್ರಕಟಿತ ಇಂಗ್ಲಿಷ್ ಕೃತಿಗಳನ್ನು ಪ್ರಕಟಿಸುವಲ್ಲಿ ಕಾಣಬಹುದು. ಹಿರಿಯಣ್ಣನವರ ಮೊಮ್ಮಗನ ಬಳಿ ಹೋಗಿ, ಅವರ ಅಪ್ರಕಟಿತ ಇಂಗ್ಲಿಷ್ ಲೇಖನಗಳನ್ನು ಹುಡುಕಿತೆಗೆಸಿ, ಪ್ರಕಟಿಸಿದರು. (ಅವುಗಳನ್ನು ಬೇರೆ ಯಾರೂ ಪ್ರಕಟಿಸುವುದಿಲ್ಲವೆಂಬ ನಂಬಿಕೆ ಅವರಿಗಿದ್ದುದರಿಂದಲೇ ಹೀಗೆ ಮಾಡಿದರು). ಆದರೆ, ಪ್ರಕಟಿತ ಪುಸ್ತಕಗಳಿಗೆ ಮಾರುಕಟ್ಟೆ ಇತ್ತೆ? ಪ್ರೊ. ಎ.ಎನ್. ಮೂರ್ತಿರಾವ್ ಅವರು ೧೯೭೯ರಲ್ಲಿ ಈ ಬಗ್ಗೆ ಕೇಳಿದಾಗ 'ಪ್ರಯೋಜನವಿಲ್ಲ, ಆದರೆ, ಆ ಕೃತಿಗಳನ್ನು ಪ್ರಕಟಿಸಿದ್ದಕ್ಕೆ ನನಗೆ ಅತೀವ ಸಮಾಧಾನವಿದೆ'

ಎಂದು ಹೇಳಿದರು. ಅವರ ಈ ಮಾತು ಭಾರತೀಯ ತತ್ವಶಾಸದ ಬಗ್ಗೆ ಅವರಿಗಿದ್ದ ಕಾಳಜಿಯನ್ನು ಖಚಿತವಾಗಿ ಹೇಳುತ್ತದೆ. ಅಭಿರುಚಿಯ ಮುಂದೆ ಅವರಿಗೆ ಹಣ ಗೌಣವಾಗಿತ್ತು; ಗುಣ ಹಿರಿದಾಗಿತ್ತು. ಚಿದಂಬರಂ ಅವರ ಗ್ರಂಥಪ್ರಕಾಶನ ಜೀವನದಲ್ಲಿ ಇಂಥ ಹಲವಾರು ಪ್ರಸಂಗಗಳನ್ನು ನಾವು ಕಾಣಬಹುದು.

ಚಿದಂಬರಂ ತಮ್ಮ ಪಾಲಿನ ಕೆಲಸವನ್ನು ಶ್ರಮವಹಿಸಿ ಮಾಡುವುದನ್ನು ಜೀವನದಲ್ಲಿ ರೂಢಿಸಿಕೊಂಡಿದ್ದವರು. ಆ 'ಶ್ರಮ' ಬಲವಂತದ್ದಲ್ಲ; ಸಪ್ರೇಮದಿಂದ ಕೂಡಿದ ಕರ್ತವ್ಯದ 'ಶ್ರಮ'. ಹಸ್ತಪ್ರತಿಯ ಪರಿಶೀಲನೆ, ಪುಸ್ತಕ ಮುದ್ರಣ ಹಾಗೂ ಮಾರಾಟ - ಈ ಮೂರೂ ಕೆಲಸಗಳನ್ನು ಒಬ್ಬರೇ ನಿರ್ವಹಿಸಬೇಕಾಗಿ ಬರುತ್ತಿದ್ದುದರಿಂದ ಸಹಜವಾಗೆ ಕೆಲಸದ ಬಾಹುಳ್ಯ ಅವರು ಮೇಲಿರುತ್ತಿತ್ತು ಮತ್ತು ಅವನ್ನೆಲ್ಲ ಸಮರ್ಪಕವಾಗಿ ನಿರ್ವಹಿಸಿದರು ಕೂಡ.

ಅಚ್ಚುಕಟ್ಟು ಅವರ ವ್ಯಕ್ತಿತ್ವ ಇನ್ನೊಂದು ವೈಶಿಷ್ಟ್ಯ ಅನ್ನಬಹುದು. ಲೇಖಕರ ಹಸ್ತಪ್ರತಿಗಳನ್ನು ಸಿದ್ಧಪಡಿಸುವಲ್ಲಿ, ಕರಡು ತಿದ್ದುವಲ್ಲಿ, ಪುಸ್ತಕದ ಹಾಗೂ ಹೊದಿಕೆಯ ವಿನ್ಯಾಸದಲ್ಲಿ - ಈ ರೀತಿ ಪುಸ್ತಕವನ್ನು ಸಿದ್ಧಪಡಿಸುವ ವಿವಿಧ ಹಂತಗಳಲ್ಲಿ ಅವರದು ರಾಜಿಮನೋಭಾವವೇ ಇಲ್ಲ. ಮಾಡುವ ಯಾವುದೇ ಕೆಲಸವಾಗಲಿ ಅದು ಗುಣಾತ್ಮಕವಾಗಿರಬೇಕು; ಶ್ರೇಷ್ಠತೆಯಿಂದ ಕೂಡಿರಬೇಕು ಎಂಬ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿದ್ದರಿಂದಲೇ ಕಾವ್ಯಾಲಯದ ಪುಸ್ತಕಗಳಿಗೆ ಸಾರ್ವಜನಿಕರಲ್ಲಿ ಹೆಚ್ಚಿನ ಆಸಕ್ತಿ ಹುಟ್ಟುವಂತಾಯಿತು ಎಂಬುದು ಅತಿಶಯೋಕ್ತಿಯ ಮಾತಲ್ಲ. ಆ ಕಾರಣದಿಂದಲೇ ಜಿಜ್ಞಾಸು ಲೇಖಕರಾದ ಡಿ.ವಿ.ಜಿ. ತಮ್ಮ ಪುಸ್ತಕಗಳನ್ನು ಕಾವ್ಯಾಲಯ ದಲ್ಲಿ ಪ್ರಕಟಿಸಲು ಇಚ್ಛಿಸಿದ್ದು ಇಲ್ಲಿ ಉಲ್ಲೇಖನೀಯ.

ಲೇಖಕರ ಕೃತಿಗಳನ್ನು ಆಯ್ದುಕೊಳ್ಳುವಾಗ ಅವುಗಳ ಗುಣಮಟ್ಟವನ್ನಷ್ಟೇ ಗಮನಿಸುತ್ತಿದ್ದರಲ್ಲದೆ ಅನ್ಯತ್ರ ಅಲ್ಲ ಎಂಬುದನ್ನು ಶೇಷನಾರಾಯಣರ ಕಾದಂಬರಿ ಪ್ರಕಟಣೆಯಲ್ಲಿ ನಾವು ಕಾಣಬಹುದು. ಅವರೊಬ್ಬ ಪಕ್ಕಾ ಗುಣಗ್ರಾಹಿ ಆಗಿದ್ದರೆಂಬುದರ ಬಗ್ಗೆ ಅನುಮಾನವಿಲ್ಲ. ಕೆಲಸಗಳಲ್ಲಿ ಶ್ರದ್ಧೆ ತೋರಿಸುತ್ತಿದ್ದ ಅವರು ಮೇಲುನೋಟಕ್ಕೆ ಗಂಭೀರವಾಗಿ ಕಂಡರೂ ಅವರೊಳಗೊಂದು ಸ್ನೇಹಸ್ನಿಗ್ಧ ಮನಸ್ಸು ಸದಾ ತುಂಬಿರುತ್ತಿತ್ತು. ಆದುದರಿಂದಲೇ ಅಪಾರವಾಗಿ ಸ್ನೇಹಿತರನ್ನು ಹೊಂದಿರಲು ಅವರಿಗೆ ಸಾಧ್ಯವಾಯಿತು. ತೀ.ನಂ.ಶ್ರೀ.ಯವರೊಂದಿಗೆ ಅವರು ನಡೆಸಿದ ಪತ್ರ ವ್ಯವಹಾರದಲ್ಲಿ ಅವರ ತುಡಿತಮಿಡಿತಗಳನ್ನು ಗಮನಿಸಿದಾಗ ಈ ಮಾತು ಇನ್ನಷ್ಟು ನಿಜವೆನ್ನಿಸುತ್ತದೆ.

ಸಂಘಜೀವಿ, ಹಾಸ್ಯಪ್ರಿಯರಾಗಿದ್ದ ಚಿದಂಬರಂ ಅವರ ಇನ್ನೊಂದು ಮುಖ ಹೆಚ್ಚಾಗಿ ಪರಿಚಿತವೇನಲ್ಲ. ಆದರೆ, ಅವರದು ನವಿರು ಹಾಸ್ಯವೇ ಹೊರತು ಕಟುವಾದದಲ್ಲ; ಅಥವಾ ಶೀಲದ ಎಲ್ಲೆ ಮೀರಿದುದೂ ಅಲ್ಲ. ಅಂತಹ ಒಂದು ಸಂದರ್ಭವನ್ನು ಕುವೆಂಪು ಅವರ

'ನೆನಪಿನ ದೋಣಿ'ಯಿಂದ ಉದಾಹರಿಸ ಬಹುದು. ಕುವೆಂಪು ಅವರ ಮದುವೆಯ ಸಂದರ್ಭ. ಚಿದಂಬರಂ ಅಲ್ಲಿ ಹಾಜರಿದ್ದರು. ಕುವೆಂಪು ಬರೆಯುತ್ತಾರೆ – ''ನಾನು ಉಪನ್ಯಾಸ ಮಾಡಲು ವೇದಿಕೆಗೆ ಏರಲು ಹೋಗುವವನಂತೆ ಡ್ರೆಸ್ಸು ಮಾಡಿಕೊಂಡು ಧಾರೆಗೆ ಹೊರಡಲು ಉಪ್ಪರಿಗೆ ಇಳಿಯುವ ಸಮಯದಲ್ಲಿ ಅಲ್ಲಿಯೇ ಕುಳಿತಿದ್ದ ನನ್ನ ಮಿತ್ರ ಕೂಡಲಿ ಚಿದಂಬರಂ ಅವರು ಎಂದಿನ ದರಹಾಸರಂಜಿತ ಮುಖಭಂಗಿಯಿಂದ 'ರೀ ಪುಟ್ಟಪ್ಪ ಮದುವೆ ಮಂಟಪಕ್ಕೆ ಹೋಗ್ತೇನೆ ಅನ್ನೋದು ಮರೆತು ಎಲ್ಲಿಯಾದರೂ ಉಪನ್ಯಾಸಕ್ಕೆ ಶುರುಮಾಡಿಬಿಟ್ಟೇರೀ?' ಎಂದು ಅಲ್ಲಿ ನೆರೆದಿದ್ದ ಗೆಳೆಯರೆಲ್ಲರಲನ್ನೂ ನಗೆ ಕಡಲಿನಲ್ಲಿ ಮುಳುಗಿಸಿಬಿಟ್ಟರು'' ಎಂದು.

'ಮಾತು ಕಡಿಮೆ ಹೆಚ್ಚು ದುಡಿಮೆ' ಎಂಬ ಮಾತಿಗೆ ಅನ್ವರ್ಥವಾಗುವಂತೆ ಅವರು ತಮ್ಮ ಪಾಲಿನ ಕೆಲಸಗಳನ್ನು ಮಾಡಿದರು ಎಂಬುದು ಅತಿಶಯೋಕ್ತಿಯಲ್ಲ. ಈ ಸಂದರ್ಭದಲ್ಲಿ 'ಕರ್ನಾಟಕದಲ್ಲಿ ಪ್ರಕಾಶನೋದ್ಯಮವನ್ನು ಗೌರವಯುತವಾದ ಮಟ್ಟದಲ್ಲಿ ನಡೆಸಿ, ಪ್ರಕಾಶನವೂ ಸೃಜನಶೀಲ ರಚನೆಯಷ್ಟೇ ಪ್ರತಿಭೆ ಪರಿಶ್ರಮಗಳನ್ನು ಅಪೇಕ್ಷಿಸತಕ್ಕದ್ದು ಎಂಬುದನ್ನು ತೋರಿಸಿಕೊಟ್ಟವರೇ ಶ್ರೀ ಚಿದಂಬರಂ. ಅವರು ಪ್ರಕಾಶನ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಮತ್ತು ಸಜ್ಜನಿಕೆಗಳಿಗೆ ಇನ್ನೊಂದು ಹೆಸರಾಗಿದ್ದರು. ಪುಸ್ತಕ ಪ್ರಕಾಶನವು ಅತ್ಯಂತ ದುಸ್ತರವಾಗಿದ್ದ ಕಾಲದಲ್ಲಿಯೂ ಕುವೆಂಪು, ಪು.ತಿ.ನ., ಡಿ.ವಿ.ಜಿ., ಮೂರ್ತಿರಾವ್ ಇಂತಹ ಪ್ರಥಮ ಶ್ರೇಣಿಯ ಲೇಖಕರ ಕೃತಿಗಳು ಬೆಳಕಿಗೆ ಬಂದದ್ದು ಕಾವ್ಯಾಲಯದಿಂದಲೇ...ಥಳಕುಪಳಕಾಗಲಿ ಅಡ್ಡದಾರಿಯಾಗಲಿ ತಿಳಿಯದ್ದ- ರಿಂದಲೇ ಶ್ರೀ ಚಿದಂಬರಂ ಕುಬೇರರಾಗಲು ಸಾಧ್ಯವಾಗಲಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ಶ್ರೀ ಚಿದಂಬರಂ ಅವರನ್ನು ಭೇಟಿ ಮಾಡುವುದೆಂದರೆ ಸಂಸ್ಕೃತಿ- ಯನ್ನು ಮುಖಾಮುಖಿಯಾಗಿ ಸಂಧಿಸಿದ ಹಾಗೆ ಎಂಬುದು ನನಗೆ ದೊರೆತ ಅನುಭವ' ಎಂಬ ಡಾ|| ಪ್ರಭು ಶಂಕರ ಅವರ ಮಾತುಗಳು ಚಿದಂಬರಂರವರ ವ್ಯಕ್ತಿತ್ವ ವನ್ನು ರೂಪಿಸಿಕೊಡುವಲ್ಲಿ ನಮಗೆ ನೆರವಾಗುತ್ತವೆ (ಗ್ರಂಥಲೋಕ – ಪುಸ್ತಕೋದ್ಯಮದ ಮಾಸಪತ್ರಿಕೆ, ಸಂಪುಟ ೪, ಸಂಚಿಕೆ ೧೦, ಪು.೨; ೧.೧೦.೧೯೮೦.)

■

# ಅನಾರೋಗ್ಯ-ಕೊನೆಯ ದಿನಗಳು

ಗ್ರಂಥ ಪ್ರಕಾಶನದ ಕೆಲಸಕಾರ್ಯಗಳಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡು ಬಂದ ಕರ್ಮಯೋಗಿ ಚಿದಂಬರಂ ಆಗಾಗ ಅನಾರೋಗ್ಯಕ್ಕೆ ತುತ್ತಾದುದುಂಟು ಪುಸ್ತಕ ಪ್ರಕಟಣೆ, ಮಾರಾಟದ ಒತ್ತಡಗಳು ಒಂದು ಬಗೆಯವಾದರೆ, ಮನೆಯ ನಿರ್ವಹಣೆ, ಮಕ್ಕಳ ಭವಿಷ್ಯ - ಈ ಮುಂತಾದ ಸಂಗತಿಗಳು - ಹೀಗೆ ಇಬ್ಬಗೆಯ ಒತ್ತಡಗಳಿಂದ ಅವರು ದಣಿದಿದ್ದರು. ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ಬಳಲಿದ್ದರೂ ತಮ್ಮ ಧ್ಯೇಯದಲ್ಲಿ ಮಾತ್ರ ಎಂದೂ ಹಿಂದೆ ಬೀಳಲಿಲ್ಲ. ಆದರೂ ಸತತ ಪರಿಶ್ರಮ ಅವರನ್ನು ಆಗಾಗ್ಗೆ ಅನಾರೋಗ್ಯಕ್ಕೆ ಒಳಗಾಗುವಂತೆ ಮಾಡುತ್ತಲೇ ಇತ್ತು.

೧೯೪೧ರಲ್ಲಿ ಒಮ್ಮೆ ಟೈಫಾಯಿಡ್‌ಗೆ ಒಳಗಾದರು. ಸುಮಾರು ಐದಾರು ತಿಂಗಳ ಕಾಲ ಅನಾರೋಗ್ಯದಿಂದ ನವೆದರು. ಅದೇ ದಿನಗಳಲ್ಲಿ ತಂಡಗದಲ್ಲಿ ಎರಡು ತಿಂಗಳ ಮಗು ಸಿ.ಕೆ. ಕೃಷ್ಣಮೂರ್ತಿಯೂ ಟೈಫಾಯಿಡ್ ತೊಂದರೆಯಿಂದ ಬಳಲಿದ್ದು ಒಂದು ರೀತಿಯ ಆಕಸ್ಮಿಕವೆನ್ನಬಹುದೇನೊ? ಚಿದಂಬರಂ ಅವರು ಹಾಸಿಗೆ ಹಿಡಿದಿದ್ದಾಗ ಕೆ.ವಿ. ಪುಟ್ಟಪ್ಪನವರು ತಮ್ಮ ಬಾಲ್ಯಗೆಳೆಯನ ಆರೋಗ್ಯ ವಿಚಾರಿಸಲು ಹೆಚ್ಚು ಕಡಿಮೆ ಪ್ರತಿದಿನವೂ ಮನೆಗೆ ಬಂದುಹೋಗುತ್ತಿದ್ದರು. ೧೯೫೫ರಲ್ಲಿ ಅಂದೆ ೫೫ ವರ್ಷವಾಗಿದ್ದಾಗ ಪ್ರೊಸ್ಟ್ರೇಟ್ ಗ್ಲಾಂಡ್ ತೊಂದರೆಯಿಂದ ಬಳಲಿದರು. ೧೯೭೧ರಲ್ಲಿ ಮೈನರ್ ಆಪರೇಷನ್‌ಗೆ ಒಳಗಾದರು. ೧೯೬೬ರಲ್ಲಿ ಎದೆನೋವು ಕಾಣಿಸಿಕೊಂಡಿತು. ಪರೀಕ್ಷಿಸಿದಾಗ ಅಧಿಕ ರಕ್ತದೊತ್ತಡ ಇರುವುದು ಕಂಡು ಬಂದಿತು. ೧೯೬೭ರಲ್ಲಿ ವೈದ್ಯರ ಸಲಹೆಯಂತೆ ಒಂದು ತಿಂಗಳ ಕಾಲ ವಿಶ್ರಾಂತಿ ಪಡೆದರು. ಭಿಲಾಯಿ ನಗರದಲ್ಲಿದ್ದ ಮಗಳು ವಸಂತಲಕ್ಷ್ಮಿ ಮನೆಗೆ ಕೆಲವು ದಿನಗಳ ಕಾಲ ಹೋಗಿದ್ದರು. ಆ ಸಮಯದಲ್ಲೂ ಅವರ ಸಾಹಿತ್ಯಾಭಿರುಚಿಯೇನು ಕಮ್ಮಿಯಾಗಲಿಲ್ಲ. ಅಲ್ಲಿಂದ ಕಲ್ಕತ್ತಕ್ಕೆ ಹೋಗಿ 'ಸಾಹೇಬ್ ಬೇಬಿ ಔರ್ ಗುಲಾಮ್' (ಈ ಕೃತಿ ಚಲನಚಿತ್ರ ವಾಗಿತ್ತು) ಕೃತಿಯ ಲೇಖಕರಾದ ಬಿಮಲ್ ಮಿತ್ರ ಅವರನ್ನು ಕಂಡು ಮಾತನಾಡಿದರು. ಮುಂದೆ ಆ ಕೃತಿಯ ಕನ್ನಡಾನುವಾದವನ್ನು ಕಾವ್ಯಾಲಯದಿಂದ ಅಚ್ಚಿಸಿದರು. ಕಲ್ಕತ್ತದಲ್ಲಿ ಬೇಲೂರು ಮಠ, ಕಾಲಿ ದೇವಾಲಯ ಈ ಮುಂತಾದವುಗಳನ್ನು ನೋಡಿ ಕೊಂಡು, ಆನಂತರ ದುರ್ಗಾಪುರದಲ್ಲಿದ್ದ ಮನಗ ಮನೆಗೆ ಹೋಗಿ, ಅಲ್ಲಿಂಗ ತಿರುಗಿ ಕಲ್ಕತ್ತಕ್ಕೆ ಬಂದು,

ಬೆಂಗಳೂರಿಗೆಲ್ಲ ಟ್ರೈನ್ ಮುಖಾಂತರ ಪ್ರಯಾಣ ಮಾಡಿದರು. ೧೯೭೨ರಲ್ಲಿ ತೀವ್ರವಾಗಿ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದು ಬಂದರು. ಅಲ್ಲದೆ, ಇನ್ನೂ ಕೆಲವಾರು ಸಣ್ಣಪುಟ್ಟ ಅನಾರೋಗ್ಯ ಕಾರಣದಿಂದ ದೈಹಿಕವಾಗಿ ಆಗಿಂದಾಗ್ಗೆ ತೊಂದರೆಗೆ ಒಳಗಾಗುತ್ತಲೇ ಇದ್ದರು.

ಆದರೂ ಚಿದಂಬರಂರವರು ತಮ್ಮ ಜೀವನದ ಕೊನೆಯ ದಿನಗಳನ್ನು ಇದ್ದದ್ದರಲ್ಲಿ ಸಮಾಧಾನಕರವಾಗಿಯೇ ಕಳೆದರೆನ್ನಬಹುದು. ಆ ಹೊತ್ತಿಗೆ ಕೃಷ್ಣಮೂರ್ತಿ, ಸತ್ಯನಾರಾಯಣನ ಹೊರತು ಉಳಿದೆಲ್ಲ ಮಕ್ಕಳ ಮದುವೆಯನ್ನು ಮಾಡಿ ಮುಗಿಸಿದ್ದರು. ಆದರೆ, ತಮ್ಮ ನಂತರ ಕಾವ್ಯಾಲಯದ ಭವಿಷ್ಯವೇನು ಎಂಬ ಬಗ್ಗೆ ಅವರಿಗೆ ಚಿಂತೆಯಿತ್ತು. ಆ ಚಿಂತೆ ಬಲವಾಗಿ ಕಾಡಿತೊ ಎಂಬಂತೆ ತೀವ್ರ ಹೃದಯಾಘಾತಕ್ಕೆ ಒಳಗಾಗಿ ೧೯೮೦ರ ಸೆಪ್ಟೆಂಬರ್ ೧೬ರಂದು ತಮ್ಮ ೭೫ನೆಯ ವಯಸ್ಸಿನಲ್ಲಿ ಈ ಬದುಕಿಗೆ ವಿದಾಯ ಹೇಳಿದರು – 'ಕಾವ್ಯಾಲಯದ ಕರ್ಮಯೋಗಿ' ಕೂಡಲಿ ಚಿದಂಬರಂ.

ಆನಂತರ ಕಾವ್ಯಾಲಯದ ಹೊಣೆಗಾರಿಕೆಯನ್ನು ಸಿ.ಕೆ. ಕೃಷ್ಣಮೂರ್ತಿ ಹೊತ್ತರು. ಅವರಿಗೆ ಬೆಂಬಲವಾಗಿ ಕಿರಿಯ ಸೋದರಿ ಸಿ.ಕೆ. ಪ್ರಭಾ ನಿಂತರು.

■

# ಸಮಾರೋಪ

ಸಾಹಿತ್ಯ-ಸಂಸ್ಕೃತಿಯಲ್ಲಿ ಸದಭಿರುಚಿಯುಳ್ಳ ಒಬ್ಬ ವ್ಯಕ್ತಿ ಪುಸ್ತಕ ಪ್ರಕಾಶನಕ್ಕೆ ತೊಡಗಿಕೊಂಡರೆ ಹೇಗೆ ಉತ್ತಮ ಮಟ್ಟದ ಗ್ರಂಥಗಳನ್ನು ಸಮಾಜಕ್ಕೆ ನೀಡಬಹುದು ಎಂಬುದನ್ನು ಕೂಡಲಿ ಚಿದಂಬರಂರವರು ಕಾವ್ಯಾಲಯದ ಮೂಲಕ ಸಾಬೀತುಪಡಿಸಿದ್ದಾರೆ. ಮಲೆನಾಡಿನ ತುಂಗಭದ್ರಾ ನದಿಗಳ ಕೂಡುಸಂಗಮ ತಟದ ಕೂಡಲಿಯಲ್ಲಿ ಹುಟ್ಟಿದ ಸಜ್ಜನಿಕೆಯ ಸಾಕಾರಮೂರ್ತಿಯಾದ ಚಿದಂಬರಂ ಕೂಡಲಿಯನ್ನು ತಮ್ಮ ಹೆಸರಿನೊಂದಿಗೆ ಅಂಟಿಸಿಕೊಂಡು ಬರವಣಿಗೆ, ಪತ್ರಿಕೋದ್ಯಮ, ಪ್ರಕಟನೋದ್ಯಮ, ಸಂಘಟನೆ (ಶಿವಮೊಗ್ಗ ಕರ್ನಾಟಕ ಸಂಘ ಕಟ್ಟಿದ ಸಂದರ್ಭವನ್ನು ನೆನೆದು)ಗಳನ್ನು ಚತುರತೆಯಿಂದ ನಿರ್ವಹಿಸಿ, ನಿಸ್ಪೃಹತೆಯಿಂದ ದುಡಿದು, ತಮ್ಮ ಪಾಲಿನ ಕೆಲಸಗಳನ್ನು ಜವಾಬ್ದಾರಿಯಿಂದ ಪೂರೈಸಿದ ಆದರ್ಶ ವ್ಯಕ್ತಿಯೂ ಹೌದು, ಕನ್ನಡ ಗ್ರಂಥ ಪ್ರಕಾಶನದ ಆದರ್ಶಪುರುಷರೂ ಹೌದು. ಚಿಕ್ಕಂದಿನಿಂದಲೂ ಮಾಡುವ ಕೆಲಸದಲ್ಲಿ ಶ್ರದ್ಧೆ, ಶಿಸ್ತು, ಪ್ರಾಮಾಣಿಕತೆಗಳನ್ನು ಅವು ತಮ್ಮ ಬದುಕಿನ ಉಸಿರಿನಷ್ಟೇ ಸಹಜವೆಂಬಂತೆ ಮೈಗೂಡಿಸಿಕೊಂಡು ಕರ್ಮಯೋಗಿಯಾಗಿ ಬೆಳೆದು, ಕನ್ನಡ ಗ್ರಂಥ ಪ್ರಕಾಶನದ ಕನ್ನೆಲದಲ್ಲಿ ಸತ್ವಭರಿತವಾದ, ಸಂಪದ್ಭರಿತವಾದ ಬೆಳೆ ತೆಗೆದು 'ಸಹಸ್ರ ಗ್ರಂಥ ಪುರುಷ' (ಗೊರೂರು ರಾಮಸ್ವಾಮಿ ಅಯ್ಯಂಗಾರ್) ಚಿದಂಬರಂ ಸಾಧನೆ ಸಿದ್ಧಿಗಳು ಎಲ್ಲ ಕಾಲಕ್ಕೂ ಅಭಿನಂದನೀಯವೇ ಆಗಿವೆ.

ಹುಟ್ಟಿನಿಂದ ಅಷ್ಟೇನು ಶ್ರೀಮಂತರಲ್ಲದಿದ್ದರೂ ಆತ್ಮ ಸ್ಥೈರ್ಯದ ಬಂಡವಾಳದ ಮೇಲೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿ, ಅಲ್ಲೆಲ್ಲ ಗುಣಾತ್ಮಕವಾದುದನ್ನೇ ಕುಯಿಲು ಮಾಡಿದ, ಅಪೂರ್ವ ಸಹನಾಶೀಲ ಜೀವಿಯಾದ ಚಿದಂಬರಂ, ವ್ಯಕ್ತಿಯೊಬ್ಬ ತನ್ನೊಳಗೆ ಅಂತರ್ಗತವಾಗಿರುವ ಆತ್ಮಸಂಪತ್ತಿನಿಂದಲೇ ಹೇಗೆ ಬೆಳಸು ಮಾಡಬಹುದು ಎಂಬುದಕ್ಕೆ ದಾರಿದೀಪವಾಗಿದ್ದಾರೆ. ತಮ್ಮಿಂದ ಆಗುವುದಿಲ್ಲ ಎಂದು ಗೊಣಗುವ ಬದಲು ತಮ್ಮ ಸಾಮರ್ಥ್ಯದ ಮಿತಿಯಲ್ಲಿ ಅತ್ಯುತ್ತಮವನ್ನು ಸಾಽಸಿ ತೋರಿಸಿದ ಸಾಧಕರಾಗಿ ನಿಂತರು; ಗ್ರಂಥ ಪ್ರಕಾಶನದ ನಂಜನ್ನೆಲ್ಲಾ ಉಂಡು ಗ್ರಂಥ ನಂಜುಂಡೇಶ್ವರನಾಗಿ ಅದರ ಸುಖಸಂತೋಷಗಳನ್ನಷ್ಟೇ ಕನ್ನಡ ಜನತೆಗೆ ಹಂಚಿದರು. ತಿಂಗಳೊಂದರಲ್ಲಿ ೧೫ ಪುಸ್ತಕಗಳನ್ನು ಪ್ರಕಟಿಸಿದ ಗ್ರಂಥ ಸಾಹಸಕ್ಕೂ ಭಾಜನರಾದರು.

ಉತ್ತಮ ಕನ್ನಡ ಬರಹಗಾರರಾಗಿದ್ದರೂ ಅನ್ಯಲೇಖಕರ ಕೃತಿಗಳನ್ನು ಪ್ರಕಟಿಸಿ, ಅವರ ಸಾಹಿತ್ಯ ಪ್ರತಿಭೆಯನ್ನು ಹೊರಜಗತ್ತಿಗೆ ಪರಿಚಯ ಮಾಡಿಕೊಟ್ಟ ನೈಜ ಸಾಹಿತ್ಯ ಉಪಾಸಕರಾದ ಚಿದಂಬರಂ ಔದಾರ್ಯಕ್ಕೆ ಎಲ್ಲೆಯೇ ಇಲ್ಲವೆನ್ನಬಹುದು. 'ಚಿದಂಬರಂ ಸ್ವತಃ ಒಳ್ಳೆಯ ಲೇಖಕರು, ಆದರೆ ಅವರ ಶಕ್ತಿಯ ಬಹುಪಾಲು ಅನೇಕ ಲೇಖಕರನ್ನು ತಿದ್ದಿ ಅವರಿಗೊಂದು ರೂಪ ಕೊಡುವುದರಲ್ಲಿಯೇ ವ್ಯಯವಾಯಿತು' (ಹಾ.ಮಾ.ನಾಯಕ). ಕೆ.ವಿ. ಪುಟ್ಟಪ್ಪ, ಎ.ಸೀತಾರಾಂ, ಭೂಪಾಳಂ ಚಂದ್ರಶೇಖರಯ್ಯ, ಹೆಚ್.ವಿ. ಸಾವಿತ್ರಮ್ಮ ಸಿ. ಕೃಷ್ಣ ಪು.ತಿ. ನರಸಿಂಹಾಚಾರ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹೊಯಿಸಳ, ದೇವಕಿಮೂರ್ತಿ, ತೀ.ನಂ. ಶ್ರೀಕಂಠಯ್ಯ, ಎ.ಎನ್. ಮೂರ್ತಿರಾವ್, ಡಿ.ವಿ. ಗುಂಡಪ್ಪ ಗೋವಿಂದ ಪೈ, ಬಿ.ಜಿ.ಎಲ್. ಸ್ವಾಮಿ, ಎಲ್. ಗುಂಡಪ್ಪ ಈ ಮೊದಲಾದ ಲೇಖಕರ ಮಹತ್ವಪೂರ್ಣ ಕೃತಿಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯ ಸಂಪತ್ತನ್ನು ಬೆಳಗಿದ್ದಾರೆ.

ಕುವೆಂಪು ಅವರ ಮೊದಲ ೫೨ ಪುಸ್ತಕಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯದಲ್ಲಿ ಅವರಿಗೊಂದು ಸುಭದ್ರವಾದ ಸ್ಥಾನ ದೊರಕುವಲ್ಲಿ ಚಿದಂಬರಂ ಅವರ ಪ್ರಯತ್ನ ಕಡೆಗಣಿಸುವಂಥದಲ್ಲ, ಬಾಲ್ಯ ಗೆಳೆಯನ ಸಾಹಿತ್ಯಕೃಷಿಗೆ ನೀರೆರೆದು ಸಮೃದ್ಧವಾಗಿ ಪೋಷಿಸಿದ ಅವರ ಪ್ರಯತ್ನ ಸ್ಮರಣೀಯವಾದುದೇ ಆಗಿದೆ. ಆನಂತರವಷ್ಟೇ ಕುವೆಂಪು ಅವರ ಕೃತಿಗಳು 'ಉದಯರವಿ'ಯ ಮೂಲಕ ಪ್ರಕಟವಾಗತೊಡಗಿದವು. ಹಾಗೆಯೇ ಡಿ.ವಿ. ಗುಂಡಪ್ಪನವರ ಎಲ್ಲ ಕೃತಿಗಳನ್ನೂ ಅಂದಿನಿಂದ ಇಂದಿನವರೆಗೂ ಕಾವ್ಯಾಲಯ ಪ್ರಕಟಿಸುತ್ತ ಬಂದಿದೆ.

ಜನಪ್ರಿಯ ಸಾಹಿತ್ಯ ಪ್ರಕಾರಗಳಿಗೆ ಮನಸೋತು, ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಕನ್ನಡ ಸಾಹಿತ್ಯ ಸಂವರ್ಧನೆಗೆ ಅವರು ನಡೆಸಿದ ಪ್ರಯತ್ನ ಶ್ಲಾಘನೀಯ ವಾದುದೇ. ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ಪ್ರಬಂಧ, ಆತ್ಮಕಥೆ, ವಿದ್ವತ್, ಮಕ್ಕಳ ಸಾಹಿತ್ಯ ಈ ಪ್ರಕಾರಗಳ ಮೌಲಿಕ ಕೃತಿಗಳು ಕಾವ್ಯಾಲಯದ ಘನತೆಯನ್ನು ಹೆಚ್ಚಿಸಿವೆ.

ಗ್ರಂಥ ಪ್ರಕಟಣೆಯಲ್ಲೂ ಅಂದರೆ ಮುದ್ರಣದಲ್ಲೂ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಬಂದುದು ಚಿದಂಬರಂ ಅವರ ಸೌಂದರ್ಯ ಪ್ರಜ್ಞೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ತಪ್ಪಿಲ್ಲದ ಮುದ್ರಣ, ಉತ್ತಮ ವಿನ್ಯಾಸ, ಆಕರ್ಷಕ ಹೊದಿಕೆ (ಮೊದಮೊದಲು ಇರಲಿಲ್ಲ, ಆಮೇಲೆ ರೂಢಿಸಿಕೊಂಡರು), ಇವುಗಳಿಂದ ಕೂಡಿದ ಗ್ರಂಥಗಳು ಗ್ರಾಹಕರನ್ನು ತಮ್ಮತ್ತ ಸೆಳೆಯಲು ಪ್ರಯತ್ನ ನಡೆಸದೆ ಇರಲಿಲ್ಲ.

ಅದೇ ರೀತಿ ಲೇಖಕರೊಂದಿಗೆ ಸ್ನೇಹಸಂವರ್ಧನೆ, ನೀಡುವ ಸಂಭಾವನೆಯ-ಲ್ಲೊಂದು ಪ್ರಾಮಾಣಿಕತೆ ಮತ್ತು ನಿಯತತೆ ಕಾವ್ಯಾಲಯದ ಲೇಖಕ ಬಳಗವನ್ನು ಹೆಚ್ಚಿಸುವಲ್ಲಿ

ನೆರವಾಯಿತೆಂದೇ ಹೇಳಬಹುದು. ಲೇಖಕರೊಂದಿಗೆ ಯಾವ ಲಿಖಿತ ಒಪ್ಪಂದವನ್ನೂ ಮಾಡಿಕೊಳ್ಳದೆ ಪ್ರಾಮಾಣಿಕತೆಯೊಂದನ್ನು ಮಾನದಂಡವನ್ನಾಗಿರಿಸಿಕೊಂಡು ವ್ಯವಹಾರ ನಡೆಸಿದ್ದು ಅವರ ಹಿರಿತನದ ದ್ಯೋತಕವೇ ಹೌದು.

ಲೇಖಕರಾಗಿ ಮಕ್ಕಳ ಅನೇಕ ಕೃತಿಗಳನ್ನು ಪ್ರಕಟಿಸಿದರಲ್ಲದೆ, ಭಾಷಾಂತರಕಾರರಾಗಿಯೂ ಯಶಸ್ವಿಯಾದರು. ಅವರು ಅನುವಾದಿಸಿದ 'ಎವರೆಸ್ಟ್ ವೀರ' ಕೃತಿಗೆ ನ್ಯಾಷನಲ್ ಬುಕ್ ಟ್ರಸ್ಟ್‌ನ ರಾಷ್ಟ್ರೀಯ ಪ್ರಶಸ್ತಿ ಬಂದಿರುವುದು, ಅವರ ಲೇಖನ ಸಾಮರ್ಥ್ಯಕ್ಕೊಂದು ಒರೆಗಲ್ಲೇ ಆಗಿದೆ. ೧೯೮೨ರಲ್ಲಿ ದೆಹಲಿಯ ಸಂಸ್ಥೆಯೊಂದು ಕನ್ನಡದ ಹತ್ತು ಅತ್ಯುತ್ತಮ ಪುಸ್ತಕಗಳ ಪಟ್ಟಿ ಮಾಡಿದಾಗ ಅದರಲ್ಲಿ ಐದು ಕಾವ್ಯಾಲಯ ಪ್ರಕಟಣೆಗಳೆಂಬುದು ಆ ಸಂಸ್ಥೆಯ ಹೆಗ್ಗಳಿಕೆಯೇ ಆಗಿದೆ. 'ಮಂಕುತಿಮ್ಮನ ಕಗ್ಗ' 'ಗೀತಾತಾತ್ಪರ್ಯ' 'ಹಸುರುಹೊನ್ನು' 'ದುರ್ಗಾಸ್ತಮಾನ' ಮತ್ತು 'ಚಿತ್ರಗಳು-ಪತ್ರಗಳು' ಇವೇ ಆ ಐದು ಪುಸ್ತಕಗಳು. ಕಾವ್ಯಾಲಯ ಪ್ರಕಾಶನದ ಪ್ರಕಟಣೆಗಳಿಗೆ ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳ ಹಲವಾರು ಪ್ರಶಸ್ತಿಗಳು ಲಭ್ಯವಾಗಿವೆ.

ಆರ್ಥಿಕ ತೊಂದರೆಯಿಂದ ಎಷ್ಟೇ ಬಳಲಿದರೂ ಅದನ್ನೆಲ್ಲ ಆತ್ಮಸ್ಥೈರ್ಯದಿಂದ ಪರಿಹರಿಸಿಕೊಂಡು ಕನ್ನಡ ಗ್ರಂಥ ಪ್ರಕಟಣೆಯ ಧ್ಯೇಯ ಸಾಧನೆಯಲ್ಲಿ ಯಶಸ್ಸು ಪಡೆದ ಕೂಡಲಿ ಚಿದಂಬರಂ ಆ ಕ್ಷೇತ್ರದ ಸಿದ್ಧಿಪುರುಷರೇ ಆಗಿದ್ದಾರೆ. ಇಂಥ ಸಿದ್ಧಿಪುರುಷನನ್ನು ಕನ್ನಡಿಗರು ಎಂದೂ ಮರೆಯಲಾರರು; ಮರೆಯಬಾರದು.

■

## ಆಕರ


- ಕೂಡಲಿ ಚಿದಂಬರಂ ಅವರ ಮಕ್ಕಳೊಂದಿಗೆ ಸಂದರ್ಶನ
  ಸಂಪರ್ಕ–ಲೇ: ಹಾ.ಮಾ. ನಾಯಕ, ಮಿತ್ರ ಪ್ರಕಾಶನ, ಮೈಸೂರು ೧೯೮೨.
- ಕರ್ನಾಟಕ ಸಂಘ, ಶಿವಮೊಗ್ಗ ಇದರ 'ಮೊದಲ ಐದು ವರ್ಷಗಳು' ವರದಿ. ೧೯೩೬
- 'ವಿಚಾರ ವಾಹಿನಿ' ಮಾಸ ಪತ್ರಿಕೆ.
- ಕಾವ್ಯಾಲಯ : ಪ್ರಕಾಶಕರು : ಸಂ : ಹೊರೆಯಾಲಿ ದೊರೆಸ್ವಾಮಿ, ಪ್ರ: ಅಭಿನವ ಪ್ರಕಾಶನ, ಬೆಂಗಳೂರು – ೫೬೦ ೦೪೦, ೨೦೦೮.
- ಶ್ರೀ ಕೂಡಲಿ ಚಿದಂಬರಂ – ಲೇ. ಡಾ. ಶಿವಾರೆಡ್ಡಿ (ಹಸ್ತಪ್ರತಿ)
- ಸಹಸ್ರ ಗ್ರಂಥ ಪುರುಷ ಕೂಡಲಿ ಚಿದಂಬರಂ – ಲೇ. ಕರ್ನಲ್ ಸಿ.ಕೆ. ಶೇಷಾದ್ರಿ, ಪ್ರ: ಲೇಖಕರೇ, ಜೆ.ಪಿ.ನಗರ ಬೆಂಗಳೂರು–೫೬೦ ೦೭೮.
- ಸಿ.ಕೆ. ಶೇಷಾದ್ರಿ ಅವರ ಇಂಗ್ಲಿಷ್ ಲೇಖನ – Sri Kudli Chidambaram - Founder Kavyalaya.
- ಸಿ.ಕೆ. ನಾಗರಾಜ್‌ರವರ ಗಣಕೀಕೃತ ಹಸ್ತಪ್ರತಿ –


■

## ಅನುಬಂಧ ೧

೧. ಕೂಡಲಿ ಚಿದಂಬರಂ ಅವರ ಜೀವನದ ಮುಖ್ಯ ಸಂಗತಿಗಳು.

೧೯೦೫ ಫೆಬ್ರುವರಿ ೨೫ರಂದು ಶಿವಮೊಗ್ಗ ಜಿಲ್ಲೆ ಕೂಡ್ಲಿಗಿಯಲ್ಲಿ ಜನನ. ತಂದೆ ಕೃಷ್ಣಪ್ಪ ತಾಯಿ ಲಕ್ಷ್ಮಮ್ಮ

೧೯೨೩. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಪದವಿ.

೧೯೨೬ ಪುಣೆಯ ಫರ್ಗ್ಯುಸನ್ ಲಾ ಕಾಲೇಜಿನಿಂದ ಎಲ್‌ಎಲ್.ಬಿ. ಪದವಿ, ಶಿವಮೊಗ್ಗದಲ್ಲಿ ವಕೀಲಿ ವೃತ್ತಿ.

+೧೯೨೮ ಶಿವಮೊಗ್ಗದಲ್ಲಿ ಹವ್ಯಾಸಿ ಪ್ರಕಾಶನ ಸಂಸ್ಥೆ 'ಕಾವ್ಯಾಲಯ' ಸ್ಥಾಪನೆ.

೧೯೩೦ ಶಿವಮೊಗ್ಗ ಕರ್ನಾಟಕ ಸಂಘದ ಸಹಕಾರ್ಯದರ್ಶಿ. ಆನಂತರ ಗೌರವ ಕಾರ್ಯದರ್ಶಿ.

೧೯೩೩. ತಂಗಡದ ಶೇಷಮ್ಮನವರೊಂದಿಗೆ ಮದುವೆ.

೧೯೩೬ ಮೊದಲ ಮಗ ಸಿ.ಕೆ. ನಾಗರಾಜ್ ಜನನ.

೧೯೩೯ ತೀರ್ಥಹಳ್ಳಿಯ ಪೀಪಲ್ಸ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಉದ್ಯೋಗ. ಎರಡನೆ ಮಗ ಸಿ.ಕೆ. ಶೇಷಾದ್ರಿ ಜನನ.

೧೯೪೦ ಮೈಸೂರಿಗೆ ಪ್ರಯಾಣ. ಚಾಮರಾಜಪುರಂ ಕೋ-ಆಪರೇಟಿವ್ ಸೊಸೈಟಿ-ಯಲ್ಲಿ ಮ್ಯಾನೇಜರ್ (೧೯೪೩.ರವರೆಗೆ)

೧೯೪೧ ಮೂರನೆಯ ಮಗ ಸಿ.ಕೆ. ಕೃಷ್ಣಮೂರ್ತಿ ಜನನ. ಟೈಫಾಯಿಡ್‌ನಿಂದ ಬಳಲಿದ್ದು

೧೯೪೪ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸಂಪಾದಕ ಹುದ್ದೆ ಮೊದಲನೆಯ ಮಗಳು ವಸಂತಲಕ್ಷ್ಮಿ ಜನನ.

೧೯೪೬ 'ಕಾವ್ಯಾಲಯ' ಪೂರ್ಣಾವಧಿ ಪ್ರಕಾಶನ ಸಂಸ್ಥೆ

ನಾಲ್ಕನೆಯ ಮಗ ಸಿ.ಕೆ. ಸತ್ಯನಾರಾಯಣ ಜನನ.

೧೯೪೯ ಎರಡನೆಯ ಮಗಳು ನಾಗವೇಣಿ ಜನನ.

೧೯೫೦ ದಸರಾ ವಸ್ತುಪ್ರದರ್ಶನದಲ್ಲಿ ಪುಸ್ತಕ ಮಳಿಗೆ ತೆರೆದದ್ದು.

೧೯೫೧ ೧೦೦ ಅಡಿ ರಸ್ತೆಯಲ್ಲಿ ಪುಸ್ತಕ ಮಳಿಗೆ ಪ್ರಾರಂಭ.

೧೯೫೫ ಮೂರನೆಯ ಮಗಳು ಸಿ.ಕೆ. ಪ್ರಭಾ ಜನನ.

೧೯೫೬ ನಾಲ್ಕು ವರ್ಷದ ಮಗು ಪದ್ಮ ಮರಣ, ಡಿಫ್ತೀರಿಯ ಖಾಯಿಲೆಗೆ ಒಳಗಾಗಿ (ಜನನ ೧೯೫೨). ಜಯನಗರದಲ್ಲಿ ಸ್ವಂತ ಮನೆ.

೧೯೬೧ ಮೈನರ್ ಆಪರೇಷನ್ ಚಿಕಿತ್ಸೆಗೆ ಒಳಗಾದದ್ದು.

೧೯೬೬ 'ಎವರೆಸ್ಟ್ ವೀರ' ಕೃತಿಗೆ ಉತ್ತಮ ಭಾಷಾಂತರ ಕೃತಿ ಪ್ರಶಸ್ತಿ.

೧೯೬೭ ಅಧಿಕ ರಕ್ತದೊತ್ತಡದಿಂದ ಬಳಲಿದ್ದು. ವಿಶ್ರಾಂತಿಗಾಗಿ ಮಗಳು ವಸಂತಲಕ್ಷ್ಮಿ ಮನೆಯಲ್ಲಿ (ಭಿಲಾಯ್). ದುರ್ಗಾಪುರ, ಕಲ್ಕತ್ತಕ್ಕೆ ಭೇಟಿ. ಅಲ್ಲಿ ಭಿಮಲ್ ಮಿತ್ರ ಅವರ ಸಂದರ್ಶನ.

೧೯೭೨ ಹೃದಯಾಘಾತ

೧೯೭೬ ಶಿವಮೊಗ್ಗದ ಕರ್ನಾಟಕ ಸಂಘದಿಂದ ಸನ್ಮಾನ

೧೯೭೭ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುರಸ್ಕಾರ.

೧೯೮೦ ಸೆಪ್ಟೆಂಬರ್ ೧೭ರಂದು ಮರಣ.

(೨೦೦೮ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ
'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' - 'ಕಾವ್ಯಾಲಯ'ಕ್ಕೆ)

■

## ಅನುಬಂಧ ೨

### ಪ್ರಕಟಿತ ಕೃತಿಗಳು

ಕೀಚಕ ವಧೆ

ಜರಾಸಂಧ ವಧೆ

ರಾಜಸೂಯ ಯಾಗ

ವೀರ ಅಭಿಮನ್ಯು

ಸೈಂಧವ ವಧೆ

ಶ್ರೀ ಕೃಷ್ಣನ ರಾಯಭಾರ

ಉತ್ತರನ ಪೌರುಷ

ಘೋಷ ಯಾತ್ರೆ

ಧರ್ಮರಾಯನ ಜೂಜು

ದ್ರೌಪದಿಯ ಭಂಗ

ಅಣ್ಣತಂಗಿ

ರಾಜಕುಮಾರಿಯ ಸೋಲು

ಆರು ಹಂಸಗಳು

ಗಾದೆಗಳು

ಈಸೋಪನ ಕಥೆಗಳು (೫ ಭಾಗಗಳಲ್ಲಿ) - ಅನುವಾದ

ಗ್ರಿಮ್ ಸಹೋದರರ ಕಥೆಗಳು - ಅನುವಾದ

ಗೋಖಲೆ : ನನ್ನ ರಾಜಕೀಯ ಗುರು - ಅನುವಾದ

ಮಹಾದೇವ ಗೋವಿಂದ ರಾನಡೆ - ಅನುವಾದ

ದಾದಾಭಾಯಿ ನವರೋಜಿ ಜೀವನ ಚರಿತ್ರೆ - ಅನುವಾದ

ಎವರೆಸ್ಟ್ ವೀರ (ತೇನ್‌ಸಿಂಗ್‌ನ ಆತ್ಮಕಥೆ) - ಅನುವಾದ

ಭಾರತ ದರ್ಶನ - ಅನುವಾದ

■

# ಅನುಬಂಧ ೩

ಪ್ರಕಟನೋದ್ಯಮ ಅಥವಾ ಪ್ರಕಾಶನ (ಚಿದಂಬರಂ ಅವರ ಲೇಖನ)

'ಪ್ರಕಟನ ಕರ್ತೃ' ಮತ್ತು 'ಪ್ರಕಾಶನ' ಎಂಬ ಪದಗಳನ್ನು ನಾವು ಇಂಗ್ಲಿಷಿನ Publisher ಮತ್ತು "Publishing' ಎಂಬ ಪದಗಳಿಗೆ ಸಮಾನಾರ್ಥಕಗಳನ್ನಾಗಿ ಉಪಯೋಗಿಸುತ್ತೇನೆ. ಪುಸ್ತಕ, ಪಂಚಾಂಗ, ಕೈಪಿಡಿ, ಕ್ಯಾಟಲಾಗು, ಪತ್ರಿಕೆ (ದಿನಪತ್ರಿಕೆ, ಮಾಸಪತ್ರಿಕೆ ಇತ್ಯಾದಿ) ಇವೇ ಮೊದಲಾದವುಗಳನ್ನು ಪ್ರಕಟಿಸುವವರೆಲ್ಲ ಪ್ರಕಾಶಕರು. ಆದರೂ 'ಪ್ರಕಟನಕಾರ' ಅಥವಾ 'ಪ್ರಕಾಶಕ' ಎಂದರೆ ಗ್ರಂಥ ಪ್ರಕಾಶಕನೆಂದೇ ರೂಢಿಯಲ್ಲಿ ಅರ್ಥ. ಪ್ರಕಟನೆಗೆ ಸಂಬಂಧಪಟ್ಟ ಉದ್ಯೋಗ ಪ್ರಕಟನೋದ್ಯಮ ಅಥವಾ ಪ್ರಕಾಶನ ಕೃತಿಗಳನ್ನು ಪರೀಕ್ಷಿಸಿ, ಪುಸ್ತಕ ರೂಪದಲ್ಲಿ ಅಚ್ಚು ಮಾಡಿಸಿ, ಅವು ಸಾರ್ವಜನಿಕರಿಗೆ ಸುಲಭ ಬೆಲೆಗೆ ದೊರೆಯುವಂತೆ ಮಾಡುವುದು ಪ್ರಕಾಶಕನ ಕೆಲಸ.

೨

ಆಧುನಿಕ ಯಂತ್ರನಾಗರಿಕತೆಯ ಪರಿಣಾಮವಾಗಿ ಪ್ರಕಟನೋದ್ಯೋಗ ಹುಟ್ಟಿತು. ಅದರ ಚರಿತ್ರೆ, ವಿಶೇಷವಾಗಿ ಇತ್ತೀಚಿನ ೨೦೦-೩೦೦ ವರ್ಷಗಳಿಗೆ ಸೇರಿದ್ದು. ಕ್ರೈಸ್ತಮತ ಪ್ರಚಾರಕ್ಕಾಗಿ ಸ್ಥಾಪಿತವಾದ ಮಿಷನರಿ ಸಂಸ್ಥೆಗಳು ನಮ್ಮ ನಾಡಿನ ಮೊದಲ ಪ್ರಕಾಶಕರು. ಮೊದಮೊದಲು ಪ್ರಕಟವಾದ ಪುಸ್ತಕಗಳು ಸಹಜವಾಗಿ ಕ್ರೈಸ್ತ ಧರ್ಮದ ಮತಗ್ರಂಥಗಳು. ಕಾಲಕ್ರಮದಲ್ಲಿ ನಮ್ಮ ಭಾಷಾಸಾಹಿತ್ಯ ಪರಿಚಯವನ್ನು ಹೊಂದಿದ ಮಿಷನರಿಗಳಲ್ಲಿ ಕೆಲವರು ನಮ್ಮ ಹಿಂದಿನ ಕವಿಗಳ ಗ್ರಂಥಗಳಲ್ಲಿ ಕೆಲವನ್ನು ಸಂಪಾದಿಸಿ ಪ್ರಕಟಿಸಿದರು. ದೇಶೀಯರಲ್ಲಿ ಪ್ರಕಟನೆಗೆ ತೊಡಗಿದವರು ಪ್ರಾಯಶಃ ಶೆಟ್ಟರು. ಅವರು ತಮ್ಮ 'ಸ್ವಕೀಯ ಮುದ್ರಾಕ್ಷರ ಶಾಲೆ'ಗಳಲ್ಲಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಮೊದಲಾದ ಕೆಲವು ಪ್ರಚಲಿತ ಕಾವ್ಯಗಳನ್ನೂ, ಶೃಂಗಾರ ಶುಕಸಪ್ತತಿ, ಅರೇಬಿಯನ್ ನೈಟ್ಸ್ ಕಥೆಗಳು ಮುಂತಾದ ಹಲವು ಜನಪ್ರಿಯ ವಚನ ಗ್ರಂಥಗಳನ್ನೂ ಪ್ರಕಟಿಸಿದರು. ವಾಣೀವಿಲಾಸ ಭಾರತಾದಿ ಗ್ರಂಥಗಳು ರಾಜಾಶ್ರಮಯದ ಮೂಲಕ ಪ್ರಸಿದ್ಧವಾದವು. ಆದರೆ ಈ ಶತಮಾನದ ಆದಿಭಾಗದಲ್ಲೂ ಅದಕ್ಕೆ ಕೊಂಚ ಮೊದಲೂ ಗ್ರಂಥ ರಚನೆಯಲ್ಲಿ ತೊಡಗಿದ ಲೇಖಕರು ತಂತಮ್ಮ ಗ್ರಂಥಗಳನ್ನು ಪ್ರಾಯಶಃ ತಾವೇ ಪ್ರಕಟಿಸುತ್ತಿದ್ದರು. ಅವರ ಸಹಾಯಕ್ಕೆ ಬರುವ ಪ್ರಕಟನಕಾರರು ಆಗಿನ ಕಾಲದಲ್ಲಿ ಇರಲಿಲ್ಲ. ಆರ್. ರಘುನಾಥರಾಯರು, ಬಿ. ವೆಂಕಟಾಚಾರ್ಯರು, ಗಳಗನಾಥರು,

ಪುಟ್ಟಣ್ಣನವರು ಮೊದಲಾದವರು ತಮ್ಮ ತಮ್ಮ ಕೃತಿಗಳ ಮುದ್ರಣ ಪ್ರಕಟನ ವ್ಯಾಪಾರ ವ್ಯವಸ್ಥೆಗಳನ್ನು ತಾವೇ ನಿರ್ವಹಿಸಿದರು. ಸ್ವಲ್ಪ ಇತ್ತೀಚಿನ ಕಾಲದಲ್ಲಿ ಕೂಡ ಡಿ.ವಿ.ಜಿ.ಯವರೂ ಶ್ರೀನಿವಾಸರೂ ಇತರ ಕೆಲವು ಲೇಖಕರೂ ತಮ್ಮ ಬರಹಗಳ ಪ್ರಕಾಶನಕ್ಕಾಗಿ ತಾವೇ ಶ್ರಮಪಟ್ಟಿದ್ದಾರೆ. ೧೯೨೫ರ ಸುಮಾರಿನಿಂದ ಈ ಪರಿಸ್ಥಿತಿ ಬದಲಾವಣೆ ಹೊಂದುತ್ತ ಬಂದಿದೆಯೆನ್ನಬಹುದು. ಆಗ ಕನ್ನಡದಲ್ಲಿ ನೂತನೋತ್ಸಾಹ ವೊಂದು ತಲೆದೋರಲಾರಂಭಿಸಿತು. ನವಚೈತನ್ಯದಿಂದ ಕೂಡಿದ ಹಲವು ಮಂದಿ ಲೇಖಕರು ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣ ಮಾಡಿದರು. ಕರ್ನಾಟಕ ಸಂಘಗಳೂ ಸಾಹಿತ್ಯ ಸಂಘಗಳೂ ಕೆಲಸ ಮಾಡಲಾರಂಭಿಸಿದವು. ಸಾಹಿತ್ಯ ಪ್ರಿಯರಾದ ನೂತನ ಪ್ರಕಾಶಕರು ಕಾಣಿಸಿ ಕೊಂಡರು. ೧೯೨೫ರಿಂದ ೧೯೪೧ರವರೆಗಿನ ಅವಧಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಗ್ರಂಥ ಪ್ರಕಾಶನದಲ್ಲೂ ಗಮನಾರ್ಹವಾದ ಕಾಲ. ವಿದ್ವಾಂಸರಿಂದ ಮನ್ನಣೆ ಹೊಂದಿ, ಜನಪ್ರಿಯವಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ತಳಹದಿಯಾಗಿ, ಹಲವಾರು ಗ್ರಂಥಗಳು ಈ ಅವಧಿಯಲ್ಲಿ ರಚಿತವಾದವು. ಲಾಭಾಕಾಂಕ್ಷೆಗಿಂತಲೂ ಹೆಚ್ಚಾಗಿ ಸೇವಾಮನೋಧರ್ಮದಿಂದ ಪ್ರೇರಿತರಾಗಿ, ಸಾಹಿತ್ಯಾಭಿಮಾನಿಗಳಾದ ಪ್ರಕಾಶಕರು ಗ್ರಂಥಗಳ ಪ್ರಕಟನೆಗಾಗಿ ದುಡಿದರು. ಕನ್ನಡ ಪುಸ್ತಕಗಳಿಗೆ ಗೌರವ ದೊರೆಯಿತು. ಆದರೆ ಮಾರುಕಟ್ಟೆ ಕಂಡುಬರಲಿಲ್ಲ.

೧೯೪೨ರ ತರುವಾಯ ಎಂದರೆ ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಜನರ ಕೈಯಲ್ಲಿ ಹಣ ಓಡಾಡಲಾರಂಭಿಸಿತು. ಕನ್ನಡ ಪುಸ್ತಕಗಳು ಚಲಿಸತೊಡಗಿದವು. ಹೊಸಬರು ಪ್ರಕಟನ ಪ್ರಪಂಚವನ್ನು ಪ್ರವೇಶಿಸಿದರು. ೧೯೪೭ರ ನಂತರ ಕೆಲವು ಕಾಲ ಹಣದ ಅಡಚಣೆಯಿಂದ ಪುಸ್ತಕ ವ್ಯಾಪಾರದಲ್ಲಿ ನಿರುತ್ಸಾಹ ತೋರಿಬಂದಿತಾದರೂ ೧೯೫೨ರ ಸುಮಾರಿನಿಂದ ಪ್ರಕಟನೋದ್ಯಮವು ವ್ಯಾಪರಪಥದಲ್ಲಿ ಕಾಲಿಡ ಲಾರಂಭಿಸಿದೆ. ಮೇಲಿನ ವಿವರಣೆ ಕನ್ನಡ ಪ್ರಕಟನ ಚರಿತ್ರೆಯ ಅತಿ ಸ್ಥೂಲವಾದ ಒಂದು ರೂಪರೇಖೆ.

೩

ಈಗ ಕನ್ನಡ ನಾಡಿನಲ್ಲಿ ಹಲವರು ಪ್ರಕಾಶಕರಿದ್ದಾರೆ. ಅವರ ಕಾರ್ಯರೀತಿ ಒಬ್ಬೊಬ್ಬರದು ಒಂದೊಂದು ಬಗೆ. ವ್ಯಾಪಾರ ನೀತಿ ಒಂದೊಂದು ತರ. ಪ್ರಕಾಶಕನ ಅಭಿರುಚಿಗೆ ಅನುಸಾರವಾಗಿ, ವ್ಯಕ್ತಿತ್ವಕ್ಕೆ ಅನುಗುಣವಾಗಿ ಅವರ ಸಂಸ್ಥೆಯಿಂದ ಗ್ರಂಥಗಳು ಪ್ರಕಟವಾಗುತ್ತವೆ ಎಂದು ಸಾಮಾನ್ಯವಾಗಿ ಹೇಳಬಹುದು. ಪುಸ್ತಕಗಳ ಅಚ್ಚುಕಟ್ಟಿನಲ್ಲಿ ಸಂಸ್ಥೆ ಸಂಸ್ಥೆಗೆ ವ್ಯತ್ಯಾಸ ತೋರುವುದೂ ಸಹಜ. ಬೇರೆ ಬೇರೆ ಪ್ರಕಾಶಕರ ಕಾರ್ಯ ವಿಧಾನಗಳೂ ನೀತಿಯೂ ಬೇರೆಬೇರೆಯಾದರೂ ಅವರೆಲ್ಲರ ಕಾರ್ಯ ಕ್ಷೇತ್ರ ಒಂದೇ. ಗುರಿ ಒಂದೆ. ಹಸ್ತಪ್ರತಿಗಳನ್ನು ಸಂಪಾದಿಸುವುದು, ಪರೀಕ್ಷಿಸುವುದು, ಗ್ರಂಥಕರ್ತರೊಡನೆ ಒಪ್ಪಂದಕ್ಕೆ ಬರುವುದು, ಸ್ವೀಕೃತ ಹಸ್ತಪ್ರತಿಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸುವುದು, ಅಚ್ಚಾದ

ಗ್ರಂಥಗಳು ಜನರಿಗೆ ಮುಖ್ಯವಾಗಿ ಪುಸ್ತಕ ವ್ಯಾಪರಿಗಳ ಮೂಲಕ ಬೆಲೆಗೆ ದೊರೆಯುವಂತೆ ಮಾಡುವುದು ಇವು ಪ್ರಕಾಶಕರಿಗೆಲ್ಲ ಸರ್ವಸಾಧಾರಣವಾದ ಕರ್ತವ್ಯಗಳು.

ಗ್ರಂಥವನ್ನು ಪ್ರಕಟಿಸುವುದಕ್ಕೆ ಮೊದಲು ಅದನ್ನು ಓದಿ ವಿಮರ್ಶಿಸಿ ಪ್ರಕಟನೆಗೆ ಅರ್ಹವೆ ಅಲ್ಲವೆ ಎಂಬುದನ್ನು ನಿರ್ಧರಿಸಬೇಕಲ್ಲವೆ? ಇದು ಬಹಳ ಜವಾಬ್ದಾರಿಯ ಕೆಲಸ. ಪ್ರಕಾಶಕನಲ್ಲಿಗೆ ಸಾಧಾರಣವಾಗಿ ನಾನಾ ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳು ಪ್ರಕಟನೆಗಾಗಿ ಬರುತ್ತವೆ. ಈ ನಾನಾ ಬಗೆಯ ಗ್ರಂಥಗಳನ್ನು ವಿಮರ್ಶಿಸಲು ಪ್ರಕಾಶಕನು ಸಮರ್ಥನೆ? ಒಬ್ಬ ವ್ಯಕ್ತಿಯೇ ಸಾಹಿತ್ಯವನ್ನೂ ಸಂಗೀತವನ್ನೂ ಅಲಂಕಾರ ಶಾಸವನ್ನೂ ಅರ್ಥಶಾಸವನ್ನೂ ರಾಜ್ಯಶಾಸವನ್ನೂ ಆಹಾರ ವಿಜ್ಞಾನವನ್ನೂ ಭೌತವಿಜ್ಞಾನ ಶಾಸಗಳನ್ನೂ ಹೀಗೆ ನಾನಾ ಶಾಸ ಕಲೆಗಳನ್ನೂ ಅರಿತು, ತತ್ಸಂಬಂಧವಾದ ಗ್ರಂಥಗಳನ್ನು ಪರೀಕ್ಷಿಸಲು ಸಮರ್ಥನಾಗಿರುತ್ತಾನೆಯೆ ಎಂಬ ಶಂಕೆ ತಲೆದೋರುವುದು ಸಹಜ. ಸಮರ್ಥನೊ ಅಸಮರ್ಥನೊ, ಕನ್ನಡ ಪ್ರಕಾಶಕರು ಕಷ್ಟಕರವಾದ ಅಥವಾ ಅಸಾಧ್ಯವಾದ ಈ ಪರೀಕ್ಷಣ ಕೆಲಸವನ್ನು ಸದ್ಯದಲ್ಲಿ ಸ್ವಯಂ ನಿರ್ವಹಿಸುತ್ತಿದ್ದಾರೆ. ಇದು ತೀರ ಅಸಮರ್ಪಕವಾದ ಸ್ಥಿತಿ. ಪಾಶ್ಚಾತ್ಯ ದೇಶಗಳಲ್ಲಾದರೆ, ಒಂದೊಂದು ಹಸ್ತ ಪ್ರತಿಯೂ ಅದರ ಸಾಹಿತ್ಯ ಭಾಗದಲ್ಲಿ ವಿದ್ವಾಂಸನಾದ ಗ್ರಂಥ ಪರೀಕ್ಷಕ (reader)ನ ವಿಮರ್ಶೆಗೆ ಒಳಪಡುತ್ತದೆ. ಅನೇಕ ಗ್ರಂಥಗಳು ಪ್ರಕಟನೆಗೆ ಸ್ವೀಕೃತವಾಗುವ ಮೊದಲು ಮೂರು ನಾಲ್ಕು ಬಾರಿ ಪರೀಕ್ಷಕರ ಸಮೀಕ್ಷಣಕ್ಕೆ ಗುರಿಯಾಗಿ ಆಮೇಲೆ ಪ್ರಕಾಶಕನ ಅಥವಾ ಪ್ರಕಾಶಕನ ಸಂಸ್ಥೆಯ ಆಡಳಿತವರ್ಗದ ಸಮಾಲೋಚನೆಗೆ ಬರುತ್ತವೆ. ಹೀಗೆ ಉತ್ತೀರ್ಣವಾಗಿ ಗ್ರಂಥವು ಪ್ರಕಟನೆಗೆ ಸ್ವೀಕೃತವಾಗಬೇಕು. ಗ್ರಂಥ ಶೋಧನೆಯಲ್ಲಿ ನಮ್ಮ ಸಂಸ್ಥೆಗಳಿಗೂ ಪಾಶ್ಚಾತ್ಯ ಪ್ರಕಾಶನ ಸಂಸ್ಥೆಗಳಿಗೂ ಎಷ್ಟು ವ್ಯತ್ಯಾಸವಿದೆ!

ಈ ಕೊರತೆಯನ್ನು ನಾವು ನೀಗಲಾರೆವೆ ಎಂದು ಕೇಳಬಹುದು. ಗ್ರಂಥ ಪ್ರಕಟನ ಯೋಗ್ಯವಾಗಿದೆಯೆ ಇಲ್ಲವೆ ಎಂದು ತಿಳಿಯಲು ಅದನ್ನು ಶೋಧಿಸಿ ನೋಡಬೇಕು. ಶೋಧನೆಗೆ ವೆಚ್ಚ ತಗಲುತ್ತದೆ. ಆ ವೆಚ್ಚ ಪುಸ್ತಕದ ಮೇಲೆ ಬೀಳುತ್ತದೆ ಎಂದರೆ ಕೊಳ್ಳುವ ಜನ ಅದನ್ನು ಭರಿಸಬೇಕು. ಅವರು ಹಾಗೆ ಭರಿಸುತ್ತಾರೆಯೆ? ಗ್ರಂಥ ಪ್ರಕಟನೆಗೆ ಈಗ ತಗಲುವುದಕ್ಕಿಂತ ಹೆಚ್ಚಿನ ಪ್ರಮಾಣದ ಖರ್ಚುಗಳನ್ನು – ಸಹಿಸಲು ಈಗಿನ ಪುಸ್ತಕ ದರದ ಸಂಬಂಧದಲ್ಲಿ ಪ್ರಕಾಶನಿಗೆ ಸಾಧ್ಯವಿಲ್ಲ, ಈಗಿಗಿಂತ ಹೆಚ್ಚಿನ ವೆಚ್ಚನ್ನು ಹೊರಲು ಪುಸ್ತಕಕ್ಕೆ ತ್ರಾಣವಿಲ್ಲ, ಎಂದರೆ ಹೆಚ್ಚು ಬೆಲೆಯನ್ನು ಕೊಡಲು ಕೊಳ್ಳುವವರಿಗೆ ಶಕ್ತಿಯಿಲ್ಲ. ಹೀಗೆ ಪ್ರಕಟನೋದ್ಯಮದ ಮೊದಲ ಹಂತದಲ್ಲಿಯೇ ನಮಗೆ ದಕ್ಷತೆಗೆ ಧಕ್ಕೆ ಬರುವ ಸಂಭವವಿದೆ. ಈ ಬಗೆಯ ಪರಿಸ್ಥಿತಿಯಲ್ಲಿ ಪುಸ್ತಕದ ಯೋಗ್ಯತೆಯನ್ನು ಕಾಪಾಡಲು ಪ್ರಕಾಶಕರು ವಿಶೇಷ ಶ್ರಮವಹಿಸಬೇಕಾಗುತ್ತದೆ. ಹಸ್ತಪ್ರತಿಯನ್ನು ವಿಮರ್ಶಿಸಲು ಮೊದಲು ಗ್ರಂಥಗಳಿಂದಲೂ ತಿಳಿದವರಿಂದಲೂ ವಿಷಯವನ್ನು ಸಂಗ್ರಹಿಸುವುದು ಅಗತ್ಯವಾಗುತ್ತದೆ. ಹಸ್ತಪ್ರತಿಯನ್ನು

ಪ್ರಕಟನೆಗೆ ಸ್ವೀಕರಿಸಿದ ಮೇಲೆ ಗ್ರಂಥಕರ್ತನೊಡನೆ ಒಪ್ಪಂದ ಮಾಡಿಕೊಳ್ಳುವುದು ಮುಂದಿನ ಹೆಜ್ಜೆ ೨೫-೩೦ ವರ್ಷಗಳ ಹಿಂದೆ ಕನ್ನಡ ಪುಸ್ತಕ ಮಾರಾಟದ ವಸ್ತುವೆಂದು ಪರಿಗಣಿತವಾಗಿರಲಿಲ್ಲ. ಆ ಕಾಲದಲ್ಲಿ ಅನೇಕ ಲೇಖಕರು ತಮ್ಮ ಗ್ರಂಥಗಳಿಗೆ ಸಂಭಾವನೆಯನ್ನು ನಿರೀಕ್ಷಿಸುತ್ತಿರಲಿಲ್ಲ. ಗ್ರಂಥವನ್ನು ಬೆಳಕಿಗೆ ತರುವುದೇ ಆಗ ಒಂದು ಉಪಕಾರವಾಗಿತ್ತು. ಇಷ್ಟಮಿತ್ರರಲ್ಲಿ ಉಚಿತವಾಗಿ ಹಂಚಲು ಅಗತ್ಯವಾದ ಪ್ರತಿಗಳನ್ನು ಒದಗಿಸಿದಲ್ಲಿ ಅದರಿಂದ ಲೇಖಕರು ತೃಪ್ತರಾಗುತ್ತಿದ್ದರು. ಒಂದು ಗ್ರಂಥ ಒಂದು ಸಾವಿರ ಪ್ರತಿ ಖರ್ಚಾಗಲು ಒಂದು ತಲೆಮಾರು ಅಥವಾ ಹೆಚ್ಚುಕಾಲ ಹಿಡಿಯುತ್ತಿತ್ತು. ಈ ಸ್ಥಿತಿ ಕ್ರಮೇಣ ಸುಧಾರಿಸಿ ೧೯೪೦ರ ವೇಳೆಗೆ ಪ್ರಕಟನೆಗಳಿಗೆ ಪ್ರತಿಫಲವಾಗಿ ಸಂಭಾವನೆ ಯನ್ನು ನಿರೀಕ್ಷಿಸುವುದು ಸಹಜವಾಯಿತು. ಸಾಮಾನ್ಯವಾಯಿತು. ಪ್ರಕಟಣೆಯ ಷರತ್ತುಗಳೆಂದರೆ ಈ ಕಾಲದಲ್ಲಿ ಸಂಭಾವನೆಯನ್ನು ಗೊತ್ತುಪಡಿಸುವುದು ಮಾತ್ರ ವಾಗಿತ್ತು. ಸಂಭಾವನೆಯ ಪ್ರಮಾಣ ಸಾಮಾನ್ಯವಾಗಿ ಬಾಯಿಮಾತಿನಿಂದ ನಿರ್ಧಾರವಾಗುವುದು ರೂಢಿಯಾಗಿತ್ತು. ಲೇಖಕ-ಪ್ರಕಾಶಕರ ಸಂಖ್ಯೆ ಹೆಚ್ಚಿ ಪುಸ್ತಕ ವ್ಯಾಪಾರ ಬೆಳೆದಂತೆ ಪ್ರಕಾಶನದ ವಿಷಯದಲ್ಲಿ ಜಟಿಲತೆಗಳು ತೋರಿಬಂದು ಲೇಖಕ ಪ್ರಕಾಶಕರ ಬಾಂಧವ್ಯದಲ್ಲಿ ಹೆಚ್ಚಿನ ನಿರ್ದಿಷ್ಟತೆ ಅಪೇಕ್ಷಣೀಯವಾಯಿತು. ಲೇಖಕರು ತಮಗೆ ಪ್ರಕಾಶಕರಿಂದ ದೊರೆಯಬೇಕಾದ ಸಹಾಯ ಸಂಭಾವನೆಗಳನ್ನು ಖಚಿತಪಡಿಸಿ ಕೊಳ್ಳಲು ಇಷ್ಟಪಟ್ಟರು. ಈಗ್ಗೆ ಐದಾರು ವರ್ಷಗಳ ಕೆಳಗೆ ಕಾದಂಬರಿಯುಗ ಆರಂಭವಾಗುವ ವೇಳೆಗೆ ಲೇಖಕ ಪ್ರಕಾಶಕರ ಸಂಬಂಧ ಲಿಖಿತ ಕರಾರುಗಳ ಮೂಲಕ ಸ್ಪಷ್ಟಗೊಳ್ಳುವುದು ಸರ್ವಸಾಧಾರಣ ಪದ್ಧತಿಯಾಯಿತು.

ಗ್ರಂಥಕಾಣಿಕೆ ಸಾಮಾನ್ಯವಾಗಿ ಗ್ರಂಥದ ಮುಖಬೆಲೆಯ ಶೇಕಡ ಇಷ್ಟೆಂದು ಗೊತ್ತಾಗಿರುತ್ತದೆ. ಶೇಕಡ ೭ರಿಂದ ೧೫ರವರೆಗೆ ಕಾಣಿಕೆಯ ದರ ರೂಢಿಯಲ್ಲಿದೆ-ಯೆನ್ನಬಹುದು.

ತಮ್ಮ ಗ್ರಂಥಕ್ಕೆ ಹೆಚ್ಚಾಗಿ ಗಿರಾಕಿಯುಳ್ಳ ಲೇಖಕರು ಅಥವಾ ಕಾದಂಬರಿಕಾರರು ಗ್ರಂಥದ ಪ್ರಕಟಣೆಗೆ ಮೊದಲು ಅಥವಾ ಅದು ಪ್ರಕಟವಾದ ಕೂಡಲೆ ಸಂಭಾವನೆಯ ಹಣವನ್ನು ಪೂರ್ತಿಯಾಗಿ ಅಥವಾ ಎರಡು ಮೂರು ಕಂತುಗಳಲ್ಲಿ ನಿರೀಕ್ಷಿಸುವುದುಂಟು. ಇತರ ಲೇಖಕರ ಸಂಭಾವನೆಯ ಸಂದಾಯದ ಕಾಲ ಲೇಖಕ ಪ್ರಕಾಶಕರ ಅನುಕೂಲ ಅನನುಕೂಲಗಳನ್ನು ಅವಲಂಬಿಸಿರುತ್ತದೆ. ಈ ವಿಷಯದಲ್ಲಿ ಪ್ರಾಯಶಃ ಸರ್ವಸಾಮಾನ್ಯವಾದ ಪದ್ಧತಿ ಯಾವುದೂ ಇಲ್ಲ.

ಮುಂದುವರೆದ ದೇಶಗಳಲ್ಲಿ ಗ್ರಂಥ ಪ್ರಕಟಣೆ ನಷ್ಟ ಸಂಭವವುಳ್ಳ (Risky) ಉದ್ಯಮವೆಂದು ಪರಿಗಣಿತವಾಗಿದೆ. ಆದ್ದರಿಂದ ಅಲ್ಲಿ ಲೇಖಕರೂ ಪ್ರಕಾಶಕರ ನಷ್ಟದಲ್ಲಿ ಪಾಲುಗೊಳ್ಳುವುದುಂಟು. ಈ ಕಾರಣದಿಂದ ಪಾಶ್ಚಾತ್ಯ ದೇಶಗಳಲ್ಲಿ ಲೇಖಕ ಪ್ರಕಾಶಕರ ಸಂಬಂಧವನ್ನು ಗೊತ್ತುಪಡಿಸುವ ಕರಾರುಗಳು ಮುಖ್ಯವಾಗಿ ಎರಡು ರೀತಿಯವಾಗಿರುತ್ತವೆ.

೧) ಪುಸ್ತಕದ ಪ್ರತಿಗಳು ಮಾರಾಟವಾದಂತೆ ವರ್ಷಕ್ಕೊಮ್ಮೆ ಅಥವಾ ಎರಡು ಬಾರಿ ಗ್ರಂಥಕಾಣಿಕೆಯನ್ನು ಸಲ್ಲಿಸುವ ಷರತ್ತುಳ್ಳ ಕರಾರು (Royalty Agreement), ೨) ಪುಸ್ತಕದ ಮಾರಾಟದಿಂದ ಬಂದ ಹಣದಿಂದ ಮೊದಲು ದರ ಖರ್ಚು ವೆಚ್ಚಗಳನ್ನು ಪೂರೈಸಿ, ಅನಂತರ ಅವರಿಂದ ಬರುವ ಲಾಭಾಂಶವನ್ನು ವರ್ಷಕ್ಕೊಮ್ಮೆ ಲೇಖಕ ಪ್ರಕಾಶಕರು ಹಂಚಿಕೊಳ್ಳುವ ಶರತ್ತುಳ್ಳ ಕರಾರು (Profit Sharing Agreement). ನಮ್ಮಲ್ಲಿ ಲೇಖಕ ಪ್ರಕಾಶಕರ ಸಂಖ್ಯೆ ಹೆಚ್ಚಿ ಪುಸ್ತಕಗಳು ವ್ಯಾಪಾರ ರೂಪದಲ್ಲಿ ಬರಲಾರಂಭಿಸಿದರೆ ಮೇಲ್ಕಂಡ ಕರಾರುಗಳು ರೂಢಿಗೆ ಬರುವುದರಲ್ಲಿ ಸಂಶಯವಿಲ್ಲ.

ನಮ್ಮಲ್ಲಿ ಅನೇಕರು ಗ್ರಂಥದ ಒಂದು ಆವೃತ್ತಿಗೆ ಮಾತ್ರ ಅನ್ವಯಿಸುವಂತೆ ಕರಾರನ್ನು ಮಾಡುತ್ತಾರೆ. ಪ್ರಪಂಚದ ಮೇಲೆಲ್ಲ ಇರುವ ಪದ್ಧತಿಯ ಪ್ರಕಾರ ಕರಾರುಗಳು ಗ್ರಂಥದ ಪೂರ್ಣ ಜೀವಾವಧಿಗೆ ಅಂದರೆ ಗ್ರಂಥದ ಕಾಪಿರೈಟಿನ ಪೂರ್ಣ ಅವಧಿಗೆ ಅನ್ವಯವಾಗುವಂತೆ ಏರ್ಪಟ್ಟಿರುತ್ತವೆ. ನಮ್ಮ ದೇಶದಲ್ಲಿ ಕರಾರುಗಳ ಕಾಲವ್ಯಾಪ್ತಿ ಹೆಚ್ಚಿಸುವುದು ನ್ಯಾಯಸಮ್ಮತವಾಗಿದೆ.

ಲೇಖಕ ಪ್ರಕಾಶಕರ ಹಕ್ಕು ಬಾಧ್ಯತೆಗಳನ್ನು ಕುರಿತು ಅನೇಕ ವಿವರಾಂಶಗಳನ್ನು ಯೂರೋಪ್ ಅಮೆರಿಕಾ ದೇಶಗಳ ಕರಾರುಗಳಲ್ಲಿ ನಮೂದಾಗಿರುತ್ತವೆ. ಅವುಗಳನ್ನೆಲ್ಲ ಕುರಿತು ಇಲ್ಲ ಬರೆಯಲು ಅವಕಾಶ ಸಾಲದು. ಪುಸ್ತಕೋದ್ಯಮ ಬೆಳೆದಂತೆ ಆ ವಿಷಯ ಗಳು ನಮ್ಮಲ್ಲಿಯ ಕರಾರುಗಳಲ್ಲಿಯೂ ಕಾಣಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ ಜ್ಞಾನ ಪ್ರಸಾರದ ದೃಷ್ಟಿಯಿಂದಲೂ ಲೇಖಕ ಪ್ರಕಾಶಕರ ಹಿತರಕ್ಷಣೆಯ ದೃಷ್ಟಿಯಿಂದಲೂ ಲೇಖಕ ಪ್ರಕಾಶಕರ ಹಿತರಕ್ಷಣೆಯ ದೃಷ್ಟಿಯಿಂದಲೂ ಅವು ಕರಾರಿನ ವಿಷಯಗಳಾಗು ವುದು ಒಳಿತೆಂದು ಹೇಳಬಹುದು. ಗ್ರಂಥಕರ್ತನೊಡನೆ ಒಪ್ಪಂದಕ್ಕೆ ಬಂದ ಮೇಲೆ ಗ್ರಂಥದ ಪ್ರಕಟಣೆಗೆ ವ್ಯವಸ್ಥೆ ಮಾಡುವುದು ಮುಂದಿನ ಕೆಲಸ. ಹಸ್ತಪ್ರತಿಯನ್ನು ಮುದ್ರಣಕಾರನಲ್ಲಿಗೆ ಒಯ್ದು ಅದು ಅಚ್ಚಿನಲ್ಲಿ ಎಷ್ಟು ಪುಟಗಳಾಗುತ್ತದೆ ಎಂದು ಅಂದಾಡು ಮಾಡಿಸಬೇಕು. ಪುಸ್ತಕಕ್ಕೆ ಯಾವ ಆಕಾರ ಯುಕ್ತವಾಗುತ್ತದೆ ಎಂದು ನಿರ್ಧರಿಸಬೇಕು. ಕನ್ನಡದಲ್ಲಿ ಪುಸ್ತಕಗಳು ಸಾಮಾನ್ಯವಾಗಿ ಕ್ರೌನ್ ಅಷ್ಟಪತ್ರಾಕಾರದಲ್ಲಿ ಹೊರಬರುತ್ತವೆ. ಕ್ರೌನ್ ಆಕಾರ ನಮ್ಮ ಜನಕ್ಕೆ ಹೆಚ್ಚು ಪ್ರಿಯವಾದುದೆಂದು ತೋರುತ್ತದೆ. ಅಪರೂಪವಾಗಿ, ಪುಸ್ತಕಗಳು ಪೂಲ್ಸ್ ಕ್ಯಾಪ್ ಅಷ್ಟದಳ ಮೊದಲಾದ ಆಕಾರಗಳಲ್ಲಿಯೂ ಕಾಣಿಸಿಕೊಳ್ಳುವುದುಂಟು. ಒಟ್ಟಿನಲ್ಲಿ ಕನ್ನಡ ಪುಸ್ತಕಗಳ ಆಕಾರದಲ್ಲಿ ವೈವಿಧ್ಯವಿಲ್ಲ. ಗ್ರಂಥದ ವಿಷಯಕ್ಕೂ ಅದರ ಆಕಾರಕ್ಕೂ ಒಂದು ಬಗೆಯ ಸಂಬಂಧವಿದೆಯೆಂಬುದನ್ನು ನಮ್ಮಲ್ಲಿ ಅನೇಕರು ತಿಳಿದಂತೆ ಇಲ್ಲ. ಬೇರೆ ಬೇರೆ ಆಕಾರದ ಕಾಗದಗಳು ನಮ್ಮಲ್ಲಿ ದೊರೆಯುವುದೂ (ದೊರೆಯದಿರುವುದೊ?) ಇದಕ್ಕೆ ಒಂದು ಕಾರಣವಿರಬಹುದು. ಇಂಗ್ಲಿಷಿನ ಕಾದಂಬರಿ, ಕವಿತಾ ಸಂಗ್ರಹ, ಕಲಾಗ್ರಂಥ, ತತ್ವಶಾಸ್ತ್ರದ ಅಥವಾ ವಿಜ್ಞಾನಶಾಸ್ತ್ರದ ಪುಸ್ತಕ - ಇವುಗಳನ್ನು ಎದುರುಗಿಟ್ಟರೆ ಅವುಗಳ ಬಾಹ್ಯಾಕಾರ

ಮೈಕಟ್ಟುಗಳಲ್ಲಿಯೇ ಒಂದು ಭೇದ ಅಥವಾ ವೈವಿಧ್ಯ ಕಂಡುಬರುತ್ತದೆ. ಕನ್ನಡದಲ್ಲಿ ಸಾಮಾನ್ಯವಾಗಿ ಎಲ್ಲ ಬಗೆಯ ಪುಸ್ತಕಗಳೂ 'ಅಚ್ಚೊತ್ತಿದಂತೆ ಒಂದೇ ಬಗೆ'.

ಆಕಾರವನ್ನು ನಿರ್ಧರಿಸಿದ ಮೇಲೆ ಪುಸ್ತಕಕ್ಕೆ ಬೇಕಾಗುವ ಕಾಗದವನ್ನು ಹುಡುಕಬೇಕು. ಈ ವಿಷಯದಲ್ಲಿಯೂ ನಮ್ಮಲ್ಲಿ ಆಯ್ಕೆಗೆ ಅವಕಾಶ ಸಾಲದು. ಹೊರ ದೇಶದಿಂದ ಕಾಗದಗಳು ಬರುತ್ತಿದ್ದಾಗ ಬೇರೆ ರೀತಿಯ ಕಾಗದಗಳನ್ನು ಆರಿಸಬಹು ದಾಗಿತ್ತು. ಪ್ರಕಾಶಕನ ಅಭಿರುಚಿಗೆ ತಕ್ಕಂತೆ ಕಾಗದವನ್ನು ಅದರ ಆಕಾರ, ರಚನೆ, ದಪ್ಪ ಬಣ್ಣ ದರ ಇವುಗಳನ್ನು ಸಮೀಕ್ಷಿಸಿಕೊಳ್ಳಬಹುದಾಗಿತ್ತು. ಈಗ ದೊರೆಯುವುದು ಸಾಧಾರಣವಾಗಿ ಒಂದು ತೂಕದ ಒಂದು ಬಗೆಯ ಕಾಗದಗಳು ಮಾತ್ರ. ಯಾವ ಆಕಾರವಾದರೆ ಏನು, ಯಾವ ತೂಕವಾದರೇನು, ಸದ್ಯಃ ಪುಸ್ತಕಕ್ಕೊಂದಿಷ್ಟಕ್ಕೆ ಕಾಗದ ದೊರೆಯುತ್ತದಲ್ಲ ಎಂದು ತೃಪ್ತಿಪಟ್ಟುಕೊಳ್ಳಬೇಕು. ದೇಶದ ಅಗತ್ಯಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಕಾಗದ ದೊರೆಯದಿರುವಾಗ ವೈವಿಧ್ಯಕ್ಕೆ ಎಡೆಯೆಲ್ಲಿ ಬಂತು? ಇಂತ ಪರಿಸ್ಥಿತಿಯಲ್ಲಿ ಪುಸ್ತಕಗಳನ್ನು ಕಲಾತ್ಮಕವಾಗಿ ತಯಾರಿಸುವುದು ತೀರ ಶ್ರಮಸಾಧ್ಯ ಎಂದು ತಿಳಿಸಬೇಕು?

ಇನ್ನು ಗ್ರಂಥಕ್ಕೆ ಸೂಕ್ತವಾದ ಟೈಪು(ಮೊಳೆ)ಗಳನ್ನು ಆರಿಸುವ ವಿಚಾರಕ್ಕೆ ಬರುತ್ತಲೆ, ನಮ್ಮ ದಟ್ಟದಾರಿದ್ರ್ಯ ವ್ಯಕ್ತವಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ಕನ್ನಡದಲ್ಲಿ ಪುಸ್ತಕದ ಕೆಲಸಕ್ಕೆ (book work) ಇರುವುದು ಒಂದೇ ಟೈಪು ೧೨ ಪಾಂಟ್‌ನ ಟೆಕ್ಸ್ಟ್ ಟೈಪು. ಇದರ ರೂಪದಲ್ಲಿ ಒಂದು ಮುದ್ರಣಾಲಯದ ಮೊಳೆಗೂ ಇನ್ನೊಂದರದಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಅವಳಿ ಮಕ್ಕಳಲ್ಲಿ ಇರುವಂತಹ ಸೂಕ್ಷ್ಮ ವ್ಯತ್ಯಾಹ. ತಲೆ ಬರಹದ ಟೈಪುಗಳು, ದಪ್ಪ ಅಕ್ಷರಗಳು (Antique), ವಕ್ರಾಕ್ಷರಗಳು (Italics) ಇವುಗಳ ಕಥೆ ಬೇರೆಯಾಗಿಲ್ಲ. ಕನ್ನಡದ ಮೊಳೆಗಳಲ್ಲಿ ವೈವಿಧ್ಯವನ್ನು ತರುವ ದಿಶೆಯಲ್ಲಿ ನೂತನ ಅಂದಚಂದಗಳನ್ನು ಸೃಷ್ಟಿಸುವ ದಾರಿಯಲ್ಲಿ ಗಣ್ಯವಾದ ಮತ್ತು ಯಶಸ್ವಿಯಾದ ಪ್ರಯೋಗ ಪ್ರಯತ್ನಗಳು ನಡೆದಿಲ್ಲ. ಒಟ್ಟಿನಲ್ಲಿ ಯಾವ ಕನ್ನಡ ಪುಸ್ತಕವನ್ನು ತೆರೆದರೂ ಒಂದೇ ಮೊಳೆ ಕಣ್ಣಿಗೆ ಬೀಳುತ್ತದೆ.

ಕಾಗದ ಮುದ್ರಣಗಳ ವ್ಯವಸ್ಥೆಯನ್ನು ಮಾಡುತ್ತಿರುವಾಗಲೆ ಪುಸ್ತಕದ ವಿಷಯಕ್ಕೆ ಅಗತ್ಯವಾದ ಚಿತ್ರಗಳನ್ನು ಬರೆಸುವ ಏರ್ಪಾಟನ್ನೂ ಪ್ರಕಾಶಕರು ಯೋಚಿಸಬೇಕು. ನಮ್ಮಲ್ಲಿ ಚಿತ್ರಕಾರರಿದ್ದಾರೆಯೆ ಎಂದರೆ ಪ್ರೋತ್ಸಾಹವಿಲ್ಲವೆಂದು ಹೇಳುವವರು ಬಹುಮಂದಿ ಇದ್ದಾರೆ. ಅದು ಸ್ವಲ್ಪಮಟ್ಟಿಗೆ ನಿಜ. ಆದರೆ ಗ್ರಂಥದ ವಿಷಯಕ್ಕೆ ಅಥವಾ ಒಂದು ಸನ್ನಿವೇಶಕ್ಕೆ ತಕ್ಕ ಭಾವಯುತವಾದ ಚಿತ್ರವನ್ನು ಬರೆಯಲು ಬಲ್ಲವರು ತೀರ ವಿರಳ. ನಮ್ಮ ಚಿತ್ರಕಾರರಲ್ಲಿ ಬಹುಮಂದಿಗೆ ಸಾಹಿತ್ಯದ ಗಂಧವಿಲ್ಲ. ಲೇಖಕನ ಆಶಯವನ್ನು ಗ್ರಹಿಸುವ ಸಾಮರ್ಥ್ಯ ಅಥವಾ ಅಭ್ಯಾಸ ಸಾಲದು. ಅಲ್ಲದೆ ಚಿತ್ರಗಳನ್ನು ಸೇರಿಸಿದರೆ ಪುಸ್ತಕದ ಬೆಲೆ ಹೆಚ್ಚುತ್ತದೆ. ಹೆಚ್ಚು ಬೆಲೆಯನ್ನು ಕೊಟ್ಟು ಕೊಳ್ಳುವ ಜನ ನಮ್ಮಲ್ಲಿಲ್ಲ. ಹೀಗಾಗಿ ನಮ್ಮ ಮಕ್ಕಳ ಪುಸ್ತಕಗಳು ಕೂಡ

ಹೂವಿಲ್ಲದ ಗಿಡದಂತೆ ಚಿತ್ರವಿಹೀನವಾಗಿರುತ್ತವೆ.

ಜೇಬಿನ ಕಾದಂಬರಿಗಳು ಮಾರುಕಟ್ಟೆಯನ್ನು ಪ್ರವೇಶಿಸಿದ ಮೇಲೆ ಪುಸ್ತಕದ ಹೊದಿಕೆಯ ಮೇಲೆ ತ್ರಿವರ್ಣ ಚಿತ್ರವನ್ನು ಹಾಕುವುದು ಕಡ್ಡಾಯವಾದ ರೂಢಿಯಲ್ಲಿರುತ್ತದೆ. ಈ ಒಂದು ಚಿತ್ರಕ್ಕಾಗಿ ಖರ್ಚು ಮಾಡುವ ಹಣವನ್ನು ಗಮನಿಸಿದರೆ ಅದರಿಂದ ಯಾವ ಸಾರ್ಥಕ್ಯ ಎಂದು ಕೇಳಬೇಕಾಗುತ್ತದೆ. ಅವರಿಂದ ಪ್ರಕಾಶಕನಿಗೆ ಹೆಚ್ಚಿನ ಖರ್ಚು. ಪುಸ್ತಕಕ್ಕೆ ಹೆಚ್ಚಿನ ಬೆಲೆ. ಕಲೆಗೆ ಮಾತ್ರ ಯಾವ ಲಾಭವೂ ಇಲ್ಲ. ಆದರೆ ಪುಸ್ತಕದ ಮೇಲೆ ಗಂಡು ಹೆಣ್ಣಿನ ಚಿತ್ರವೊಂದಿದ್ದರೆ ಕೊಳ್ಳುವ ಜನಕ್ಕೇನೋ ತೃಪ್ತಿ. ಪುಸ್ತಕವೆಲ್ಲ ಅಚ್ಚಾದ ಮೇಲೆ ಹೊದಿಕೆಯನ್ನು ಅಚ್ಚುಮಾಡಿಸಿ ಬೈಂಡು ಮಾಡಿಸ ಬೇಕು. ಹೊದಿಕೆ(Cover)ಯ ರಚನೆ ಮುದ್ರಣಗಳು ಗಮನವಿಟ್ಟು ಮಾಡಬೇಕಾದ ಕೆಲಸಗಳು. ಸ್ತ್ರೀಪುರುಷರಿಗೆ ಉಡುಪು ಹೇಗೊ ಪುಸ್ತಕಕ್ಕೆ ಹೊದಿಕೆ ಹಾಗೆ. ಉತ್ತಮ ವಾದ, ಆಕರ್ಷಕವಾದ ಹೊದಿಕೆಯಿಂದ ಪುಸ್ತಕದ ಸೌಂದರ್ಯ ಘನತೆಗಳು ಹೆಚ್ಚುತ್ತವೆ. ಹೊದಿಕೆ ತಯಾರಾದ ಮೇಲೆ ಪುಸ್ತಕ ಬೈಂಡಾಗುತ್ತದೆ. 'ಪಿನ್ನು ಹೊಡೆದು' ಅಥವಾ 'ಟಾಕಾ ಹಾಕಿ' ಹೊದಿಕೆಯನ್ನು ಅಂಟಿಸುವುದು ನಮ್ಮಲ್ಲಿ ಸರ್ವಸಾಮಾನ್ಯ ವಾದ ಬೈಂಡಿಂಗ್ ರೀತಿ. ಸೆಕ್ಷನ್ ಹೊಲಿಗೆ ಹಾಕಿದರೆ ಪುಸ್ತಕ ತೆರೆಯಲು ಸುಲಭವಾಗಿ, ಅದರ ಒಟ್ಟಿನ ಅಂದ ಹೆಚ್ಚುತ್ತದೆ. ಆದರೆ ಕಮ್ಮಿ ಖರ್ಚಿನ ದೃಷ್ಟಿಯಿಂದ ಪಿನ್ನು ಹೊಡೆದು ಬೈಂಡು ಮಾಡುವುದೇ ಹೆಚ್ಚು ರೂಢಿಯಲ್ಲಿದೆ. ಸೆಕ್ಷನ್ ಹೊಲಿದು, ದಪ್ಪ ರಟ್ಟುಹಾಕಿ 'ಕ್ಯಾಲಿಕೊ ಬಟ್ಟೆಯಿಂದ ಬೈಂಡು ಮಾಡಿ (Jacket) ರಕ್ಷಾಕವಚ ತೊಡಿಸಿ ಪುಸ್ತಕ ಹೊರಡಿಸುವುದು ವಿರಳ. ಈ ರೀತಿ ಚೆನ್ನಾಗಿ ಬೈಂಡಾದ ಪುಸ್ತಕಗಳ ಅಂದವನ್ನಾಗಲಿ, ಬಾಳಿಕೆಯನ್ನಾಗಲಿ ಹೊಗಳುವುದು ಅನಾವಶ್ಯಕ. ಯಾವ ಬಗೆಯ ರಟ್ಟನ್ನೂ ಎಂಥ ಕ್ಯಾಲಿಕೋವನ್ನೂ ಉಪಯೋಗಿಸಿ, ಯಾವ ರೀತಿಯಲ್ಲಿ ಬೈಂಡು ಮಾಡಿಸಿದರೆ, ಹೆಚ್ಚು ಬಾಳಿಕೆ ಬಂದೀತು ಎಂಬ ವಿಷಯದಲ್ಲಿ ನಮ್ಮಲ್ಲಿ ಪ್ರಯೋಗಗಳು ನಡೆಯುತ್ತಿಲ್ಲವೆಂದು ತಿಳಿಸುವುದೂ ಅನಾವಶ್ಯಕ. ಹವಾಗುಣದಿಂದ ಬಾಗದಿರುವ ರಟ್ಟಾಗಲಿ, ಕಣ್ಣಿಗೆ ಅಂದವಾದ, ಗಟ್ಟಿಯಾದ, ಸುಲಭವಾಗಿ ಹುಳು ಹೊಡೆಯದಿರುವ ಬಟ್ಟೆಯಾಗಲಿ ಈಗ ದೊರೆಯುವುದು ಕಷ್ಟವಾಗಿದೆ. ಉತ್ತಮ ಬೈಂಡಿನ ಪುಸ್ತಕ ವಿರಳ.

ಪುಸ್ತಕ ಪ್ರಕಟಣೆ ಒಂದು ಕಲೆ. ಪುಸ್ತಕದ ತಯಾರಿಕೆಯ ಒಂದೊಂದು ಹಂತದಲ್ಲೂ ಅದರ ಆಕಾರ ಮೈಕಟ್ಟುಗಳನ್ನು ನಿರ್ಧರಿಸುವುದರಲ್ಲಿ. ಕಾಗದವನ್ನು ಚುನಾಯಿಸುವುದರಲ್ಲಿ, ಚಿತ್ರಗಳನ್ನು ಬರೆಸುವುದರಲ್ಲಿ, ಟೈಪುಗಳನ್ನು ಮುದ್ರಣ ಕಾರರನ್ನು ಗೊತ್ತುಮಾಡುವುದರಲ್ಲಿ (ಪುಸ್ತಕಗಳನ್ನು ಮುದ್ರಿಸುವ ಕಲೆಯನ್ನು ಬಲ್ಲ ಮುದ್ರಣಕಾರರ ಸಂಖ್ಯೆ ನಮ್ಮಲ್ಲಿ ಬಹು ಕಡಿಮೆ) ಹೊದಿಕೆಯನ್ನು ತಯಾರಿಸು ವುದರಲ್ಲಿ, ಬೈಂಡು ಮಾಡಿಸುವುದರಲ್ಲಿ ಹೀಗೆ ಒಂದೊಂದು ಅಂಶದಲ್ಲೂ ಪ್ರಕಾಶಕನ ಅಭಿರುಚಿ ವ್ಯಕ್ತವಾಗಿ ಪುಸ್ತಕ ರೂಪಗೊಳ್ಳುತ್ತದೆ.

ಆದ್ದರಿಂದಲೇ ಒಂದೊಂದು ಸಂಸ್ಥೆಯ ಪ್ರಕಟನೆಗಳು ಒಂದೊಂದು ರೀತಿ(Style)ಯವು ಆಗುವ ಸಂಭವ. ಇಂದಿನದು ಮಾತ್ರ ಬೇಸರ ತರುವಂಥ ಸಮತೆಯ ಪರಿಸ್ಥಿತಿ. ಮನಮೆಚ್ಚಿದ ಸಾಮಾನುಗಳನ್ನು ತಂದುಕೊಟ್ಟು ಸುಖ ಭೋಜನವನ್ನು ಏರ್ಪಡಿಸು ಎಂದು ಹೇಳಲಾಗುವುದಿಲ್ಲ, ಇದ್ದುದರಲ್ಲಿ ಹಬ್ಬ ಮಾಡು ಎಂದು ಹೇಳಿ ಸಮಾಧಾನಪಟ್ಟುಕೊಳ್ಳುವ ಕಾಲ. ಒಂದು ಕಡೆ ಉತ್ತಮವಾದ ಸರಕುಗಳ ಅಭಾವ ಇನ್ನೊಂದು ಕಡೆ ಎಷ್ಟೇ ಸುಲಭ ಬೆಲೆ ಕೊಟ್ಟರೂ ಪುಸ್ತಕದ ಬೆಲೆ ಹೆಚ್ಚು ಎಂದು ಕೂಗುವ ಜನ. ಇಂಥ ದುಷ್ಕಾಲದಲ್ಲಿಯೂ ಪ್ರಕಾಶಕನೂ ಒಮ್ಮೊಮ್ಮೆ ಪುಸ್ತಕವನ್ನು ಅಂದವಾಗಿ ತಯಾರಿಸಿ ಪ್ರಕಟಿಸಿದರೆ ಅವನು ಅಭಿನಂದನೀಯನೇ ಸರಿ. ಅದು ಸಂತೋಷಪಡುವ ವಿಷಯವೇ ಹೌದು.

೬

ಪುಸ್ತಕ ಅಚ್ಚಾಗಿ ಬೈಂಡಾಗಿ ಮುದ್ರಣಾಲಯದಿಂದ ಹೊರಬಿದ್ದ ಮೇಲೆ ಅವರ ಜೀವನದಲ್ಲಿ ಕಷ್ಟಕರವಾದ ದಶೆ ಆರಂಭವಾಗುತ್ತದೆ. ಪ್ರತಿಗಳು ಸಿದ್ಧವಾದ ಮೇಲೆ ಅವುಗಳನ್ನು ಮಾರಬೇಕು. ಗ್ರಂಥವನ್ನು ಪ್ರಕಟಿಸುವುದು ಒಂದು ವಿಧದಲ್ಲಿ ಸುಲಭ. ಅದನ್ನು ಮಾರುವುದು ಕಷ್ಟ. ಪುಸ್ತಕ ಮುದ್ರಣವಾಗುವ ಮೊದಲು ಅದು ಪ್ರಕಟ ವಾಗಿರುವ ಅಥವಾ ಮಾರಾಟಕ್ಕೆ ಸಿದ್ಧವಾಗಿರುವ ಸಂಗತಿ ಜನರಿಗೂ ವ್ಯಾಪಾರಿಗಳಿಗೂ ಗೊತ್ತಾಗಬೇಕು. ಅದನ್ನು ಗೊತ್ತುಪಡಿಸಲು ಪ್ರಕಾಶಕರು ಸಾಮಾನ್ಯವಾಗಿ ಹಲವು ಬಗೆಯ ಕಾರ್ಯ ಕ್ರಮಗಳನ್ನು ಕೈಗೊಳ್ಳುತ್ತಾರೆ.

೧) ಪುಸ್ತಕ ಸಿದ್ಧವಾಗುತ್ತಿರುವಂತೆಯೆ ಅದಕ್ಕೆ ಸಂಬಂಧಪಟ್ಟಂತೆ ಪ್ರಸಾರಣ ಪತ್ರ ಗಳನ್ನೂ (Circulars) ಹಸ್ತಪ್ರತಿಗಳನ್ನೂ (Handbills) ಗ್ರಂಥ ಪ್ರಶಂಸೆಯ ಪತ್ರಗಳನ್ನು (Blurbs) ತಯಾರಿಸಿ ಹಂಚುತ್ತಾರೆ. ಅವುಗಳಲ್ಲಿ ಗ್ರಂಥದ ವಿಷಯ ಸಾಮಾನ್ಯವಾಗಿ ಸ್ಥೂಲವಾಗಿ ವ್ಯಕ್ತವಾಗಿರುತ್ತದೆ. ಗ್ರಂಥ ಪ್ರಶಂಸೆಯ ಪತ್ರದಲ್ಲಿ ಗ್ರಂಥದ ವಿಷಯ ಪರಿಚಯದ ಜೊತೆಗೆ ಆದರ ಯೋಗ್ಯತೆಯನ್ನೂ ವಿವೇಚಿಸಿರುತ್ತಾರೆ. ಇದನ್ನು ಸರಿಯಾದ ರೀತಿಯಲ್ಲಿ ತಕ್ಕಷ್ಟು ಪ್ರಾಮಾಣ್ಯದಿಂದ ತಯಾರಿಸಿದಲ್ಲಿ ಗ್ರಂಥದ ವಿಷಯದಲ್ಲಿ ಕೊಳ್ಳುವವರಿಗೆ ಸುಮಾರಾಗಿ ಸರಿಯಾದ ಅಭಿಪ್ರಾಯವುಂಟಾಗಿ ಮಾರಾಟಕ್ಕೆ ಸಹಾಯವಾಗುತ್ತದೆ. ಕೇವಲ ಹೊಗಳಿಕೆಯ ಪತ್ರಗಳಿಂದ ಪ್ರಕಾಶಕನಿಗಾಗಲಿ ಕೊಳ್ಳುವವರಿಗಾಗಲಿ ಪ್ರಯೋಜನವಾಗಲಾರದು. ಜೇಬಿನ ಕಾದಂಬರಿಗಳು ಪ್ರಕಟವಾಗಲು ಆರಂಭವಾದಂದಿನಿಂದ ಹೊದಿಕೆಯ ಚಿತ್ರಪತ್ರವನ್ನು ವ್ಯಾಪಾರಿಗಳಿಗೆ ಕಳಿಸಿಕೊಡುವ ರೂಢಿ ಬಂದಿದೆ. ಕಾದಂಬರಿಯಿರಲಿ ಬೇರೆ ಗ್ರಂಥವಿರಲಿ ಹೊದಿಕೆಯ ಮೇಲೆ ಚಿತ್ರವಿರಲಿ ಇಲ್ಲದಿರಲಿ, ಹೊದಿಕೆಯನ್ನು ವ್ಯಾಪಾರಿಗಳಿಗೆಲ್ಲವ ಕಳಿಸಿ ಜನರ ಗಮನವನ್ನು ಪುಸ್ತಕದ ಕಡೆ ಸೆಳೆಯುವ ಪ್ರಯತ್ನ ನಡೆಸುವುದು ಈಗ ಸರ್ವ ಸಾಧಾರಣ ಪದ್ಧತಿಯಾಗಿದೆ.

೨) ಪುಸ್ತಕ ಸಿದ್ಧವಾದೊಡನೆ ಅಥವಾ ಮಾರಾಟಕ್ಕೆ ಪ್ರತಿಗಳು ಸಿದ್ಧವಾಗುವುದಕ್ಕೆ ಸ್ವಲ್ಪ ಮೊದಲು ಹಲವು ಪ್ರತಿಗಳನ್ನು ವಿಮರ್ಶೆಗಾಗಿ ಪ್ರಮುಖ ಪತ್ರಿಕೆಗಳಿಗೆ ಪ್ರಕಾಶಕರು ಕಳಿಸುತ್ತಾರೆ. ಪತ್ರಿಕೆಗಳಲ್ಲಿ ಬರುವ ವಿಮರ್ಶೆಯನ್ನು ಓದಿ ಜನ ಪುಸ್ತಕ ಕೊಳ್ಳಲು ಹವಣಿಸಬಹುದೆಂಬ ನಿರೀಕ್ಷೆಯಿದೆ. ದಕ್ಷರಾದ ವಿದ್ವಾಂಸರು ಗ್ರಂಥ ವಿಮರ್ಶೆಯಲ್ಲಿ ತೊಡಗಿದರೆ ನಮ್ಮ ನಿರೀಕ್ಷೆ ಸ-ಲವಾಗುವ ಸಂಭವ ವುಂಟು. ಅಂಥವರ ವಿಮರ್ಶೆಯಿಂದ ಜನಕ್ಕೂ ಲೇಖಕನಿಗೂ ಪ್ರಕಾಶಕನಿಗೂ ಪ್ರಯೋಜನವುಂಟು. ನಮ್ಮಲ್ಲಿ ಸಾಹಿತ್ಯಶಾಸ ಕಲೆಗಳಿಗಾಗಿಯೇ ಮೀಸಲಾಗಿ ರುವ ಪತ್ರಿಕೆಗಳು ವಿರಳ. ಸಮರ್ಥರಾದವರನ್ನು ವಿಮರ್ಶೆಗಾಗಿ ನಿಯೋಜಿಸುವ ಪತ್ರಿಕೆಗಳೂ ವಿರಳ. ಈಗ ಬರುತ್ತಿರುವ ವಿಮರ್ಶೆಗಳಲ್ಲಿ ಬಹುಪಾಲು ವಿಷಯದ ಸರಿಯಾದ ವಿವೇಚನೆಯಿಲ್ಲದ ಸ್ವಾರಸ್ಯವಿಲ್ಲದ ಬರಹಗಳು.

೩.) ಪತ್ರಿಕೆಗಳು ಹೊಸ ಪ್ರಕಟನೆಗಳನ್ನು ಜಾಹೀರಾತುಪಡಿಸುವುದರ ಮೂಲಕ ಅವು ಜನರ ಗಮನಕ್ಕೆ ಬರುತ್ತವೆ. ನಮ್ಮ ಪುಸ್ತಕಗಳ ಬೆಲೆ ಕಡಿಮೆ. ಅವುಗಳ ಮಾರಾಟದ ಸಂಖ್ಯೆಯೂ ಅಲ್ಪ. ಜಾಹೀರಾತಿನ ದರಗಳು ಹೆಚ್ಚು. ನಮ್ಮ ಪುಸ್ತಕಗಳು ಜಾಹೀರಾತಿನ ಬೆಲೆಯನ್ನು ಹೆಚ್ಚು ಹೊರಲಾರವು. ಈ ವಿಷಯ ದಲ್ಲಿ ಸೋಪು, ಸಿಗರೇಟು ಮೊದಲಾದ ಸರಕುಗಳೊಡನೆ ಸ್ಪರ್ಧಿಸಲಾರೆವು. ಅಲ್ಲದೆ ಪುಸ್ತಕ ಜಾಹೀರಾತಿಗೆ (Book advertisement) ತಕ್ಕುದಾದ ಪ್ರತ್ಯೇಕ ಪತ್ರಿಕೆಗಳೂ ನಮ್ಮಲ್ಲಿ ಅಪರೂಪ. ಹೆಚ್ಚಿನ ಜಾಹೀರಾತಿಗೆ ತಗಲುವ ವೆಚ್ಚಕ್ಕೆ ಅನುಗುಣವಾದ ಪ್ರತಿಫಲವಿದೆಯೆ ಎಂಬುದು ಅನುಮಾನಾಸ್ಪದವಾದ ವಿಷಯ. ಈ ಕಾರಣಗಳಿಂದ ಪ್ರಕಾಶಕರು ಜಾಹೀರಾತಿಗೆ ಮಿತವಾಗಿ ಖರ್ಚು ಮಾಡುತ್ತಾರೆ.

೪) ಪ್ರಕಾಶಕರು ತಮ್ಮ 'ಪುಸ್ತಕ ಪಟ್ಟಿ'(Catalogues)ಗಳನ್ನು ಆಗಾಗ್ಗೆ ಮುದ್ರಿಸಿ, ಪುಸ್ತಕ ವ್ಯಾಪಾರಿಗಳಿಗೂ ಬೇಡಿಕೆಯಿರುವವರಿಗೂ ಕಳಿಸಿ ಆ ಮೂಲಕ ತಮ್ಮ ಪ್ರಕಟನೆಗಳ ವಿಷಯವನ್ನು ಪ್ರಸಿದ್ಧಪಡಿಸುತ್ತಾರೆ.

೫) ಪಾಶ್ಚಾತ್ಯದೇಶಗಳಲ್ಲಿ ದೊಡ್ಡ ಪ್ರಕಾಶಕ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಪ್ರಕಟನೆಗಳ ವಿಚಾರವನ್ನೂ ತಿಳಿಸುವುದಕ್ಕಾಗಿಯೇ ಮಾಸ ಪತ್ರಿಕೆಗಳನ್ನು ಹೊರಡಿಸುವುದುಂಟು. ಅವುಗಳಿಗೆ "House organs' (ಪ್ರಕಟನಾಲಯದ ಪತ್ರಿಕೆ ಅಥವಾ ಪ್ರಕಾಶಕವಾಣಿ) ಎಂದು ಹೆಸರು. ನಮ್ಮಲ್ಲಿ ವಾಹಿನಿ ಪ್ರಕಾಶನ ದವರೂ ಶಾರದಾ ಪ್ರಕಟನಾಲಯದವರೂ ಈ ದಿಶೆಯಲ್ಲಿ ಕಾರ್ಯಾರಂಭ ಮಾಡಿ ಕೈಬಿಟ್ಟಿದ್ದಾರೆ. ಹೆಚ್ಚು ಸಂಖ್ಯೆಯಲ್ಲಿ ಪ್ರಕಟನೆಗಳು ಇಲ್ಲದಿದ್ದರೆ ತಿಂಗಳು ತಿಂಗಳೂ ವರದಿಮಾಡುವ ಪತ್ರಿಕೆಯನ್ನು ಹೊರಡಿಸುವುದು ಕಷ್ಟವಾಗುತ್ತದೆ.

ಪುಸ್ತಕ ಪ್ರಕಟವಾದ ಕೂಡಲೆ ಅದರ ಮಾರಾಟ ಆರಂಭವಾಗಬೇಕು. ಪುಸ್ತಕ ಮಾರಾಟಕ್ಕೆ ಮುಖ್ಯವಾದ ಸಾಧನ ಪುಸ್ತಕ ವ್ಯಾಪಾರಿಗಳು – ಪುಸ್ತಕದ ಅಂಗಡಿಗಳು. ಪುಸ್ತಕೋದ್ಯಮದ ವ್ಯವಸ್ಥೆಯಲ್ಲಿ ಪುಸ್ತಕ ವ್ಯಾಪಾರದಷ್ಟು ಅವ್ಯವಸ್ಥಿವಾದ ಭಾಗ ಮತ್ತೊಂದಿಲ್ಲ. ಕನ್ನಡ ದೇಶ ವಿಶಾಲವಾಗಿದ್ದರೂ ಪ್ರಮುಖ ವ್ಯಾಪಾರ ಸಂಸ್ಥೆಗಳು ಹೆಚ್ಚಾಗಿಲ್ಲ. ಅವುಗಳ ಸಂಖ್ಯೆಯನ್ನು ಬೆರಳುಗಳಿಂದ ಎಣಿಸಬಹುದು, ದೇಶದ ಅನೇಕ ಮುಖ್ಯಪಟ್ಟಣಗಳಲ್ಲಿ ಹಲವು ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ಕೂಡ, ಪುಸ್ತಕದಂಗಡಿಗಳು ಇಲ್ಲ. ಅನೇಕ ಊರುಗಳಲ್ಲಿ ಪುಸ್ತಕಗಳನ್ನು ಓದಲಿಚ್ಛಿಸುವ, ಕೊಳ್ಳಲಿಚ್ಛಿಸುವ ಜನ ಈಗ ಇದ್ದಾರೆ. ಆದರೆ, ಅವರಿಗೆ ಪುಸ್ತಕಗಳು ದೊರಕುವುದಿಲ್ಲ. ಪುಸ್ತಕಗಳನ್ನು ಮಾರುವ ಅಂಗಡಿ ಅವರೂರಲ್ಲಿ ಇರುವುದಿಲ್ಲ. ಪುಸ್ತಕ ವ್ಯಾಪಾರವೊಂದರಿಂದಲೇ ಜೀವನ ಹರಿಯುವುದಿಲ್ಲವಾದ್ದರಿಂದ ಆ ಸ್ಥಳಗಳಲ್ಲಿ ಪುಸ್ತಕದಂಗಡಿಗಳು ಇಲ್ಲ. ಈ ಜನಕ್ಕೆ ಪುಸ್ತಕಗಳನ್ನು ಒದಗಿಸಲು ಅವರಿರುವಲ್ಲಿಗೇ ಪುಸ್ತಕಗಳನ್ನು ಸಂಚಾರ ವ್ಯವಸ್ಥೆಯಿಂದ ಒಯ್ಯಬೇಕು. ಪುಸ್ತಕ ಅಂಗಡಿ ಒಂದು ವೇಳೆ ಇದ್ದರೂ ಅಲ್ಲಿನ ಗಿರಾಕಿ ಮಿತವಾದದ್ದರಿಂದಲೂ ಸ್ಥಳಕ್ಕೆ ಸಾರಿಗೆಯ ಅನುಕೂಲವಿರದಿರುವುದರಿಂದಲೂ ಪೋಸ್ಟಿನಲ್ಲಿ ತರಿಸುವುದು ಲಾಭಕರ ಅಲ್ಲದಿರುವುದರಿಂದಲೂ ಅಲ್ಲಿಗೇ ಪುಸ್ತಕಗಳನ್ನು ಒಯ್ಯಬೇಕು. ಹಿಂದೆಲ್ಲ ಉತ್ತರ ಕರ್ನಾಟಕದ ಪ್ರಕಾಶಕರು ಪುಸ್ತಕಗಳನ್ನು ಹೊತ್ತು ಊರೂರು ತಿರುಗಿ ಮಾರಾಟ ಮಾಡುತ್ತಿದ್ದರು. ಈಗಿನ ಬೆಲೆ ಏರಿಕೆಯ ದಿನಗಳಲ್ಲಿ ಹಾಗೆ ಮಾಡುವುದು ಆರ್ಥಿಕವಾಗಿ ಸಾಧ್ಯವೆ ಎಂಬುದು ಪರೀಕ್ಷಿಸಬೇಕಾದ ವಿಷಯ. ನಾಲ್ಕಾರು ಮಂದಿ ಪ್ರಕಾಶಕರು ಒಟ್ಟಾಗಿ ಸೇರಿ ವ್ಯವಸ್ಥೆ ಮಾಡಿದರೆ ಸಂಚಾರ ವ್ಯಾಪಾರ ಕ್ರಮ ಯಶಸ್ವಿಯಾಗಲು ಅಡ್ಡಿಯಿಲ್ಲ.

ಅನೇಕ ದೇಶಗಳಲ್ಲಿ ಪುಸ್ತಕ ಭಂಡಾರಗಳು ಪುಸ್ತಕಗಳಿಗೆ ಒಳ್ಳೆಯ ಗಿರಾಕಿ ಯನ್ನೊದಗಿಸುತ್ತವೆ. ಕನ್ನಡ ದೇಶದಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಿವೆ. ಸಂಖ್ಯೆಯಲ್ಲಿ ಸ್ಕೂಲು ಲೈಬ್ರರಿಗಳ ಸಂಖ್ಯೆ ತಕ್ಕಮಟ್ಟಿ ಗಿದ್ದರೂ ಅವುಗಳಿಗೆ ಸಲೀಸಾಗಿ ಪುಸ್ತಕಗಳನ್ನು ಒದಗಿಸುವಂತಿಲ್ಲ. ಸರಕಾರದ ರೂಲ್ಸುಗಳ ಮತ್ತು ಇತರ ರೀತಿಯ ಅಡಚಣೆಗಳು ಇವೆ.

ವ್ಯಾಪಾರದ ಅಭಿವೃದ್ಧಿಗೆ ಸಾಲ ಅವಶ್ಯಕವಾದ ಒಂದು ಅಂಗ. ಕನ್ನಡದಲ್ಲಿ ಈಗ ಪ್ರತಿತಿಂಗಳೂ ತಕ್ಕಮಟ್ಟಿನ ಸಂಖ್ಯೆಯಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ. ಅವೆಲ್ಲವು ಗಳನ್ನೂ ಕೊಂಡಿಡುವುದು ಪುಸ್ತಕ ವ್ಯಾಪಾರಿಗೆ ಕಷ್ಟ ಸಾಲದ ಮೇಲೆ ಪುಸ್ತಕಗಳನ್ನು ಪಡೆಯುವುದು ಅನೇಕ ಸಂದರ್ಭಗಳಲ್ಲಿ ಅವನಿಗೆ ಅನಿವಾರ್ಯವಾಗುತ್ತದೆ. ಆದರೆ ಸಾಲದ ಮೇಲೆ ಪುಸ್ತಕ ಕೊಟ್ಟರೆ ಹಣದ ಜೊತೆಗೆ ವಿಶ್ವಾಸವೂ ಹೋಗಿ ನಿಷ್ಠುರ ಪ್ರಾಪ್ತಿಯಾಗುವ ಸಂದರ್ಭಗಳು ಅಪರೂಪವಲ್ಲ. ಈ ಪರಿಸ್ಥಿತಿ ಬದಲಾವಣೆಯಾದರೆ ವ್ಯಾಪಾರದ ಬೆಳವಣಿಗೆಗೆ

ಸಹಾಯಕವಾಗುತ್ತದೆ. ಪುಸ್ತಕ ವ್ಯಾಪಾರದಲ್ಲಿ ಈಗ ಪ್ರಚಲಿತವಿರುವ ಪುಸ್ತಕ ವಿನಿಮಯ ಪದ್ಧತಿಯೂ ವ್ಯಾಪಾರಕ್ಕೆ ಹಾನಿಕರವಾಗಿದೆ. ಅದು ಪುಸ್ತಕಗಳ ನೈಜ ಚಲನೆಯನ್ನು ಅಡ್ಡಿಪಡಿಸುತ್ತದೆ.

೮

ಪ್ರಕಟನೋದ್ಯಮ ನಮ್ಮಲ್ಲಿನ್ನೂ ಶೈಶವಾವಸ್ಥೆಯಲ್ಲಿದೆ. ಇತರ ವ್ಯಾಪಾರಿಗಳೊಡನೆ ಹೋಲಿಸಿದರೆ ಪ್ರಕಾಶನ ಒಂದು ದೊಡ್ಡ ವ್ಯಾಪಾರವಲ್ಲ, ಅದರಲ್ಲಿ ಕ್ರಮಕ್ಕೆ ತಕ್ಕ ಫಲವಿಲ್ಲ. ಆದರೆ ಅದರಲ್ಲಿ ತೋರಿಬರುವ ಒಂದು ಆದರ್ಶ ಜೀವನದ ರೀತಿ ಯುವಕರನ್ನು ಸೆಳೆಯುತ್ತದೆ. ಅದು ಮೇಲೆ ತೋರುವಷ್ಟು ಸುಲಭವಾದ ಕೆಲಸವಲ್ಲ, ಬಹು ಜವಾಬ್ದಾರಿಯುತವಾದ ಉದ್ಯೋಗ. ಅದು ಒಂದು ಕಡೆ ಕಲೆ ಇನ್ನೊಂದು ಕಡೆ ವ್ಯಾಪಾರ, ಕಲಾಭಿವೃದ್ಧಿಗೆ ಅವಶ್ಯಕವಾದ ಅಭಿರುಚಿಯೂ ಜ್ಞಾನದಾಹವೂ ಪ್ರಕಾಶಕನಿಗೆ ಅಗತ್ಯವಾದ ಕಾರ್ಯೋತ್ಸಾಹ, ಸಾಧನಶಕ್ತಿ ವಸ್ತುಗಳು. ವಿದ್ವಾಂಸನಿಗೆ ಕೆಲವು ಸಾಹಿತ್ಯ ಶಾಸಗಳಲ್ಲಿ ಮಾತ್ರ ಆಸಕ್ತಿಯಿರಬಹುದು. ಪ್ರಕಾಶಕನಿಗೆ ಜ್ಞಾನವಿಷಯಕಗಳಾದ ಎಲ್ಲ ವಿಚಾರಗಳಲ್ಲೂ ಆಸಕ್ತಿ ಇರಬೇಕು. ಜೊತೆಗೆ ವ್ಯಾಪಾರಸ್ಥನ ಸಾಮರ್ಥ್ಯವೂ ಇರಬೇಕು. ಆದ್ದರಿಂದಲೆ ಮುಂದುವರಿದ ದೇಶಗಳಲ್ಲಿ ಸಹ ಪ್ರಕಾಶಕನ ಕೆಲಸವೆಂದೂ ನಷ್ಟ ಸಂಭವವುಳ್ಳ ಉದ್ಯಮವೆಂದು ಪರಿಗಣಿತವಾಗಿದೆ.

ನಮ್ಮ ದೇಶ ಈಗ ಪ್ರಗತಿಪಥದಲ್ಲಿದೆ. ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಓದುವವರು ಬರೆಯುವವರೂ ಹೆಚ್ಚುತ್ತಿದ್ದಾರೆ. ಶಾಲೆಕಾಲೇಜುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಸಾರ್ವಜನಿಕ ಪುಸ್ತಕ ಭಂಡಾರಗಳೂ ಇಂದಲ್ಲ ನಾಳೆ ದೇಶದ ಮೇಲೆಲ್ಲ ಹರಡಬಹುದು. ಇವೆಲ್ಲ ಲೇಖಕರಿಗೂ ಪ್ರಕಾಶಕರಿಗೂ ಧೈರ್ಯ ತರುವ ಸಂಗತಿಗಳು. ಪ್ರಕಟನೋದ್ಯಮದ ಭವಿಷ್ಯ ಆಶಾದಾಯಕವಾಗಿದೆಯೆಂದು ಸೂಚಿಸು ತ್ತವೆ. ಆದರೆ ಉದ್ಯಮದ ವ್ಯವಸ್ಥಿತವಾದ ಬೆಳವಣಿಗೆಗೆ ಪ್ರಕಾಶಕರ ಮತ್ತು ಪುಸ್ತಕ ವ್ಯಾಪಾರಿಗಳ ಸಂಘಟನೆ ಅತ್ಯಾವಶ್ಯಕ. ಪ್ರಕಾಶಕರು ಸಂಘಟಿತರಾಗದ ಹೊರತು ಉದ್ಯಮದ ಕುಂದುಕೊರತೆಗಳನ್ನು ನೀಗಲಾಗದು. ಅಡ್ಡಿ ಬರುವ ಆತಂಕಗಳನ್ನು ಎದುರಿಸಲಾರರು. ಸ್ಪರ್ಧೆಯಿಂದ ಹುಟ್ಟುವ ದೋಷದೌರ್ಬಲ್ಯಗಳನ್ನು ತೊಡೆಯಲಾರರು.

ಬೆಂಗಳೂರಿನಲ್ಲಿ(೧೯೬೨) ನಡೆದ ವಿಚಾರಸಂಕಿರಣದಲ್ಲಿ ಮಂಡಿಸಿದ ಲೇಖನ

ಈ ಲೇಖನದ ವಿಷಯ ಗ್ರಂಥ ಪ್ರಕಾಶನ (General Publishing), ಆದ್ದರಿಂದ ಇಲ್ಲಿ ಪುಸ್ತಕ ಪ್ರಕಾಶಕರನ್ನೂ (Educational Publishers)ಪಠ್ಯಪುಸ್ತಕಗಳನ್ನೂ ಕುರಿತು ಬರೆಯುತ್ತಿಲ್ಲ.

# ಅನುಬಂಧ ೪

'ಸಹಸ್ರ ಗ್ರಂಥ ಪುರುಷ' - ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮೈಸೂರಿನ ಕಾವ್ಯಾಲಯ ಪ್ರಕಾಶನದ ಶ್ರೀಮಾನ್ ಕೂಡಲಿ ಚಿದಂಬರಂರವರು ಅರ್ಧಶತಮಾನಗಳಿಗಿಂತಲೂ ಹೆಚ್ಚುಕಾಲ ಗ್ರಂಥ ಪ್ರಕಾಶನಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಅವರನ್ನು ನಾನು ಬಾಲ್ಯದಿಂದಲೂ ಬಲ್ಲೆ. ಅವರು ಕನ್ನಡದ ನವೋದಯ ಸಾಹಿತ್ಯದ ಕಾಲದಲ್ಲಿ - ಗ್ರಂಥ ಪ್ರಕಾಶನಕ್ಕೆ ಆರ್ಥಿಕವಾಗಿ ಯಾವ ಪ್ರೋತ್ಸಾಹವೂ ಇಲ್ಲದಿದ್ದ ಕಾಲದಲ್ಲಿ - ಕೇವಲ ಕನ್ನಡ ಗ್ರಂಥ ಸಾಹಿತ್ಯದ ಪ್ರೇಮದಿಂದ ಪ್ರಕಾಶನ ಕಾರ್ಯಕ್ಕೆ ಇಳಿದರು. ಸ್ವತಃ ಪದವೀಧರರೂ ಕಾನೂನು ಪದವೀಧರರೂ ಆಗಿ, ಅಂದಿನ ಕಾಲದಲ್ಲಿ ಜೀವನಕ್ಕಾಗಿ ಒಳ್ಳೆಯ ಸರ್ಕಾರಿ ಅಧಿಕಾರ ದೊರೆಯುವ ಅವಕಾಶಗಳಿದ್ದರೂ ಅವದನ್ನು ನಿರಾಕರಿಸಿ, ಕನ್ನಡ ಗ್ರಂಥ ಪ್ರಕಾಶನ ಕಾರ್ಯವನ್ನು - ಜೀವನಕ್ಕೆ ಮುಖ್ಯ ಕಸುಬನ್ನಾಗಿ ಆರಿಸಿಕೊಂಡುದು ಅವರ ಭಾಷಾಪ್ರೇಮ ಮತ್ತು ಸಾಹಸದ ಕೆಚ್ಚಿನ ಪ್ರತೀಕ, ಆ ಕಾಲಕ್ಕೆ ಈ ಬಗೆಯ ಧೈರ್ಯಕ್ಕೆ ಅವರದು ಅಪೂರ್ವ ಉದಾಹಣೆ. ಪ್ರಕಾಶನ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಚಿದಂಬರಂರವರು ಒಂದೆರಡು ಬ್ಯಾಂಕು, ಮುಂತಾದವುಗಳಲ್ಲಿಯೂ ನೌಕರಿ ಸಹ ಮಾಡಿದರೂ ಅದಾವುದೂ ಅವರ ಮನಸ್ಸಿಗೆ ತೃಪ್ತಿಯನ್ನು ಕೊಡಲಿಲ್ಲ. ಅನಂತರ ಶಿವಮೊಗ್ಗ ಕರ್ನಾಟಕ ಸಂಘದಲ್ಲಿ - ಗೌರವ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಕೆಲವು ಉತ್ತಮ ಗ್ರಂಥಗಳನ್ನೂ ಸಂಘದ ವತಿಯಿಂದ ಪ್ರಕಟಿಸಿದರು. ಕೆಲವು ಕಾಲ 'ವಿಚಾರವಾಹಿನಿ', ಎಂಬ ವೈಚಾರಿಕ ಪ್ರಧಾನವಾದ ಮಾಸಪತ್ರಿಕೆಯ ಸಂಪಾದಕರೂ ಆಗಿದ್ದರು, ಸಂಸ್ಥಾನದ ವಯಸ್ಕರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯೂ ಆಗಿದ್ದರು.

ಹೀಗೆ ಚಿದಂಬರಂ ಅವರು ಜೀವನಕ್ಕಾಗಿ ನಾನಾ ಹವ್ಯಾಸಗಳನ್ನು ಕೈಗೊಂಡರೂ, ಅವರ ಮೂಲ ಪ್ರಕೃತಿಯಾದ ಕನ್ನಡ ಗ್ರಂಥ ಪ್ರಕಾಶನ ಒಂದು, ಅವರನ್ನು ಹಿಡಿದುಕೊಂಡೇಬಿಟ್ಟಿತು. ಅದು ಅವರಿಗೆ ಒಂದು ಹೊಣೆಗಾರಿಕೆ ಯಾಯಿತೇ ಹೊರತು ಸಂಪಾದನೆಯ ಮಾರ್ಗವಾಗಲಿಲ್ಲ. ಅವರು ಪ್ರಕಟಿಸಿದ ಮೊದಲ ಗ್ರಂಥದ ಯೋಗ, ನನ್ನ 'ಸಾಹಿತ್ಯದ ಜೀವಾಳ' ಎಂಬ ಕೃತಿಗೆ ದೊರಕಿತು. ಚಿದಂಬರಂ ಅವರು ಆಧುನಿಕ ಕನ್ನಡ ಸಾಹಿತ್ಯ ಕೃತಿಗಳಿಗೆ - ಕತೆ ಕಾದಂಬರಿ, ಕವಿತೆ, ನಾಟಕ, ಪ್ರಬಂಧ, ಲಲಿತ ಸಾಹಿತ್ಯ - ಇದಕ್ಕೆ ಹೆಚ್ಚು ಪ್ರಾಧಾನ್ಯ ಕೊಡುತ್ತಿದ್ದರು. ಅವರು ಸಾಹಿತಿಯೂ ತಮ್ಮ ಸ್ವಂತ ಶಕ್ತಿಯಿಂದಲೇ,

ಲೇಖಕರೂ ಉತ್ತಮ ಅಭಿರುಚಿ ಯುಳ್ಳವರೂ ಆದುದರಿಂದ, ತೂಕಮಾಡಿ, ಒಳ್ಳೆ ಮೌಲ್ಯದ ಕೃತಿಗಳನ್ನೇ ಪ್ರಕಟಿಸು ತ್ತಿದ್ದರು. ಅವರು ಪ್ರಕಟಿಸುವುದೆಂದರೆ. ಸಹೃದಯ ವಿಮರ್ಶೆಯಲ್ಲಿ ಗ್ರಂಥ, ತೇರ್ಗಡೆಯಾದಂತೆ. ಎಲ್ಲಾ ಕರಡನ್ನು (Proof) ಅವರು ಬೇಸರವಿಲ್ಲದೆ ತಿದ್ದುತ್ತಿದ್ದರು. ಕುವೆಂಪು, ಬಿ.ಎಂ.ಶ್ರೀ., ತೀ.ನಂ.ಶ್ರೀ., ಪು.ತಿ.ನ., ಎ.ಎನ್. ಮೂರ್ತಿರಾವ್, ಗೋಪಾಲಕೃಷ್ಣ ಅಡಿಗ ಇವರೆಲ್ಲರ ಗ್ರಂಥಗಳ ಪ್ರಥಮಾವೃತ್ತಿಗಳನ್ನು ಪ್ರಕಟಿಸಿದ್ದಾರೆ. ಡಿ.ವಿ.ಜಿ.ಯವರ ಎಲ್ಲಾ ಕೃತಿಗಳನ್ನು ಪ್ರಕಟಿಸಿದ್ದಾರೆ. ಹೆಚ್ಚು ಕಡಿಮೆ ಇಂಗ್ಲಿಷಿನಲ್ಲಿ ಸಹ ಕಾವ್ಯಾಲಯದವರು ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅವರು ಪ್ರಕಟಿಸಿದ ಗ್ರಂಥಗಳ ಸಂಖ್ಯೆ ಸಾವಿರದ ಸಮೀಪಕ್ಕೆ ಹೋಗಬಹುದು. ಅಷ್ಟು ಗ್ರಂಥಗಳನ್ನೂ ಅವರೇ ಓದಿ ಪ್ರಕಟಿಸಿದರು. ಅವುಗಳ ಕರಡುಗಳನ್ನು ಅವರೇ ತಿದ್ದಿದರು. 'ಈ ಕರಡು ತಿದ್ದಿಯೇ ನಿಮ್ಮ ಕಣ್ಣು ಕುರುಡಾಗಿತ್ತೆ' ಎಂದು ನಾನು ಅವರನ್ನು ಪದೇ ಪದೇ ಹಾಸ್ಯ ಮಾಡುತ್ತಿದ್ದುದುಂಟು ಅವರ ಪ್ರಕಟಣೆಗಳಲ್ಲಿ ನಾಲ್ಕು ಐದುನೂರು ಪುಟಗಳ ಗ್ರಂಥಗಳೂ ಸಹ ವಿಪುಲವಾಗಿವೆ, ಕನ್ನಡದಲ್ಲಿ ಇಷ್ಟು ಪ್ರಕಟಿಸುವುದರ ಕಷ್ಟ ಅದನ್ನು ಅನುಭವಿಸಿದವರಿಗೇ ಗೊತ್ತು.

ಪ್ರಾರಂಭದಲ್ಲಿ ಶ್ರೀ ಚಿದಂಬರಂರವರು ಬಹಳ ಆಶಾವಾದಿಗಳಾಗಿವೆಯೇ ತಾವು ಆರಿಸಿಕೊಂಡ ಕಠಿಣವಾದ ಕಾರ್ಯವನ್ನು ಸಾಗಿಸತೊಡಗಿದರು. ಮುದ್ರಣ ಕಾಗದಗಳಿಗೆ ಹಣವನ್ನು ಕೊಡುವಂತೆ ಲೇಖಕರಿಗೂ ಗೌರವಧನವನ್ನು (Royalty) ಒಟ್ಟಾಗಿ ಒಂದೇ ಸಲ ಕೊಡುತ್ತಿದ್ದರು. ಇದು ಅವರಲ್ಲಿ ಹಣದ ಸೌಕರ್ಯ ಇರುವವರೆಗೆ ನಡೆಯಿತು. ಆನಂತರ, ನಮ್ಮಲ್ಲಿ ವಾಡಿಕೆಯಾಗಿರುವಂತೆ - ಗ್ರಂಥಗಳ ವ್ಯಾಪಾರವಾಗಲಿಲ್ಲ ಬರಬರುತ್ತಾ ಮುದ್ರಣಾಲಯ ಕಾಗದಗಳ ವೆಚ್ಚ ಅತಿಯೇರಿ, ಕೊನೆಯಲ್ಲಿ ಅವರು, ಗ್ರಂಥಗಳು ಖರ್ಚಾಗುತ್ತಿದ್ದಂತೆ ಲೇಖಕರಿಗೆ ಗೌರವಧನ ಕೊಡುತ್ತಿದ್ದರು.

ಶ್ರೀ ಚಿದಂಬರಂರವರ ಕನ್ನಡ ಪ್ರೇಮದಲ್ಲಿ ಒಂದು ಚಿರಸ್ಮರಣೀಯವಾದ ಅಂಶವೂ ಇದೆ. ಅವರ ಮಾತೃಭಾಷೆ ಮೊದಲು ತಮಿಳು, ತಮಿಳು ಮಾತೃಭಾಷೆ ಯಾದರೂ ಕನ್ನಡಕ್ಕೆ ತಮ್ಮ ಬಾಳನ್ನೆಲ್ಲಾ ತೆತ್ತರು. ಕನ್ನಡದಲ್ಲಿ ಅವರು ಉತ್ತಮ ಲೇಖಕರು, ಗೌರೀಶಿಖರವನ್ನು ಏರಿದ ತೇನ್‌ಸಿಂಗರನ್ನು ಕುರಿತ ಅವರ ಕೃತಿ ತುಂಬಾ ಜನಪ್ರಿಯವಾಗಿದೆ.

ಚಿದಂಬರಂರವರು ಸ್ವಭಾವದಿಂದ ಸುಸಂಸ್ಕೃತರೂ, ಸ್ನೇಹಪರರು, ರಾಶಿಕಾಶಿ ಯಾಗಿ ಬಿದ್ದಿರುವ ತಾವು ಪ್ರಕಟಿಸಿದ ಗ್ರಂಥಗಳನ್ನು ನೋಡಿ ಎಂದಿಗೂ ಮನಃಶಾಂತಿ ಯನ್ನು ಕಳೆದುಕೊಂಡವರಲ್ಲ, ಅವರಬಳಗವಾದ ಅಸಂಖ್ಯಾತ ಲೇಖಕರೊಂದಿಗೆ, ಅವರ ಸಂಪರ್ಕ ಸದಾ ಮೈತ್ರಿಪೂರ್ಣವಾಗಿತ್ತು. ಅವರ ನಿಧನದಿಂದ ಕನ್ನಡದ ಸಾರಸ್ವತ ಪ್ರಪಂಚ ನಿಷ್ಠ ಸೇವಕನನ್ನು ಕಳೆದುಕೊಂಡಿದೆ.

೨೬.೦೯.೧೯೮೦ರಲ್ಲಿ ಪ್ರಕಟವಾದ ಲೇಖನ

# ಅನುಬಂಧ ೫

## ಹುಯಿಲಿಲ್ಲದೆ ಬೆಳೆದ ಕಾವ್ಯಾಲಯ - ಎ.ಎನ್. ಮೂರ್ತಿರಾವ್

ಚಿದಂಬರಂ ಅವರ ಪರಿಚಯ ನನಗೆ ಮೊದಲು ಆದದ್ದು ಯಾವಾಗ ಎಂಬುದರ ನೆನಪಿಲ್ಲ, ನಾನು ಮಹಾರಾಜರ ಕಾಲೇಜಿನಲ್ಲಿ ಟ್ಯೂಟರ್ ಆಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ ಒಂದೆರಡು ತಿಂಗಳು (ವರ್ಷದ ಕೊನೆಯಲ್ಲಿ) ಅವರಿದ್ದ ತರಗತಿಗೆ ಪಾಠ ಹೇಳಿದೆನಂತೆ. ಅವರ ಸಹಪಾಠಯಾಗಿದ್ದ ತೀ.ನಂ. ಶ್ರೀಕಂಠಯ್ಯ- ನವರು ನನಗೆ ಇದರ ನೆನಪು ಕೊಟ್ಟಿದ್ದರು. ಆದರೆ ಆಗ ನನಗೆ ಅವರಿಬ್ಬರ ಪರಿಚಯವೂ ಆಗುವ ಸಂದರ್ಭವೇನೂ ಬರಲಿಲ್ಲ, ನಾನು ಅವರನ್ನು ಮೊದಲು ಕಂಡದ್ದು ಸುಮಾರು ೧೯೩೦-೩೨ರ (?) ಅವಧಿಯಲ್ಲಿ ಶಿವಮೊಗ್ಗದಲ್ಲಿ, ಆಗ ಅವರ ಜೊತೆಯಲ್ಲಿದ್ದವರ ನೆನಪೂ ಇದೆ. ಸ್ವಾತಂತ್ರ್ಯ ಬಂದಮೇಲೆ ರಾಜ್ಯಸಭೆಯ ಉಪಾಧ್ಯಕ್ಷ ರಾಗಿದ್ದ ಎಸ್.ವಿ. ಕೃಷ್ಣಮೂರ್ತಿಯವರು, ಸರ್ವಶ್ರೀ ಕೆರೋಡಿ ಕೃಷ್ಣಮೂರ್ತಿಯವರು (ಇವರು ಬರೆದ ಸಣ್ಣಕಥೆ, - 'ಕಂಡದ್ದು ನಾಲ್ಕು ಸರ್ತಿ'(?) ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿ ಜನರ ಮೆಚ್ಚುಗೆ ಪಡೆದಿತ್ತು), ವಿಷ್ಣುಭಟ್ಟರು, ಬಿ.ಎಲ್. ಶ್ರೀಹರಿ ಎಂಬುವರು (ನನ್ನ ನೆನಪನ್ನು ನೆಚ್ಚಬಹುದಾದರೆ, ಇವರು ತೀರ್ಥಹಳ್ಳಿಯ ಬ್ಯಾಂಕೊಂದರಲ್ಲಿ ಚಿದಂಬರಂರೊಡನೆ ಕೆಲಸ ಮಾಡುತ್ತಿದ್ದರು.) ಭೂಪಾಳಂ ಚಂದ್ರಶೇಖರಯ್ಯ ಮತ್ತು ಅವರ ತಮ್ಮ ಪುಟ್ಟನಂಜಪ್ಪ. ಈ ಗುಂಪಿನಲ್ಲಿದ್ದವರ ಪೈಕಿ ಶ್ರೀಹರಿಯವರನ್ನೂ ವಿಷ್ಣುಭಟ್ಟರನ್ನೂ ಇದವರೆಗೆ ಮತ್ತೆ ನೋಡಿದ ನೆನಪಿಲ್ಲ, ಆಗ ಇವರೆಲ್ಲರೂ ಶಿವಮೊಗ್ಗ ಕರ್ಣಾಟಕ ಸಂಘದ ಜೀವಸತ್ವವಾಗಿದ್ದವರು. ಬೇಸಗೆ ರಜ ಬಂದಾಗ ಶ್ರೀ ಕುವೆಂಪು ಅವರೂ ತಮ್ಮ ಊರಿಗೆ ಹೋಗುವ ದಾರಿಯಲ್ಲಿ ಶಿವಮೊಗ್ಗದಲ್ಲಿ ನಿಂತು ಈ ಗುಂಪಿಗೆ ಸೇರುತ್ತಿದ್ದರು.

ನನ್ನ 'ಹಗಲುಗನಸುಗಳು' ಮೊದಲು ಪ್ರಕಟವಾದದ್ದು ಶಿವಮೊಗ್ಗ ಕರ್ನಾಟಕ ಸಂಘದಿಂದ, ಅದಕ್ಕೆ ಚಿದಂಬರಂ ಅವರೇ ಮುಖ್ಯಕಾರಣರೆಂದು ತೋರುತ್ತದೆ. ಬಿ.ಎಂ.ಶ್ರೀಯವರ ನೇತೃತ್ವದಲ್ಲಿ ನಡೆದ ಕನ್ನಡ ಸಾಹಿತ್ಯ ಕ್ರಾಂತಿಗೆ ಆಗ ತುಂಬು ಯೌವನ. ವೀರಕಾವ್ಯ (ಕಥನ ಕಾವ್ಯಗಳ) ಕಡೆಯಿಂದ ಗಮನ ಇತರ ಕಡೆಗಳಿಗೆ ಸಾಗಿತ್ತು. 'ಇಂಗ್ಲಿಷ್

ಗೀತೆಗಳು' ಮತ್ತು ಮಾಸ್ತಿಯವರ 'ಸಣ್ಣ ಕತೆಗಳು' ಎಲ್ಲರ ಗಮನವನ್ನೂ ಸೆಳೆದಿದ್ದವು. ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿಬೆಳೆಯುತ್ತಿದ್ದವು.

ಆ ಕಾಲದಲ್ಲಿ ಸಾಹಿತ್ಯ ಪ್ರಕಟಣೆ ಲಾಭಕರವಾದ ಉದ್ಯಮವಾಗಿರಲಿಲ್ಲ (ಈ ಮಾತು ಬಹುಶಃ ಇಂದೂ ನಿಜ, ನಮ್ಮ ಜನ ಪುಸ್ತಕಗಳನ್ನು ಎರವು ತಂದಾರೇ ಹೊರತು ಕೊಳ್ಳುವುದಿಲ್ಲ!) ಒಳ್ಳೆಯ ಪುಸ್ತಕದ ೧೦೦೦ ಪ್ರತಿ ಅಚ್ಚು ಹಾಕಿಸಿದರೆ ಅದನ್ನು ಮಾರಿ ಕೈಕೊಡವಿಕೊಳ್ಳಲು ೧೦-೧೨ ವರ್ಷ ಹಿಡಿಯುತ್ತಿತ್ತು. ಆದರೂ ಚಿದಂಬರಂ ಸಾಹಿತ್ಯದ ಸೆಳೆತವನ್ನು ತಪ್ಪಿಸಿಕೊಳ್ಳಲಾಗಲಿಲ್ಲ; ಶಿವಮೊಗದಲ್ಲೇ ಇದ್ದು ತಮ್ಮ ಪ್ರಕಟನಾ ಸಂಸ್ಥೆಯನ್ನು ಆರಂಭಿಸಿದರು. ಅದು ಆಗ ಬಹುಶಃ ಅರ್ಧ ಹವ್ಯಾಸ ಅರ್ಧ ವೃತ್ತಿ ಆಗಿತ್ತು. ಅದನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶವೇನೋ ಮೊದಲಿನಿಂದಲೂ ಇದ್ದದ್ದೇ. ಅದನ್ನು ಮೈಸೂರಿಗೆ ತಂದಾಗಲೂ ನಮಗೆಲ್ಲ 'ಇದು ಅವಿವೇಕದ ಕೆಲಸವಾದೀತೇನೋ' ಎಂಬ ಸಂದೇಹವಿತ್ತು. ನಾವು ಮೂರು ನಾಲ್ಕು ಜನ ಅದನ್ನು ಅವರೊಡನೆ ಚರ್ಚಿಸಿದ ನೆನಪೂ ಇದೆ; ಚರ್ಚೆಗೆ ಚಿದಂಬರಂ ಅವರ ಪ್ರತಿಕ್ರಿಯೆಯ ನೆನಪೂ ಇದೆ. ಅವರು ಎಂದೂ ಹೆಚ್ಚು ಮಾತಿನವರಲ್ಲ, 'ಮೈಸೂರು ಹೊಸಸ್ಥಳ, ಶಿವಮೊಗ್ಗದಲ್ಲಿರುವಷ್ಟು ಜನಸಹಾಯ ಮೈಸೂರಲ್ಲಿ ದೊರೆಯದಿರ ಬಹುದು. ಇಲ್ಲಿ ಖರ್ಚು ಹೆಚ್ಚು' ಇತ್ಯಾದಿ ವಾದವನ್ನೆಲ್ಲ ಅವರು ತಾಳ್ಮೆಯಿಂದ ಕೇಳಿದರು; ವಿರುದ್ಧವಾಗಿ ಏನನ್ನೂ ಹೇಳಿದಂತೆ ನೆನಪಿಲ್ಲ, ನಮ್ಮ ಮಾತು ಅವರ ಮನಸ್ಸಿಗೆ ನಾಟಿದೆ ಎಂದೇ ನಮ್ಮ ಭಾವನೆ. ಅವರು ನಾವು ಹೇಳಿದ್ದನ್ನೆಲ್ಲ ಮೊದಲೆ ಯೋಚಿಸಿದ್ದಿರಬೇಕು. "I am taking a calculated risk' (ಸಾಧಕ-ಬಾಧಕಗಳನ್ನು ಯೋಚಿಸಿಯೇ ಈ ದಾರಿ ಹಿಡಿದಿದ್ದೇನೆ) ಎಂದು ಕಿರು ನಗೆ ನಗುತ್ತ ಒಂದೇ ಮಾತಿನಲ್ಲಿ ಉತ್ತರಕೊಟ್ಟರು. ತಮ್ಮ ನಿರ್ಧಾರದಂತೆ ನಡೆದುಕೊಂಡರು. ಅವರೊಡನೆ ಯಾವ ಚರ್ಚೆ ನಡೆದರೂ ಹೀಗೆಯೇ - 'ಇವರು ನಮ್ಮ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ' ಎಂಬ ಭಾವನೆಗೆ ಅವಕಾಶವಿರುತ್ತಿರುಲಿಲ್ಲ, ಅವರು ತಮ್ಮ ನಿಲುವನ್ನು ಪಟ್ಟು ಹಿಡಿದು ವೀರಾಭಿಮಾನದಿಂದ ಸಮರ್ಥಿಸುವ ಗೋಜಿಗೂ ಹೋಗುತ್ತಿರಲಿಲ್ಲ, ಒಂದೆರಡು ಮಾತಿನಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವುದು, ಅನಂತರ 'ಹಾಗೇ ನಿಶ್ಚಯ ಮಾಡಿ ಬಿಟ್ಟೆ' ಎನ್ನುವುದು.

ಮೈಸೂರಿಗೆ ಬಂದ ಮೇಲೆ ಅವರಿಗೆ ಮೇಲೆ ಹೇಳಿದ 'ಅವಿವೇಕ'ದ ಬಿಸಿ ತಟ್ಟಿತು. ಅದಕ್ಕೆ ಮೊದಲೇ ಅವರು 'ವಿಚಾರವಾಹಿನಿ' ಎಂಬ ಪತ್ರಿಕೆಯನ್ನು ಹೊರಡಿಸಿ ಕಷ್ಟನಷ್ಟಗಳನ್ನು ಅನುಭವಿಸಿಯಾಗಿತ್ತು.

ಶಿವರಾಮ ಶಾಸ್ತ್ರಿ ಮತ್ತು ನಾನು ಅವರೊಡನೆ ಮಾತಾಡುತ್ತಿದ್ದಾಗ ಅವರು 'ನೀವೆಲ್ಲ ಹೇಳಿದ್ದೀರಿ. ನನಗೂ ತೋರಿತ್ತು; ಬಂದಾಯಿತಲ್ಲ, ಸರಿಹೋಗಿಸಿಕೊಳ್ಳಬೇಕು' ಎಂದು ತಮ್ಮ

ಸಾವಧಾನದ ದನಿಯಲ್ಲಿ ಹೇಳಿ ಮೆಲುನಗೆ ನಕ್ಕರು. ಪರಿಸ್ಥಿತಿಯನ್ನು ತಿಳಿದಿದ್ದ ಪ್ರಾ.ಸಿ.ಆರ್. ನರಸಿಂಹ ಶಾಸ್ತ್ರಿಗಳು (ನನ್ನ ನೆನಪನ್ನು ಬಹುಶಃ ನೆಚ್ಚಬಹುದು) 'ಚಾಮರಾಜಪುರಂ ಸಹಕಾರ ಸಂಘದ ಮ್ಯಾನೇಜರ್ ಕೆಲಸ ಖಾಲಿ ಇದೆ. ಇವರೇಕೆ ಅಲ್ಲಿ ಸೇರಬಾರದು? ಪ್ರಕಟನೆಯ ಕೆಲಸಕ್ಕೆ ಅದೇನೂ ಅಡ್ಡಿಯಾಗಬೇಕಾದ್ದಿಲ್ಲ' ಎಂದು ಸೂಚಿಸಿದರು. ಅವರೂ ಅವರ ಸ್ನೇಹಿತರು ಕೆಲವರು ಆ ಸಂಘದಲ್ಲಿ ಪ್ರಭಾವಶಾಲಿ ಗಳಾಗಿದ್ದುದರಿಂದ ಆ ಕೆಲಸ ಚಿದಂಬರಂ ಅವರಿಗೆ ಸಿಕ್ಕಿತು. ಆದರೆ ಅಲ್ಲಿಯ ಅನುಭವ ಏನೇನೂ ಹಿತವಾಗಲಿಲ್ಲ. ಆಗ ಅಲ್ಲಿದ್ದ ಚುನಾಯಿತ ಅಧಿಕಾರಿಗಳು ಇವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಚಿದಂಬರಂ ಬೇಗನೇ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಆ ಕೆಲಸವನ್ನು ಬಿಟ್ಟದ್ದಕ್ಕೆ ಅಧಿಕಾರಿಗಳ ವರ್ತನೆಯಲ್ಲದೆ ಬೇರೆ ಕಾರಣಗಳೂ ಇದ್ದವು. 'ಪುಸ್ತಕ ಮುದ್ರಣದ ಕೆಲಸ ಹೇಗೋ ನಡೆದರಾಯಿತು' ಎನ್ನುವವರಲ್ಲ ಚಿದಂಬರಂ. ನಡೆದರೆ ಅದು ತೃಪ್ತಿಕರವಾಗಿಯೇ ನಡೆಯಬೇಕು. ಅವರು ಅನೇಕ ವೇಳೆ ಪ್ರಕಾಶನದ ಕೆಲಸದ ಜೊತೆಗೆ ಸಂಪಾದಕರ ಕೆಲಸವನ್ನೂ ವಹಿಸಿಕೊಳ್ಳ ಬೇಕಾಗುತ್ತಿತ್ತು. ಸ್ವತಃ ಅವರೂ ಬರಹಗಾರರಷ್ಟೇ; ಅವರು ಮಕ್ಕಳಿಗಾಗಿ ಬರೆದ ಪುಸ್ತಕಗಳೂ ಕೆಲವು ಅನುವಾದಗಳೂ ಕನ್ನಡಕ್ಕೆ ಅವರು ಕೊಟ್ಟ ವೈಯಕ್ತಿಕ ಕಾಣಿಕೆ. ಇದಲ್ಲದೆ ಅವರು ವಾಚಾಳಿಯಲ್ಲದಿದ್ದರೂ ಸಂಘಜೀವಿ ತೀ.ನಂ.ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಶಿವರಾಮಶಾಸ್ತ್ರಿ, ಬಿ.ಎಸ್. ಕೇಶವನ್ (೧೯೩೭ರ ನಂತರ), ನಾನು, ಹೆಚ್ಚು ಕಡಿಮೆ ಪ್ರತಿದಿನವೂ ಸೇರುತ್ತಿದ್ದುದುಂಟು. ಕುವೆಂಪು ರವರಂತೂ ಚಿದಂಬರಂನ ಹಳೆಯ ಸ್ನೇಹಿತರು. ಆರನೆಯ ದಶಕದಲ್ಲಿ ಮತ್ತು ಅಲ್ಲಿಂದಾಚೆಗೆ, ಆ ವೇಳೆಗೆ ನಮ್ಮ ಕಾಮನ್‌ರೂಮ್ ಗುಂಪು ಚೆದುರಿಹೋಗಿತ್ತು. ಚಿದಂಬರಂರವರನ್ನು ಕಂಡರೆ 'ಅವರು ಸಂಘಜೀವಿ, ಹಾಸ್ಯಪ್ರಿಯರು' ಎಂದರೆ ಆಶ್ಚರ್ಯಕರವಾಗಬಹುದೇನೋ. ಆದರೂ, ಅದು ನಿಜ, ನಮ್ಮ ಕಾಮನ್‌ರೂಮ್ ಗುಂಪಿನ ಹುಚ್ಚು ಹಾಸ್ಯದಲ್ಲೆಲ್ಲಾ ಅವರೂ ಅನೇಕ ವೇಳೆ ಭಾಗಿಗಳು. ಅನಿರೀಕ್ಷಿತವಾಗಿ ಆಗಾಗ ಮೆಲ್ಲಗೆ ಅವರ ಚಟಾಕಿಗಳು ಕೇಳಿಬರುತ್ತಿತ್ತು. ಆದರೆ ಬಹುಮಟ್ಟಿಗೆ ಅವರ ಪಾತ್ರ ಹಾಸ್ಯಕ್ಕೆ ಪುಷ್ಟಿಕೊಡುವುದು ಮತ್ತು ರಸಿಕ ಸಹಚರರಾದ ಆಸ್ವಾದನೆ. ಒಂದು ದಿನ ಯಾವ ಕಾರಣದಿಂದಲೋ ಚಿದಂಬರಂ ಬರಲಿಲ್ಲ. ನಾಲ್ಕಾರು ಜನರಿಂದ ಪ್ರಶ್ನೆ ಬಂತು. 'ಚಿದಂಬರಂ ಏಕೆ ಬರಲಿಲ್ಲ?' ಎಂದು. ಈ ಗುಂಪು ಸೇರುತ್ತಿದ್ದುದು ಸಾಮಾನ್ಯವಾಗಿ ಸಂಜೆಯ ಹೊತ್ತಿನಲ್ಲಿ. ಸಹಕಾರ ಸಂಘದ ಮ್ಯಾನೇಜರಾದವರಿಗೆ ಸಂಜೆಯ ಹೊತ್ತು ಎಲ್ಲಿಂದ ಬರಬೇಕು? ಚಿದಂಬರಂ ಆ ಕೆಲಸಕ್ಕೆ ರಾಜಿನಾಮೆ ಕೊಟ್ಟು ಕೈತೊಳೆದುಕೊಂಡರು. ಅಲ್ಲಿಂದಾಚೆಗೆ ಅವರು 'ಕಾವ್ಯಾಲಯ'ದ ವ್ಯವಸ್ಥಾಪಕರು ಮಾತ್ರ. ಆಗ ಅವರಿಗೆ ಕಷ್ಟದ ಕಾಲವೇ. ಅವರು ಅದನ್ನು ಹೇಳಿಕೊಳ್ಳದಿದ್ದರೂ ಅದು ನಿಜ. ವ್ಯಾಪಾರ ಕೈಗಾರಿಕೆ, ಯಾವುದಾದರೂ ವಸ್ತುವಿನ

ಉತ್ಪಾದನೆ, ಇತ್ಯಾದಿ ಉದ್ಯಮಗಳಲ್ಲಿ ತೊಡಗಿರುವವರ ಬಾಯಿಂದ 'ಇದು ವ್ಯವಹಾರ, ನಾವೇನು ಧರ್ಮಕ್ಕೆ ಕೂತಿದ್ದೇವೆಯೇ?' ಎಂಬ ಮಾತನ್ನು ನಾವೆಲ್ಲ ಒಂದಲ್ಲ ಒಂದು ಸಲ ಕೇಳಿದ್ದೇವೆ. ಚಿದಂಬರಂ ವ್ಯವಹಾರಕ್ಕೂ ಧರ್ಮಕ್ಕೂ ನಡುವೆ ಕಂದರವೊಂದನ್ನು ಕಲ್ಪಿಸಿಕೊಳ್ಳಲಿಲ್ಲ. ಅವರು ಪ್ರಕಾಶನ ವೃತ್ತಿಗೆ ಬಂದದ್ದು ಹಣಕ್ಕಾಗಿಯಲ್ಲ. ಜೀವನ ನಡೆಸಲು ಅವಶ್ಯವಾದಷ್ಟನ್ನು ಬಯಸಿದರು. ಅದಷ್ಟನ್ನು ಪ್ರಕಾಶನ ವೃತ್ತಿಯಿಂದ ಗಳಿಸುವುದು ಸುಲಭವಲ್ಲ ಎಂಬುದನ್ನು ತಿಳಿದೂ ತಿಳಿದು ಅವರು ಆ ವೃತ್ತಿಯನ್ನು ಕೈಗೊಂಡರು. ಹಾಗೆ ಮಾಡಿದ್ದಕ್ಕೆ ಕಾರಣ ಕನ್ನಡಿಗರಿಗೆ ಒಳ್ಳೆಯ ಪುಸ್ತಕಗಳನ್ನು ಒದಗಿಸಬೇಕು ಮತ್ತು ಲೇಖಕರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು ಎಂಬ ಆಸೆ. ಅವರು ಪ್ರಕಾಶನ ವೃತ್ತಿಗೆ ಬಂದದ್ದಕ್ಕೆ ಇದೇ ಮುಖ್ಯ ಪ್ರೇರಣೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅವರು ತಮ್ಮ ಆಸೆಗಳನ್ನು ತೀರಿಸಿಕೊಂಡು ಕೃತಕೃತ್ಯರಾದರು.

'ಕಾವ್ಯಾಲಯ' ಆರಂಭವಾದ ಕಾಲದಲ್ಲಿ ಕನ್ನಡ ಪುಸ್ತಕಗಳು ಈಗಿನಷ್ಟು ವಿಪುಲವಾಗಿ ಬರುತ್ತಿಲ್ಲವಾದ್ದರಿಂದ ಸಾಹಿತ್ಯಪ್ರಿಯರಿಗೆ ಬಂದ ಪುಸ್ತಕಗಳನ್ನೆಲ್ಲ ಓದುವುದು ಸಾಧ್ಯವಾಗಿತ್ತು. ಪ್ರಕಟವಾದ ಪುಸ್ತಕಗಳನ್ನೆಲ್ಲ ಚಿದಂಬರಂ ಅಕ್ಕರೆಯಿಂದ, ಉತ್ಸಾಹದಿಂದ ಓದುತ್ತಿದ್ದರು. ಉತ್ತಮವಾದ ಬರಹಗಾರರನ್ನು ಗುರುತಿಸಿ, ಉತ್ತಮ ವಾದ ಕೃತಿಗಳನ್ನು ಪ್ರಕಟಿಸುವ ಇಚ್ಛೆಯನ್ನು ತಾವೇ ಪ್ರಕಟಿಸಬೇಕೆಂಬ ಆತುರವೇನೂ ಇಲ್ಲದೆ ವ್ಯಕ್ತಪಡಿಸುತ್ತಿದ್ದರು. ಅವರ ಪ್ರಕಟಣೆ ಅಚ್ಚುಕಟ್ಟಾಗಿರಬೇಕು. ಅಗ್ಗದ ಆಕರ್ಷಣೆಯೇನೂ ಇರಬಾರದು. ಈ ವಿಷಯಗಳಲ್ಲಿ ಅವರು ಬಹಳ ಎಚ್ಚರಿಕೆ ವಹಿಸುತ್ತಿದ್ದರು. ಸಾಮಾನ್ಯವಾಗಿ 'ಕಾವ್ಯಾಲಯ'ದಿಂದ ಹೊರಬಂದ ಪುಸ್ತಕಗಳ ಮುಖಪುಟದ ಮೇಲೆ ಮನಸೆಳೆಯುವ ಚಿತ್ರಗಳಿರುತ್ತಿರಲಿಲ್ಲ. ನನಗೆ ತಿಳಿದಮಟ್ಟಿಗೆ ತಾವು ಪ್ರಕಟಿಸಿದಗ ಪುಸ್ತಕಗಳಿಗೆ ಅವರು 'ಬಿಡುಗಡೆ' ಸಮಾರಂಭವನ್ನು ಏರ್ಪಡಿಸಲಿಲ್ಲ. ಅವರು ಪ್ರಕಟಿಸಿದ ಕೃತಿ ತನ್ನ ಯೋಗ್ಯತೆಯಿಂದಲೇ ಬದುಕಬೇಕು. ಯಾವ ಬಗೆಯ ಡಂಗುರ ಪ್ರಚಾರಗಳೂ ಇಲ್ಲದೆ! 'ಕಾವ್ಯಾಲಯ' ಹುಯಿಲಿಲ್ಲದೆಯೇ ಬೆಳೆಯಿತು. 'ಕಾವ್ಯಾಲಯ'ದ ಪ್ರಕಟನೆಯಾದರೆ ಪುಸ್ತಕ ಒಳ್ಳೆಯದೇ ಇರಬೇಕು ಎಂಬ ವಿಶ್ವಾಸ ಜನರಲ್ಲಿ ಮೂಡುವಂತಾಯಿತು.

ಪುಸ್ತಕಗಳ ಮಾರಾಟಕ್ಕೆ ಅನುಚಿತವಾದ, ನೀತಿಯುತವಲ್ಲದ ಮಾರ್ಗವನ್ನು ಅವರು ಎಂದೂ ತುಳಿದವರಲ್ಲ. ಜನರಲ್ಲಿ ಪುಸ್ತಕಗಳನ್ನು ಕೊಳ್ಳುವ ಅಭ್ಯಾಸವನ್ನು ಬೆಳೆಸಬೇಕು. (ಇಂದೂ ಅದು ಬೆಳೆದಿಲ್ಲ!) ಎಂಬ ಉದ್ದೇಶದಿಂದ ಅವರು ಬಹಳ ಕಾಲ ಅಳೆದು ಸುರಿದು ಕೊನೆಗೆ ಅದಕ್ಕಾಗಿಯೇ (ಊರೂರಿಗೆ ಬೀದಿ ಬೀದಿಗೆ ತಿರುಗಿ ಮಾರಾಟ ಮಾಡಲೆಂದು) ಒಂದು ಕಾರನ್ನು ಕೊಂಡದ್ದುಂಟು. ಅದರಿಂದ ನಿರೀಕ್ಷಿಸಿದಷ್ಟು ಮತ್ತು ಅದರ ಖರ್ಚನ್ನು ತೇಲಿಸುವಷ್ಟು ಪ್ರಯೋಜನವಾಗುವುದಿಲ್ಲ-ವೆಂದು ಮನಗಂಡು ಅದನ್ನು ಮಾರಿದ್ದೂ ಆಯಿತು. 'ಈ ವಿಷಯದಲ್ಲಿ ಡಿ.ವಿ.ಜಿ. ಎಚ್ಚರಿಕೆ ಕೊಟ್ಟಿದ್ದರು. ಆದರೂ ಪ್ರಯತ್ನ ಮಾಡಿ

ನೋಡೋಣ ಎನ್ನಿಸಿತು' ಎಂದು ನನ್ನೊಡನೆ ಹೇಳಿದ್ದು ನೆನಪಿದೆ. ಗಂಭೀರವಾದ, ವಿಚಾರ ಪ್ರಚೋದಕವಾದ ಪುಸ್ತಕಗಳನ್ನು ಮಾರುವುದು ಕಷ್ಟ ಎಂಬುದನ್ನು ಅವರು ಬಲ್ಲರು. ಆದರೂ 'ಇಂಥ ಪುಸ್ತಕಗಳನ್ನು ನಮ್ಮ ಜನರ ಮುಂದೆ ಇರಿಸಬೇಕು' ಎಂಬ ಕರ್ತವ್ಯ ದೃಷ್ಟಿಯಿಂದಲೇ ಅವರು ಎಷ್ಟೋ ಕೃತಿಗಳನ್ನು ಪ್ರಕಟಿಸಿದರು. ಇದಕ್ಕೆ ದೊಡ್ಡ ಉದಾಹರಣೆಯೆಂದರೆ ಪ್ರೊ. ಎಂ. ಹಿರಿಯಣ್ಣನವರ ಇಂಗ್ಲಿಷ್ ಪುಸ್ತಕಗಳ ಪ್ರಕಟನೆ. ಬಹುಶಃ ೧೯೩೯ರಲ್ಲಿ ನಾನು ಅವರನ್ನು 'ಆ ಪುಸ್ತಕಗಳ ಮಾರಾಟ ಹೇಗಿದೆ' ಎಂದು ಕೇಳಿದೆ. ಅವರು ನಕ್ಕು 'ಪ್ರಯೋಜನವಿಲ್ಲ ಮೂರ್ತಿರಾವ್. ಆದರೂ ಅದನ್ನು ಹೊರತಂದದ್ದು ನನಗೆ ತೃಪ್ತಿ ಕೊಟ್ಟಿದೆ.' ಎಂದರು. ನಿಜವಾಗಿಯೂ ಅವರು ತೃಪ್ತರಾಗಿದ್ದರು.

ಲೇಖಕರಿಗೆ ಗೌರವಧನ ಶೇಕಡಾ ಇಷ್ಟರಂತೆ ಇಷ್ಟು ಇಇದನ್ನೆಲ್ಲ ಕಳಿಸಿ ಜೊತೆಗೆ ಆ ಹಣಕ್ಕೆ ಒಂದು ಚೆಕ್ಕು. ಈ ಬಗೆಯ ಲಕೋಟೆಯಲ್ಲಿ ಅವರು ಯೋಗಕ್ಷೇಮಕ್ಕೆ ಸಂಬಂಧಪಟ್ಟ ಮಾತೇನನ್ನೂ ಸೇರಿಸುತ್ತಿರಲಿಲ್ಲ. ಒಂದು ಸಾರಿ ೧೯೫೦–೫೧ರ ಸುಮಾರಿನಲ್ಲಿ ನನ್ನ 'ಹವಳದ ದ್ವೀಪ' ಎಂಬ ಕೃತಿ ಪಠ್ಯಪುಸ್ತಕವಾಯಿತು. ಆಗುತ್ತದೆಂಬ ನಿರೀಕ್ಷೆ ನನಗಾಗಲಿ ಚಿದಂಬರಂರವರಿಗಾಗಲಿ ಇರಲಿಲ್ಲ. ಈ ಸಂದರ್ಭದಲ್ಲಾಗಲಿ ಮತ್ತಾವ ಸಂದರ್ಭದಲ್ಲಾಗಲಿ ನನ್ನ ಅವರ ನಡುವೆ ಕರಾರು ಪತ್ರಗಳೇನೂ ಆಗಿರಲಿಲ್ಲ. ಪುಸ್ತಕದ ಮರುಮುದ್ರಣವಾಯಿತು. ಪ್ರತಿಗಳೆಲ್ಲ ಮಾರಾಟವಾದವು. ಆಗ ಚಿದಂಬರಂ ನನ್ನನ್ನು ಕೇಳಿದರು :

'ಹೇಗೆ ಸೆಟ್ಲ್ (Settle) ಮಾಡಿಕೊಳ್ಳೋಣ?'

'ಹೇಗಾದರೂ ಸರಿಯೇ. ಇಂಥ ಸಂದರ್ಭ ಅಪರೂಪ. ಇದರ ಪ್ರಯೋಜನ ನಿಮಗೂ ಆಗಬೇಕು ನೀವೇ ಹೇಳಿ.'

'ಶೇಕಡ ೩.೫ ಆಗಬಹುದೆ?'

'ಧಾರಾಳವಾಗಿ. ನಾನು ಅಷ್ಟೊಂದನ್ನು ನಿರೀಕ್ಷಿಸಿರಲಿಲ್ಲ. ಅಷ್ಟು ಕೊಟ್ಟರೆ ನಿಮ್ಮ ಲಾಭ ಕಡಿಮೆಯಾಗುತ್ತದೆ, ಅಲ್ಲವೆ?'

'ನೋಡಿ, ಇದು ನಮ್ಮಿಬ್ಬರಿಗೂ ಅನಿರೀಕ್ಷಿತ. ಅಂದಮೇಲೆ ಎಷ್ಟು ಬಂದರೂ ಅದು ಬೋನಸ್?' ಎಂದು ನಗುತ್ತಾ ೯೫೦೦ ರೂಪಾಯಿಗೆ ಚೆಕ್ಕು ಬರೆದುಕೊಟ್ಟರು. ಕಾಗದ ಪತ್ರಗಳೇನೂ ಇಲ್ಲದೆ ಹೀಗೆ ವ್ಯವಹರಿಸಬೇಕಾದರೆ ಚಿದಂಬರಂ- ರಂಥವರೊಡನೆ ಮಾತ್ರ ಸಾಧ್ಯ. ಅಂಥವರು ಪ್ರಪಂಚದಲ್ಲಿ ವಿರಳ. ಅವರೊಡನೆ ವ್ಯವಹರಿಸಿದವರೆಲ್ಲರ ಅನುಭವವೂ ನಾನು ಮೇಲೆ ಹೇಳಿರುವಂಥದೇ.

ತಮ್ಮ ಬದುಕಿನ ಕೊನೆಯ ನಾಲ್ಕಾರು ವರ್ಷಗಳಲ್ಲಿ ಚಿದಂಬರಂ ತಿರುಗಾಡುತ್ತಾ ತಮ್ಮ ಕೆಲಸಗಳಲ್ಲಿ ತೊಡಗಿರುತ್ತಾ ಇದ್ದರಾದರೂ ಅವರ ಆರೋಗ್ಯ ಕ್ಷೀಣವಾಗಿತ್ತು. ನಾನು ಅನೇಕ ವೇಳೆ 'ಇನ್ನು ಮೇಲೆ ನೀವು ನಿವೃತ್ತರಾಗಿ ಆರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕು'

ಎಂದು ಹೇಳಿದ್ದುಂಟು ನನ್ನ 'ಚಿತ್ರಗಳು ಪತ್ರಗಳು' ಸಿದ್ಧವಾಗುತ್ತಿದ್ದಾಗ 'ಇದನ್ನು ಬೇರೆ ಪ್ರಕಾಶಕರಿಗೆ ಕೊಡಬೇಕೆಂದಿದ್ದೇನೆ' ಎಂದು ಅವರಿಗೆ ಹೇಳಿದೆ. ಅವರು ಸ್ವಲ್ಪ ಯೋಚಿಸಿ ಆಗಬಹುದು, ನಾನು ಈಗ ಮೊದಲೇ ಒಪ್ಪಿಕೊಂಡಿದ್ದ ಪುಸ್ತಕ ಪ್ರಕಟಣೆಗೆ ಸಿದ್ಧವಾಗಿಲ್ಲ. ಆದರೂ ಗೀಳು ಬಿಟ್ಟಿದ್ದಲ್ಲ. ಆದರೂ 'ಹೊಸ ಪುಸ್ತಕ ತಯಾರಾದರೆ ನನಗೆ ಮೊದಲು ತಿಳಿಸಿ' ಎಂದರು. ನನ್ನ 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಅಚ್ಚಿಗೆ ಸಿದ್ಧವಾಗುವ ವೇಳೆಗೆ ಅವರು ತೀರ ನಿಶ್ಶಕ್ತರಾಗಿದ್ದರು. 'ಇದೊಂದು ಪುಸ್ತಕ ಸಿದ್ಧವಾಗಿದೆ. ನಿಮ್ಮ ಒಪ್ಪಿಗೆ ಪಡೆದು ಇದನ್ನು ಇನ್ನೊಬ್ಬ ಪ್ರಕಾಶಕರಿಗೆ ಕೊಡುತ್ತೇನೆ' ಅಂದಾಗ ಅವರು ಮೊದಲು 'ಆಗಬಹುದು' ಎಂದವರು ಆಮೇಲೆ ಮುಗುಳುನಗೆ ನಕ್ಕು 'ಸುಮಾರು ಎಷ್ಟು ಪುಟಗಳಾಗಬಹುದು ಹೇಳು' ಎಂದರು. ನನಗೂ ನಗು ಬಂತು. 'ಆಲ್ಕೋಹಾಲ್ ಕುಡುಕರನ್ನು ಮೆಟ್ಟುವ ಹಾಗೆ ನಿಮ್ಮನ್ನು ಪ್ರಕಾಶನ ಮೆಟ್ಟಿದೆ. ನೀವು ಅಡಿಕ್ಟ್ (addict ತಪ್ಪಿಸಿಕೊಳ್ಳಲಾರದಂತೆ ಯಾವುದಾದರೊಂದು ಚಟಕ್ಕೆ ಸಿಕ್ಕಬಿದ್ದವರು) ಆಗಿಬಿಟ್ಟಿದ್ದೀರೆ. ನಿಮ್ಮ ಒಪ್ಪಿಗೆ ಕೊಟ್ಟಿದ್ದಾಯಿತು. ಕೈಗೊಡವಿಕೊಳ್ಳಿ' ಎಂದೆ.

೧೯೭೯ರ ನವೆಂಬರ್‌ನಲ್ಲಿ ನೈರೋಬಿಗೆ ಹೊರಡುವ ಮುನ್ನ ಅವರನ್ನು ನೋಡಲು ಹೋದೆ, ಅದಕ್ಕೆ ಹಿಂದಿನ ದಿನ ಅವರು ಆಟೋರಿಕ್ಷಾ ಮಾಡಿಕೊಂಡು ನಮ್ಮ ನಮ್ಮ ಮನೆಗೆ ಬಂದಿದ್ದರಂತೆ ಆಗ ನಾನು ಮನೆಯಲ್ಲಿರಲಿಲ್ಲ, ನನ್ನ ತಮ್ಮ ಬಹಳ ಆತಂಕದಿಂದ 'ಅವರು ನಿಲ್ಲುವುದಕ್ಕೂ ಆಗದಷ್ಟು ನಿಶ್ಶಕ್ತರಾಗಿದ್ದಾರೆ. ಹೀಗೆಲ್ಲ ಓಡಾಡಬಾರದೆಂದು ಹೇಳು' ಎಂದ. ನಾನು ಹೋಗಿ 'ನೀವೇಕೆ ಬಂದಿರಿ? ಯಾರೊಡನೆಯಾದರೂ ಹೇಳಿಕಳಿಸಬಾರದಿತ್ತೆ?' ಎಂದು ಆಕ್ಷೇಪಿಸಿದೆ. ಅವರ ಮನೆಯವರೂ 'ನಾವೆಲ್ಲ ಹೇಳಿದೆವು. ಆದರೂ ಹೀಗೆ ಮಾಡುತ್ತಾರಲ್ಲ' ಎಂದರು. ಚಿದಂಬರಂ ಕೊಟ್ಟು ಉತ್ತರ 'ನಿಮ್ಮನ್ನು ಊಟಕ್ಕೆ ಕರೆಯಬೇಕು ಅಂತ ಬಂದೆ'. ನಿಮ್ಮನ್ನು ಕರೆಸಿಕೊಂಡು ಆಹ್ವಾನ ಹೇಳುವುದು ಯಾವ ನ್ಯಾಯ?' ನಾನು 'ನೀವು ಕಾಗದ ಬರೆದರೆ ಅಥವಾ ಮಗನ ಕೈಯಲ್ಲಿ ಹೇಳಿಕಳಿಸಿದರೆ ಔಚಿತಣವಲ್ಲವೆ?' ಎಂದು ಸುಮ್ಮನಾದೆ. 'ನೀವು ನೈರೋಬಿಗೆ ಹೊರಡುವ ಮುನ್ನ ಒಟ್ಟಿಗೆ ಕೂತು ಊಟ ಮಾಡೋಣ. ಶ್ರೀನಿವಾಸಮೂರ್ತಿಯನ್ನೂ(ಸಿ.ವಿ.ಶ್ರೀನಿವಾಸಮೂರ್ತಿ ತತ್ವಶಾಸ ಪ್ರಾಧ್ಯಾಪಕರಾಗಿದ್ದವರು. ನನ್ನ ಆಪ್ತಮಿತ್ರರು) ಕರೆಯುತ್ತೇನೆ' ಎಂದು ಹೇಳಿ ಮಾರನೆಯ ದಿನವನ್ನೇ ಗೊತ್ತು ಮಾಡಿದರು. ಆ ದಿನ ಹಾಗೆಯೇ ಊಟ ಮಾಡಿ ಒಂದೆರಡು ಘಂಟೆ ಮಾತುಕತೆಯಾಡಿದೆವು. ಕಾಲೇಜಿನ ಕಾಮನ್‌ರೂಮಿನ ಮಾತು ಕುವೆಂಪು, ಎಸ್.ವಿ. ಕೃಷ್ಣಮೂರ್ತಿರಾಯರು, ತೀ.ನಂ. ಶ್ರೀಕಂಠಯ್ಯ ಮೊದಲಾದವರ ಮಾತು.... ಆ ವೇಳೆಗೆ ಅವರ ಕಂಠ ಕುಗ್ಗಿ ಹೋಗಿತ್ತು.

ನನ್ನ 'ಅತಿಯುವ ಮನೆ' ಪತ್ಯಪುಸ್ತಕವಾಯಿತೆಂದು ನೈರೋಬಿಗೆ ಕಾಗದ

ಬರೆದಿದ್ದರು. ಅದಾದ ಕೆಲವು ದಿನಗಳಲ್ಲಿ ಅವರ ಮಗನಿಂದ ಕಾಗದ ಬಂತು. 'ನಮ್ಮ ತಂದೆ ತೀರಿಕೊಂಡರು' ಎಂದು...... ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರಿಗೊಂದು ಸ್ಥಾನವಿದ್ದೇ ಇರುತ್ತದೆ.

ಕೃಪೆ : ಶಿವಮೊಗ್ಗ ಕರ್ನಾಟಕ ಸಂಘದ ವಜ್ರಮಹೋತ್ಸವ
ಸಂದರ್ಭದ ನೆನಪಿನ ಸಂಚಿಕೆ 'ವಜ್ರಪಥ'.

# ಅನುಬಂಧ ೬

'ಕಾವ್ಯಾಲಯ'ದ ಕರ್ಮಯೋಗಿ - ಹಾ.ಮಾ. ನಾಯಕ

'''ಕೆಲವರ ಪ್ರಕೃತಿ ಬಹುಸೌಮ್ಯ; ಲಜ್ಜೆಯೇ ಏನೋ ಅನಿಸುವಷ್ಟು ದೂರ ಅವರ ವಿನಯ; ಮಾತನಾಡಲು ಬಾರದೆಂಬ ಅನುಮಾನ ಹುಟ್ಟಿಸುವಂಥ ಮೃದುನುಡಿ ಅವರದು; ಕಂಡರೂ ಕಾಣಿಸದೆ ರೀತಿಯ ನಮ್ರ ಸುಳಿದಾಟವೆ ಅವರ ನಡವಳಿಕೆ, ಆದ್ದರಿಂದ ಅವರ ವ್ಯಕ್ತಿತ್ವದ ಪ್ರಭಾವ ಅತಿಗಾಢ.''

ಮೊನ್ನೆ ಸೆಪ್ಟೆಂಬರ್ ೧೮ರ ಮಧ್ಯರಾತ್ರಿ ತೀರಿಕೊಂಡ ಮೈಸೂರಿನ ಕಾವ್ಯಾಲಯದ ಕೂಡಲಿ ಚಿದಂಬರಂ ಅವರನ್ನು ಒಂದು ಸಂದರ್ಭದಲ್ಲಿ ಪ್ರೊಫೆಸರ್ ಎಸ್.ವಿ. ರಂಗಣ್ಣನವರು ವರ್ಣಿಸಿದ ರೀತಿ ಇದು. ಚಿದಂಬರಂ ಅವರನ್ನು ಬಲ್ಲವರಿಗೆ ಮಾತ್ರ ಈ ವರ್ಣನೆಯು ಎಷ್ಟು ಸಹಜವಾದುದೆಂದು ತಿಳಿಯುತ್ತದೆ. ಸದಾ ಮಂದಹಾಸ; ಗಹಗಹಿಸಿ ನಕ್ಕವರಲ್ಲ, ಯಾವಾಗಲೂ ತುಂಬ ಮೃದು. ಮೃದುವಾದ ಮಾತು. ದನಿಯನ್ನು ಏರಿಸಿದವರಲ್ಲ, ಸಜ್ಜನಿಕೆಗೆ ರೂಪಕೊಡಬೇಕೆಂದರೆ ಅದು ಚಿದಂಬರಂ ರೂಪವೆ.

ಸುಮಾರು ನಲವತ್ತೈದು ವರ್ಷಗಳ ಹಿಂದೆ ಚಿದಂಬರಂ ಶಿವಮೊಗ್ಗೆಯಲ್ಲಿ ಕಾವ್ಯಾಲಯ ಎಂಬ ಪ್ರಕಾಶನವನ್ನು ಆರಂಭಿಸಿದರು. ಅವರ ಮಾಲೆಯ ಹೆಸರು 'ಕನ್ನಡ ಕಾವ್ಯಮಾಲೆ'. ಮಾಲೆಯ ಮೊದಲನೆಯ ಪುಸ್ತಕ ಕೆ.ವಿ. ಪುಟ್ಟಪ್ಪನವರ 'ಕಿಂದರಿ ಜೋಗಿ ಮತ್ತು ಇತರ ಕಥನ ಕವನಗಳು. (೧೯೩೬). ಆರಂಭದ ಇತರ ಪುಸ್ತಕಗಳೂ ಪುಟ್ಟಪ್ಪನವರವೆ. ಚಿದಂಬರಂ ಅವರ ಪ್ರಕಾಶನವನ್ನು ಮಾಸ್ತಿಯವರು ಆ ಕಾಲದಲ್ಲಿ ಹರಸಿದ್ದು ಹೀಗೆ : ''ಇಂಥ ಸಾಹಿತ್ಯ ಪೋಷಕ ಸಂಸ್ಥೆ ಲೇಖಕರಿಗೆ ತೌರುಮನೆಯಂತೆ... ಹಳ್ಳಿಯ ಹೆಣ್ಣು ಮಗಳ ಮಾತಿನಿಂದ ಆದರ ಏಳ್ಗೆಯನ್ನು ಬಯಸುತ್ತೇನೆ. ಹಳ್ಳದ ದಡದ ಬಳ್ಳಿಯಂತೆ ಅದು ಬಾಡದೆ ಬೆಳೆಯಲಿ. ತುಂಬ ಹೂ ಕೊಡಲಿ, ತುಂಬ ಹಣ್ಣು ಬಿಡಲಿ'' ಹಾರೈಕೆ –ಲಿಸಿತು.

ಕಾವ್ಯಾಲಯ ಶಿವಮೊಗ್ಗೆಯಿಂದ ಮೈಸೂರಿಗೆ ಬಂತು. ಅನೇಕ ನೂರು ಪುಸ್ತಕಗಳನ್ನು ಪ್ರಕಟಿಸಿತು. ಹಲವು ಹೊಸಲೇಖಕರನ್ನು ಬೆಳಕಿಗೆ ತಂದಿತು. ವಿಸ್ತಾರ, ವೈವಿಧ್ಯ, ಅಭಿರುಚಿ, ವ್ಯವಹಾರಗಳಲ್ಲಿ ಇಂಥದೊಂದು ಏಕವ್ಯಕ್ತಿ ಸಂಸ್ಥೆ ತುಂಬ ಅಪರೂಪದ್ದು. ಕೂಡಲಿ ಚಿದಂಬರಂ ಕಾವ್ಯಾಲಯವನ್ನು ಕಟ್ಟಿ ನಿಲ್ಲಿಸಿದರು. ಆ ಅಲಯ ಕನ್ನಡ ಲೇಖಕರ ಒಂದು

ತೌರಮನೆಯಾಯಿತು. ಕನ್ನಡ ಕಾವ್ಯಮಾಲೆಯಲ್ಲಿ ತಮ್ಮದೊಂದು ಪುಸ್ತಕ ಪ್ರಕಟವಾಗುವುದು ಹೆಮ್ಮೆಯ ವಿಷಯವೆಂದು ಲೇಖಕರು ಭಾವಿಸುವಂತಾಯಿತು. ಸಂಸ್ಥೆ ಇಂಗ್ಲಿಷಿನಲ್ಲೂ ಕೆಲವು ಪುಸ್ತಕಗಳನ್ನು ಪ್ರಕಟಿಸಿತು. ಆಚಾರ್ಯ ಎಂ.ಹಿರಿಯಣ್ಣನವರ ಒಂದೆರಡು ಪುಸ್ತಕಗಳನ್ನುಳಿದು ಮಿಕ್ಕೆಲ್ಲವನ್ನೂ ಪ್ರಕಟಿಸಿದ್ದು ಕಾವ್ಯಾಲಯವ.

ಕೂಡಲಿ ಚಿದಂಬರಂ ೧೯೦೫ರ ಫೆಬ್ರವರಿ ೨೫ರಂದು ಕೂಡಲಿಯಲ್ಲಿ ಹುಟ್ಟಿದರು. ಚೊಟಿಯಾಗಿದ್ದ ಹುಡುಗನನ್ನು ಕೂಡಲಿ ಮಠದ ಪೀಠಕ್ಕೆ ತೆಗೆದುಕೊಳ್ಳಬೇಕೆಂದು ಅಂದಿನ ಸ್ವಾಮಿಗಳಿಗೆ ಆಸೆ ಇತ್ತಂತೆ. ಆದರೆ ಚಿದಂಬರಂ ಅವರ ತಂದೆ ಕೃಷ್ಣಪ್ಪನವರು ಅದಕ್ಕೆ ಇಷ್ಟಪಡಲಿಲ್ಲ. ಶಿವಮೊಗ್ಗೆ ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಚಿದಂಬರಂ, ಪುಣೆಯಲ್ಲಿ ಕಾನೂನು ಪದವಿಗೆ ಓದಿದರು. ಪದವೀಧರರಾದ ಮೇಲೆ ಕೆಲವು ಕಾಲ ವಕೀಲಿ ವೃತ್ತಿಯನ್ನೂ ನಡೆಸಿದರು. ಆದರೆ ಅವರ ಒಲವೆಲ್ಲ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೇ ಇತ್ತು. ಕುವೆಂಪು ಚಿದಂಬರಂ ಅವರ ಒಡನಾಡಿ, ಒಡನೋದಿ. ಮೊದಲನೆಯ ಮಹಾಯುದ್ಧಕ್ಕೆ ಸಹಾಯವನ್ನು ಕೂಡಿಸಲು ಆಡಿದ ಶೇಕ್ಸ್ಪಿಯರನ ನಾಟಕವೊಂದರಲ್ಲಿ ಇಬ್ಬರೂ ಬಣ್ಣ ಹಾಕಿದ್ದರು. ಬಾಲ್ಯದ ಈ ನೆನಪುಗಳನ್ನು ಕುವೆಂಪು ತಮ್ಮ ಆತ್ಮಕಥೆ 'ನೆನಪಿನ ದೋಣಿಯಲ್ಲಿ' ವರ್ಣಿಸಿದ್ದಾರೆ.

ಶಿವಮೊಗ್ಗೆಯ ಕರ್ನಾಟಕ ಸಂಘ ತುಂಬ ಹೆಸರುವಾಸಿಯಾದದ್ದು. ಆ ಕಾಲದಲ್ಲಿ ಅವರ ಚಟುವಟಿಕೆಗಳು ಆ ಬಗೆಯ ಸಂಘ ಸಂಸ್ಥೆಗಳಿಗೆ ಆದರ್ಶಪ್ರಾಯ ವಾಗಿದ್ದವು. ಚಿದಂಬರಂ ಸಂಘದ ಗೌರವಕಾರ್ಯದರ್ಶಿ. ಅವರ ಜೊತೆಗೆ ಎಸ್.ವಿ. ಕೃಷ್ಣಮೂರ್ತಿರಾವ್, ಅಜ್ಜಂಪುರ ಸೀತಾರಾಂ (ಆನಂದ), ಕೆ.ವಿ. ಪುಟ್ಟಪ್ಪ ಭೂಪಾಳಂ ಪುಟ್ಟನಂಜಪ್ಪ ದೇವಂಗಿ ಮಾನಪ್ಪ ಮೊದಲಾದ ಉತ್ಸಾಹೀ ಪ್ರತಿಭಾವಂತ ತರುಣರ ತಂಡ. ಸಂಘ ಪ್ರಕಟಣೆಗಳನ್ನು ಆರಂಭಿಸಿತು. ಈ ಚಟುವಟಿಕೆಗಳ ಒಂದು ಟಿಸಿಲೇ ಕಾವ್ಯಾಲಯ.

ಚಿದಂಬರಂ ಕೆಲವು ಕಾಲ ತೀರ್ಥಹಳ್ಳಿಯ ಬ್ಯಾಂಕೊಂದರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಅದೇ ಕಾಲದಲ್ಲಿ ಅವರು 'ವಿಚಾರ ವಾಹಿನಿ' ಎಂಬ ಒಂದು ಮಾಸಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದರು. ೧೯೩೯ರ ಜನವರಿಯಲ್ಲಿ ಪತ್ರಿಕೆಯ ಮೊದಲ ಸಂಚಿಕೆ ಪ್ರಕಟವಾಯಿತು ಅದರ ಕಾಗದ ಮುದ್ರಣ ವಿನ್ಯಾಸಗಳು ಈಗ ಕನಸಿನ ಮಾತು. ಕನ್ನಡದ ಅಂದಿನ ಪ್ರಸಿದ್ಧ ಲೇಖಕರೆಲ್ಲ ಅದರಲ್ಲಿ ಬರೆದರು. ೬೪ ಪುಟಗಳ ಒಂದು ಸಂಚಿಕೆಯ ಬೆಲೆ ನಾಲ್ಕಾಣೆ; ವಾರ್ಷಿಕ ಚಂದಾ ಮೂರು ರೂಪಾಯಿಗಳು ''ಇಂಥ ಒಂದು ಪ್ರೌಢವರ್ಗದ ಪತ್ರಿಕೆಯು ನಮ್ಮ ದೇಶದಲ್ಲಿ ಹುಟ್ಟಿತಲ್ಲ'' ಎಂದು ಜನ ಅದನ್ನು ಸ್ವಾಗತಿಸಿದರು. ಆದರೆ ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಚಿದಂಬರಂ ಅವರಿಗೆ 'ವಿಚಾರ ವಾಹಿನಿ'ಯನ್ನು ಬಹಳ ಕಾಲ ನಡೆಸಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ನಾನು

ಚಿಕ್ಕ ಹುಡುಗನಾಗಿದ್ದಾಗ ಈ ನಿಯತಕಾಲಿಕದ ಸಂಚಿಕೆಗಳನ್ನು ಓದುತ್ತಿದ್ದೆ. ಈಚೆಗೆ ಇನ್ನೊಮ್ಮೆ ಅವನ್ನು ಪರಿಶೀಲಿಸಿದೆ. ಕನ್ನಡದಲ್ಲಿ ಈಗ ಪತ್ರಿಕೋದ್ಯಮ ಬಹುವಾಗಿ ಬೆಳೆದಿದೆ. ವಿಸ್ತಾರ ವೈವಿಧ್ಯ ತಾಂತ್ರಿಕ ಸೌಲಭ್ಯಗಳನ್ನು ಪಡೆದಿದೆ. ಆದರೆ ನನಗನ್ನಿಸುತ್ತದೆ – 'ವಿಚಾರ ವಾಹಿನಿ' ಮಂಥ ಇನ್ನೊಂದು ಪತ್ರಿಕೆ ನಮ್ಮಲ್ಲಿ ಬರಲಿಲ್ಲ. ಇದು ನಮ್ಮ ಬಡತನದ ದ್ಯೋತಕವಾಗಿರ ಬಹುದು; ಚಿದಂಬರಂ ಅವರಂಥ ಮತ್ತೊಬ್ಬ ಕೆಲಸಗಾರರು ಬಾರದೆ ಹೋಗಿರ ಬಹುದು; ಕಾರಣಗಳು ಏನೇ ಇರಲಿ, 'ವಿಚಾರ ವಾಹಿನಿ' ಇಂದಿಗೂ ಒಂದು ಆದರ್ಶವಾಗಿ ಉಳಿದಿದೆ. ಅದು ಚಿದಂಬರಂ ಅವರ ಸಾಧನೆ, ಸಿದ್ಧಿ!

ಚಿದಂಬರಂ ಸ್ವತಃ ಒಳ್ಳೆಯ ಲೇಖಕರು, ಆದರೆ ಅವರ ಶಕ್ತಿಯು ಬಹುಪಾಲು ಅನೇಕ ಲೇಖಕರನ್ನು ತಿದ್ದಿ ಅವರಿಗೊಂದು ರೂಪ ಕೊಡುವುದರಲ್ಲಿಯೇ ವ್ಯಯವಾಯಿತು. ಲೇಖಕ ಎಷ್ಟೇ ಸಮರ್ಥನಾಗಿದ್ದರೂ, ಅವನಿಗೊಬ್ಬ ಸಂಪಾದಕನ ನೆರವು ಬೇಕೇಬೇಕು. ಚಿದಂಬರಂ ನಮ್ಮ ಹಲವು ಲೇಖಕರಿಗೆ ಸಂಪಾದಕರಾಗಿದ್ದರು. ಅದರಿಂದ ಸ್ವಂತ ಬರವಣಿಗೆಯ ಕಡೆ ಗಮನ ಕೊಡುವುದು ಅವರಿಗೆ ಸಾಧ್ಯವಾಗ ಲಿಲ್ಲ. ಆದರೆ ಕೆಲವು ಲೇಖನಗಳು ಅಲ್ಲಲ್ಲಿ ಪ್ರಕಟವಾಗಿವೆ. 'ಎವರೆಸ್ಟ್ ವೀರ' 'ಮಹಾದೇವ ಗೋವಿಂದರಾನಡೆ', 'ಗೋಖಲೆ – ನನ್ನ ರಾಜಕೀಯ ಗುರು' ದಾದಾಭಾಯಿ ನವರೋಜಿ' – ಇವು ಅವರು ಅನುವಾದಿಸಿ ಪ್ರಕಟಿಸಿಧ ಕೆಲವು ಪುಸ್ತಕಗಳು. ಈಸೋಪನ ಹಾಗೂ ಗ್ರಿಮ್ ಸಹೋದರರ ಹಲವು ಕಥೆಗಳನ್ನೂ ಅವರು ಅನುವಾದಿಸಿದ್ದಾರೆ. ಚಿದಂಬರಂ ಅವರ ಬರವಣಿಗೆಯನ್ನು ನೋಡಿದವರಿಗೆ ಅವರೇಕೆ ಇನ್ನಷ್ಟು ಬರೆಯಬಾರದಾಗಿತ್ತು ಎನ್ನಿಸದಿರದು. ನೇರವೂ ಸ್ಪಷ್ಟವೂ ಆದ ತುಂಬ ಒಳ್ಳೆಯ ಕನ್ನಡ ಶೈಲಿ ಅವರದ್ದು. ಅದರಲ್ಲಿ ಪಾಂಡಿತ್ಯ ಪ್ರದರ್ಶನವಿಲ್ಲ. ಪ್ರಾದೇಶಿಕತೆಯ ಅಥವಾ ಆಡುನುಡಿಯ ಸೋಗಿಲ್ಲ. ಸರ್ವಸಾಮಾನ್ಯವಾದ ಒಂದು ಸಾರ್ವತ್ರಿಕ ಶೈಲಿಯನ್ನು ಅಲ್ಲಿ ನಾವು ನೋಡಬಹುದು. ಚಿದಂಬರಂ ಅವರ ಪ್ರಕಾಶನ ಕಾಯಕದ ಹಿರಿಮೆಯಿಂದಾಗಿ ಅವರ ಬರಹಗಾರಿಕೆಯ ಮಹತ್ವವನ್ನು ಜನ ಗಮನಿಸದಂತಾಯಿತು. ಇದು ಅವರ ಪಾಲಿಗೆ ಒಂದು ನಷ್ಟವೇ ಸರಿ.

ಕಾವ್ಯಾಲಯ ಒಂದು ವ್ಯಕ್ತಿಯಾಗಿ, ಚಿದಂಬರಂ ಒಂದು ಸಂಸ್ಥೆಯಾಗಿ ನಡೆದುಕೊಂಡು ಬಂದದ್ದೆ ಪ್ರಕಾಶನದ ಯಶಸ್ಸಿನ ರಹಸ್ಯ. ಲೇಖಕರನ್ನು ಒತ್ತಾಯಿಸಿ ಬರೆಸಿದರು; ಬರೆಯಬಲ್ಲವರನ್ನು ಗುರುತಿಸಿದರು. ಪ್ರಕಾಶನ ಸಂಸ್ಥೆಯನ್ನು ಅವರು ಕೇವಲ ವ್ಯವಹಾರವನ್ನಾಗಿ ಪರಿಗಣಿಸಲಿಲ್ಲ. ಹಾಗಿದ್ದಿದ್ದರೆ ಅವರು ಪ್ರಕಟಿಸಿದ ಎಷ್ಟೋ ಪುಸ್ತಕಗಳು ಬೆಳಕಿಗೆ ಬರುವುದು ಸಾಧ್ಯವಿರಲಿಲ್ಲ. ಕೆ.ವಿ. ಪುಟ್ಟಪ್ಪ, ಡಿ.ವಿ. ಗುಂಡಪ್ಪ ಪು.ತಿ. ನರಸಿಂಹಾಚಾರ್, ಆನಂದ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದ ಅನೇಕರ ಪುಸ್ತಕಗಳು ಕಾವ್ಯಾಲಯದಲ್ಲೇ ಮೊದಲು

ಪ್ರಕಟವಾದವು. ಮುದ್ರಣ ವಿನ್ಯಾಸಗಳಲ್ಲಿ ಚಿದಂಬರಂ ಒಂದು ಬಗೆಯ 'ಕನ್ಸರ್‌ವೇಟಿವ್' ಧೋರಣೆಯನ್ನೇ ಅನುಸರಿಸಿದರೆಂದು ಹೇಳಬೇಕು, ಪುಸ್ತಕಗಳಿಗೆ ಮುಖಚಿತ್ರ ಉಡಿಸುವ ಸಂಪ್ರದಾಯವನ್ನು ಕಾವ್ಯಾಲಯ ಪ್ರಾರಂಭಿಸಿದ್ದು ಈಚಿನ ವರ್ಷಗಳಲ್ಲಿ, ಮೇಲ್ಮಟ್ಟದ ಅಭಿರುಚಿ, ನೇರವಾದ ವ್ಯವಹಾರ ಚಿದಂಬರಂ ಅವರ ವೈಶಿಷ್ಟ್ಯ. ''ಯಾವ ಪುಸ್ತಕಗಳನ್ನು ನಾನು ಸುಮಾರು ಎಂದು ಅಚ್ಚು ಮಾಡಿಸಿದೆನೊ ಅವು ಬೇಗನೆ ಮುಗಿದು ಹೋಗಿದೆ. ಅದೇ ಉತ್ತಮದೆಂದುಕೊಂಡ ಪುಸ್ತಕಗಳು ವರುಷಗಳೇ ಕಳೆದರೂ ಬೀರುವಿನಿಂದ ಜಾಗ ತೆರವು ಮಾಡಿಲ್ಲ'' ಎಂದು ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ಇದು ಆದರ್ಶ ವಾಸ್ತವತೆಗಳ ಒಂದು ಪ್ರಸಂಗ, ಇದರಿಂದ ಎದೆಗುಂದದೆ ತಮ್ಮ ಕೆಲಸವನ್ನು ಮುಂದುವರಿಸಿಕೊಂಡು ಬಂದದ್ದು ಅವರ ಹೆಚ್ಚುಗಾರಿಕೆ.

ಈಚಿನ ಕೆಲವು ವರ್ಷಗಳಲ್ಲಿ ಚಿದಂಬರಂ ಅವರ ಆರೋಗ್ಯ ತೀರ ಕ್ಷೀಣಿಸಿತ್ತು. ಆದರೂ ಅವರು ತಮ್ಮ ದೈನಂದಿನ ಕೆಲಸಗಳಲ್ಲಿ ಯಾವುದನ್ನೂ ಕಡಿಮೆ ಮಾಡಿರಲಿಲ್ಲ, ಗೋವಿಂದ ಪೈ ಅವರ ಲೇಖನಗಳ ಮಹಾಸಂಪುಟವೊಂದರ ಪ್ರಕಟಣೆಯಲ್ಲಿ, ಅವರು ತಮ್ಮ ಕೊನೆಯ ದಿನಗಳಲ್ಲಿ ಮಗ್ನರಾಗಿದ್ದರು. ಇದು ತಮ್ಮ ಬದುಕಿನ ಕೊನೆಯ ಕೆಲಸ ಎಂದೂ ಅವರು ಹತ್ತು ಹದಿನೈದಗು ದಿನಗಳ ಹಿಂದೆ ನನ್ನೊಡನೆ ಹೇಳಿದ್ದರು. ಆ ಕೆಲಸ ತುಂಬ ಮಹತ್ವದ್ದೆಂದೂ ಕಾವ್ಯಾಲಯದ ಪ್ರಕಟಣೆಗಳಲ್ಲಿ ಕಿರೀಟಪ್ರಾಯವಾದದ್ದೆಂದೂ ಅವರು ಭಾವಿಸಿದ್ದರು. ಆ ಪುಸ್ತಕದ ಮೊದಲ ಒಂದು ಫಾರಂಮ್ಮಿನ ಕರಡನ್ನು ನೋಡಿದ್ದಷ್ಟೇ ಅವರ ಪಾಲಿನ ಅದೃಷ್ಟವಾಯಿತು, ಈ ಬೃಹದ್ಗ್ರಂಥ ಗೋವಿಂದ ಪೈ ಅವರದಷ್ಟೇ ಅಲ್ಲ, ಚಿದಂಬರಂ ಅವರದೂ ಆಗಿದೆ.

ನನಗೂ ಚಿದಂಬರಂ ಅವರಿಗೂ ವಯಸ್ಸಿನ ಅಂತರ ತುಂಬ. ಆದರೂ ಕಳೆದ ಕಾಲುಶತಮಾನದ ಅವಧಿಯಲ್ಲಿ ಅವರು ನನ್ನನ್ನು ಕಂಡ ರೀತಿ, ತೋರಿದ ಪ್ರೀತಿ ನಾನು ಮರೆಯುವಂತದಲ್ಲ, ಆ ದಿನ ಮುಂಜಾನೆ ಅವರ ಮಗ ಕೃಷ್ಣಮೂರ್ತಿ ಟೆಲಿಫೋನಿನಲ್ಲಿ ನನಗೆ ಅವರ ಸಾವಿನ ಸುದ್ದಿಯನ್ನು ಹೇಳುತ್ತ ''ನೆನ್ನೆ ರಾತ್ರಿ ಮಲಗುವ ಮೊದಲು ನಾಳೆ ಹಾ.ಮಾ. ನಾಯಕರನ್ನು ನೋಡಬೇಕು ಎಂದು ಹೇಳಿಕೊಳ್ಳುತ್ತಿದ್ದರು ಸಾರ್'' ಎಂದರು. ಸ್ವಲ್ಪ ಹೊತ್ತಿಗೆ ನಾನು ಅವರ ಮನೆಗೆ ಹೋದೆ. ಕೃಷ್ಣಮೂರ್ತಿ ಒಂದು ಪುಸ್ತಕದ ಕಟ್ಟನ್ನು ನನ್ನ ಕೈಗಿಟ್ಟರು. ''ಇವತ್ತು ನಿಮ್ಮನ್ನು ನೋಡಿ ನಿಮಗೆ ಕೊಡಲು ಸಿದ್ಧಪಡಿಸಿದ್ದರು'' ಎಂದರು. ನನಗೆ ಕಣ್ಣು ಮಂಜಾಯಿತು. ಕಟ್ಟನ್ನು ಬಿಚ್ಚಿದೆ. ಮೂರು ಪುಸ್ತಕಗಳು. ಎರಡು ಕನ್ನಡ ಪುಸ್ತಕಗಳು, ಮರು ಮುದ್ರಣ. ಮತ್ತೊಂದು ಕಾವ್ಯಾಲಯದ ತೀರ ಈಚಿನ ಪ್ರಕಟಣೆ – ಡಾ. ರಾಘವನ್ ಕಾಳಿದಾಸನನ್ನು ಕುರಿತು ಬರೆದ ಇಂಗ್ಲಿಷ್ ಲೇಖನಗಳ ಸಂಗ್ರಹ. ಮೂರೂ ಪುಸ್ತಕಗಳಲ್ಲಿ ಚಿದಂಬರಂ ಬರೆದಿದ್ದರು, ಸ್ವಂತ ಅಕ್ಷರಗಳಲ್ಲಿ – ''ಡಾ॥ ಹಾ.ಮಾ. ನಾಯಕ

ಅವರಿಗೆ, ವಿಶ್ವಾಸಪೂರ್ವಕವಾಗಿ ಕೆ. ಚಿದಂಬರಂ.'' ಅದನ್ನು ನೋಡುತ್ತಲೆ ಕಣ್ಣಿನಲ್ಲಿ ನೀರುಕ್ಕಿತು, ಕೃಷ್ಣಮೂರ್ತಿ ಹೇಳಿದರು : ''ಇದು ನಮ್ಮ ತಂದೆಯ ಕೊನೆಯ ಬರಹ''. ಕೊನೆಯ ಬರಹ ಇರಬಹುದು. ಆದರೆ ಇಂಥ ಬರಹಕ್ಕೆ ಕೊನೆ ಎಂಬುದಿಲ್ಲ!

ಎಲ್ಲದಕ್ಕೂ ಒಂದು ಚರಿತ್ರೆ ಇರುತ್ತದೆ. ಕನ್ನಡ ಪ್ರಕಾಶನಕ್ಕೂ ಒಂದು ಚರಿತ್ರೆ ಇರುತ್ತದೆ. ಆ ಚರಿತ್ರೆಯಲ್ಲಿ ಚಿದಂಬರಂ ಅವರನ್ನು ಕುರಿತೇ ಒಂದು ಅಧ್ಯಾಯ ಇರುತ್ತದೆ.

(ಮೂಲ ಸಂಪರ್ಕ : ಲೇ। ಹಾ.ಮಾ. ನಾಯಕ, ಪ್ರ: ಮಿತ್ರ ಪ್ರಕಾಶನ, ಮೈಸೂರು, ೯೮೨ ಪು: ೨೨೫-೨೨೯)

■

ಕೂಡಲಿ ಚಿದಂಬರಂ ರ ಕೆಲವು ಛಾಯಾಚಿತ್ರಗಳು




'ಕೂಡಲಿ ಚಿದಂಬರಂ'




ಕೊಡಲಿ ಚಿದಂಬರಂ – ಶೇಷಮ್ಮ



ಕೌಟುಂಬಿಕ ಸಮಾರಂಭದಲ್ಲಿ ಡಿ.ವಿ. ಗುಂಡಪ್ಪನವರು.



ಕುಳಿತಿರುವವರು : ೧. ಕೂಡಲಿ ಚಿದಂಬರಂ



ದ.ರಾ. ಬೇಂದ್ರೆ, ಕೆ.ವಿ. ಪುಟ್ಟಪ್ಪ ಕೂಡಲಿ ಚಿದಂಬರಂ.



'ಮೈಸೂರು ಡೈರಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಶ್ರೀಮತಿ ಶೇಷಮ್ಮ ಚಿದಂಬರಂ, ಹಾ.ಮಾ. ನಾಯಕ ಮತ್ತಿತರರು.



'ಶಿವಮೊಗ್ಗ ಕರ್ನಾಟಕ ಸಂಘ' ದಿಂದ ಕೂಡಲಿ ಚಿದಂಬರಂ ನೂರರ ನೆನಪು ಸಮಾರಂಭ.





'ಎವರೆಸ್ಟ್ ವೀರ' ಪುಸ್ತಕದ ಮುಖಪುಟ




'ಎವರೆಸ್ಟ್ ವೀರ' ಕೃತಿಗೆ ರಾಷ್ಟ್ರೀಯ ಪುರಸ್ಕಾರ



ಕಲಿಜ್ಯಲಯು ಲಾಛ್ನ




'ವಿಚಾರ ವಾಹಿನಿ'



'ವಿಚಾರ ವಾಹಿನಿ'